ಶಿವಮೊಗ್ಗ
ಗುರುವಾರ, 2 ಜುಲೈ 2026
ಸಂಪುಟ 17, ಸಂಚಿಕೆ 69, ಪುಟಗಳು 12
■ ಬೆಂಗಳೂರು ■ ಮಂಗಳೂರು
■ ಶಿವಮೊಗ್ಗ ■ ಹುಬ್ಬಳ್ಳಿ
RNI: KAR KAN 2010/64051 ₹4
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

ಬಡ, ದುರ್ಬಲ ವರ್ಗದ ಸಬಲೀಕರಣ | 02
ಶಾಸಕರಿಗೆ ₹50 ಕೋಟಿ ಆಮಿಷ? | 02
ವಾಟ್ಸ್‌ಆ್ಯಪ್ ಬಳಕೆದಾರ ಹೆಸರಿಗೆ ಕೇಂದ್ರದಿಂದ ತಡೆ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಉತ್ತರಾಷಾಢ

ದಿನದ ಮಾತು

ಮಿತ್ರರಿಲ್ಲದ ಮಾನವ ಬಲಗೈ ಇಲ್ಲದ ಎಡಗೈಯಂತೆ.
▲ ನಾಣ್ನುಡಿ

ಕಿರುಸುದ್ದಿ

ವಾಣಿಜ್ಯ ಎಲ್ಪಿಜಿ ಸಿಲಿಂಡರ್ ದರ 183.50 ರೂ. ಇಳಿಕೆ

• **ಹೊಸದಿಲ್ಲಿ:** ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಬಳಕೆಯಾಗುವ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ 183.50 ರೂ. ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 19 ಕೆಜಿ ವಾಣಿಜ್ಯ ಎಲ್‌ಪಿಜಿ ದರ 3,021 ರೂ.ಗೆ ಇಳಿದಿದೆ. ಈ ವರ್ಷ ಇದೇ ಮೊದಲ ಬಾರಿಗೆ 19 ಕೆಜಿ ಎಲ್‌ಪಿಜಿ ದರ ಇಳಿಕೆಯಾಗಿದೆ. ಜಾಗತಿಕ ತೈಲ ಬೆಲೆ ಕುಸಿತದಿಂದಾಗಿ ದರ ಇಳಿಸಲಾಗಿದೆ.

• ಪುಟ 2

ನರೇಗಲ್ ಗಲಾಟೆ: ಮೂವರ ಬಂಧನ

• **ಹಾವೇರಿ:** ಹಾನಗಲ್ಲ ತಾಲೂಕು ನರೇಗಲ್ ಗ್ರಾಮದಲ್ಲಿ ಕಾರ ಹುಣ್ಣಿಮೆ ಸಂದರ್ಭದಲ್ಲಿ ಕುಡುಗೋಲಿನಿಂದ ಕೈ ಕತ್ತರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಲಾಗಿದೆ. ಖ್ವಾಜಾ ಗೌಂಡಿ, ಈತನ ಜತೆಗೆ ಮುನಾಫ್ ಹಾಗೂ ಹಜರತ್ ಅಲಿ ಎಂಬುವರನ್ನು ಬಂಧಿಸಲಾಗಿದೆ. ಖಾಜಾ ಜತೆಗೆ ಇವರು ಇದ್ದರು ಎಂಬ ಆರೋಪದ ಮೇಲೆ ಬಂಧಿಸಲಾಗಿದೆ ಎಂದು ಎಸ್‌ಪಿ ಯಶೋಧಾ ತಿಳಿಸಿದ್ದಾರೆ.

ಜಿಎಸ್‌ಟಿ ಸಂಗ್ರಹ ಕಳೆದ ಜೂನ್‌ಗಿಂತ 14% ಏರಿಕೆ


• ಪುಟ 2

ರಸ್ತೆ ಅಪಘಾತ: ಎಂಟು ಮಂದಿ ಸಜೀವ ದಹನ

• ಪುಟ 2

ವಿಬಿ ಜಿ ರಾಮ್ ಜಿ ಜಾರಿ | 125 ದಿನ ಉದ್ಯೋಗ ಖಾತರಿ

ರಾಜ್ಯದಲ್ಲಿ ₹382 ಕೂಲಿ



• **ಹೊಸದಿಲ್ಲಿ:** ಗ್ರಾಮೀಣ ಕಾರ್ಮಿಕರ ಜೀವನೋಪಾಯ ಬಲಪಡಿಸುವ ಮಹತ್ವದ ಕ್ರಮವಾಗಿ ಕೇಂದ್ರ ಸರಕಾರವು ವಿಕಸಿತ ಭಾರತ ಉದ್ಯೋಗ ಮತ್ತು ಜೀವನೋಪಾಯ ಖಾತರಿ ಅಭಿಯಾನ (ಗ್ರಾಮೀಣ)ವಿಬಿ ಜಿ ರಾಮ್ ಜಿ ಕಾಯ್ದೆ ಅನ್ವಯ ಪರಿಷ್ಕೃತ ದಿನಗೂಲಿ ದರಗಳನ್ನು ಪ್ರಕಟಿಸಿದೆ.

ಹೊಸ ದರಗಳು ಬುಧವಾರದಿಂದಲೇ ಜಾರಿಗೆ ಬಂದಿದ್ದು, ದೇಶದ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ದಿನಗೂಲಿ 300 ರೂ.ಗಿಂತ ಕಡಿಮೆ ಇರುವುದಿಲ್ಲ, ಹಾಗೆಯೇ, ಕರ್ನಾಟಕದಲ್ಲಿ ದಿನಗೂಲಿ 382 ರೂಪಾಯಿ ಮೀರಲಿದೆ. ಪರಿಷ್ಕರಣೆಯಿಂದ ದೇಶಾದ್ಯಂತ ಗ್ರಾಮೀಣ ಉದ್ಯೋಗ ಯೋಜನೆಯ ಸರಾಸರಿ ವೇತನ ಶೇ.10ಕ್ಕೂ ಹೆಚ್ಚು ಏರಿಕೆಯಾಗಿದೆ.

ಹಿಂದಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ದೇಶದ ಸರಾಸರಿ ದಿನಗೂಲಿ 298.80 ರೂ. ಇತ್ತು. ಹೊಸ ಕಾಯ್ದೆಯಲ್ಲಿ ಇದು 327.40 ರೂ.ಗೆ ಏರಿಕೆಯಾಗಿದೆ. ಅಂದರೆ ಪ್ರತಿ ಕಾರ್ಮಿಕನ ದಿನಗೂಲಿಯಲ್ಲಿ ಸರಾಸರಿ 28.60 ರೂ. ಹೆಚ್ಚಳವಾಗಿದೆ.

ಕಡಿಮೆ ವೇತನದಲ್ಲಿದ್ದ ರಾಜ್ಯಗಳಿಗೆ ಹೆಚ್ಚು ಲಾಭ

ಈವರೆಗೆ ಕಡಿಮೆ ದಿನಗೂಲಿ ಪಡೆಯುತ್ತಿದ್ದ ರಾಜ್ಯಗಳಿಗೆ ಹೆಚ್ಚಿನ ಪ್ರಮಾಣದ ವೇತನ ನೀಡಲಾಗಿದೆ. ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಅಸ್ಸಾಂ, ಅರುಣಾಚಲ ಪ್ರದೇಶ, ಹಿಮಾಚಲ ಪ್ರದೇಶಗಳಲ್ಲಿ ಶೇ.15ರಿಂದ ಶೇ.25ರಷ್ಟು ಹೆಚ್ಚಳವಾಗಲಿದೆ. ಅರುಣಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್‌ನಲ್ಲಿ ಅತ್ಯಧಿಕ ಶೇ.24.5ರಷ್ಟು ವೇತನ ಏರಿಕೆಯಾಗಿದೆ. ಉತ್ತರಾಖಂಡ, ತ್ರಿಪುರಾ, ಛತ್ತೀಸ್‌ಗಢ, ಮಧ್ಯ ಪ್ರದೇಶ, ಒಡಿಶಾದ ಕಾರ್ಮಿಕರಿಗೂ ಗಣನೀಯ ಹೆಚ್ಚಳ ದೊರೆಯಲಿದೆ. ಹಿಂದಿನ ವ್ಯವಸ್ಥೆಯಲ್ಲಿ ಕೆಲವು ರಾಜ್ಯಗಳ ದಿನಗೂಲಿ 241 ರೂ. ನಷ್ಟಿತ್ತು. ಈಗ ಅಂತಹ ಎಲ್ಲ ರಾಜ್ಯಗಳು 300 ರೂ. ಕನಿಷ್ಠ ವೇತನದ ವ್ಯಾಪ್ತಿಗೆ ಬಂದಿವೆ. ಇದರಿಂದ 21 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ಆಡಳಿತ ಘಟಕಗಳ ಕಾರ್ಮಿಕರಿಗೆ ನೇರ ಪ್ರಯೋಜನವಾಗಲಿದೆ.

ಹೆಚ್ಚಿದ ದಿನಗೂಲಿ

ಈಗಾಗಲೇ ಹೆಚ್ಚಿನ ವೇತನ ನೀಡುತ್ತಿದ್ದ ಕರ್ನಾಟಕ, ಕೇರಳ, ಹರ್ಯಾಣ ಮತ್ತು ಪಂಜಾಬ್ ರಾಜ್ಯಗಳಲ್ಲೂ ದಿನಗೂಲಿ ಪರಿಷ್ಕರಿಸಲಾಗಿದೆ. ಈ ರಾಜ್ಯಗಳಲ್ಲಿ ದಿನಗೂಲಿ 360 ರೂ.ನಿಂದ 409 ರೂ.ವರೆಗಿನ ವ್ಯಾಪ್ತಿಯಲ್ಲಿರಲಿದೆ. ಹರ್ಯಾಣದಲ್ಲಿ 409 ರೂ., ಗೋವಾದಲ್ಲಿ 406 ರೂ. ಮತ್ತು ಕೇರಳದಲ್ಲಿ 401 ರೂ. ದಿನಗೂಲಿ ನಿಗದಿಯಾಗಿದೆ. ಸಿಕ್ಕಿಂನ ಎತ್ತರ ಪ್ರದೇಶಗಳ ಗ್ರಾಮ ಪಂಚಾಯಿತಿಗಳಲ್ಲಿ ದೇಶದಲ್ಲೇ ಅತ್ಯಧಿಕ 450 ರೂ. ದಿನಗೂಲಿ ದೊರೆಯಲಿದೆ. ಈ ಹಿಂದೆ ಕೇವಲ ಒಂದು ವೇತನ ವಲಯದಲ್ಲಿ ಮಾತ್ರ ದಿನಗೂಲಿ 400 ರೂ. ಮೀರಿತ್ತು. ಹೊಸ ಪರಿಷ್ಕರಣೆಯ ಬಳಿಕ ನಾಲ್ಕು ವೇತನ ವಲಯಗಳಲ್ಲಿ 400 ರೂ.ಗಿಂತ ಹೆಚ್ಚಿನ ಕೂಲಿ ದೊರೆಯಲಿದೆ.

ಅಗತ್ಯ ಇರುವವರಿಗೆ ಹೆಚ್ಚಿನ ನೆರವು

ಪ್ರಧಾನಿ ಮೋದಿ ನೇತೃತ್ವದ ಸರಕಾರವು ಅಭಿವೃದ್ಧಿಯ ಪ್ರಯೋಜನಗಳನ್ನು ಪ್ರತಿ ಬಡ



ಕುಟುಂಬಕ್ಕೂ ತಲುಪಿಸಲು ಬದ್ಧವಾಗಿದೆ. ಹಿಂದೆ ಕಡಿಮೆ ವೇತನವಿದ್ದ ರಾಜ್ಯಗಳಲ್ಲಿ ಹೆಚ್ಚಳ ಮಾಡಲಾಗಿದ್ದು, ಇದರಿಂದ ಗ್ರಾಮೀಣ ಜೀವನೋಪಾಯ ಮತ್ತು ಖರೀದಿ ಸಾಮರ್ಥ್ಯ ಬಲಗೊಳ್ಳಲಿದೆ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ವೈಜ್ಞಾನಿಕ ನೀತಿ ರೂಪಿಸಲು ಗಣಿ ಇಲಾಖೆ ಅಧಿಕಾರಿಗಳಿಗೆ ಸಿಎಂ ಶಿವಕುಮಾರ್ ಸೂಚನೆ

ಹರಾಜಿನಲ್ಲಿ ಪಡೆದ ಜಾಗ ಬಳಕೆಗೆ ನೀತಿ



• **ಬೆಂಗಳೂರು:** ಹರಾಜಿನ ಮೂಲಕ ಜಾಗ ಪಡೆದು ವರ್ಷಗಟ್ಟಲೆ ಗಣಿಗಾರಿಕೆ ಆರಂಭಿಸದೆ ಜಾಗ ಇಟ್ಟುಕೊಂಡು ಕುಳಿತವರ ವಿರುದ್ಧ ಏನು ಕ್ರಮ ಕೈಗೊಂಡಿದ್ದೀರಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಹರಾಜು ನಡೆದು ಕನಿಷ್ಠ ಎಷ್ಟು ಅವಧಿಯೊಳಗೆ ಗಣಿಗಾರಿಕೆ ಆರಂಭಿಸಬೇಕು ಎನ್ನುವ ಬಗ್ಗೆ ವೈಜ್ಞಾನಿಕ ನಿಯಮ ರೂಪಿಸಲು ಅಧಿಕಾರಿಗಳಿಗೆ ಸೂಚಿಸಿದರು. ಬುಧವಾರ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಗಣಿ, ಭೂವಿಜ್ಞಾನ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸ್ಪಷ್ಟ ಸೂಚನೆಗಳನ್ನು ನೀಡಿದರು.

ರಾಜ್ಯದಲ್ಲಿ ಗಣಿಗಾರಿಕೆಗೆ ಭೂಮಿ ಪಡೆದವರು ಎಷ್ಟಿದ್ದಾರೆ? ಲೀಸ್ ಪಡೆದ ಪ್ರಕರಣಗಳ ಸ್ಥಿತಿ ಗತಿ ಏನಿದೆ? ಗಣಿಗಾರಿಕೆ ಆರಂಭಿಸದಿರುವವರ ಪಟ್ಟಿ, ಅದಕ್ಕೆ ಕಾರಣಗಳೇನು, ಅರಣ್ಯ ಅನುಮತಿ ಬಾಕಿ ಇರುವ ಪ್ರಕರಣಗಳೆಷ್ಟು, ಬಾಕಿ ಉಳಿಯಲು ಕಾರಣಗಳೇನು ಎನ್ನುವುದೂ ಸೇರಿ ಸಮಗ್ರ ವರದಿ ಸಲ್ಲಿಸುವಂತೆ ಗಣಿ ಇಲಾಖೆಯ ಕಾರ್ಯದರ್ಶಿ ರೋಹಿಣಿ ಸಿಂದೂರಿ ಅವರಿಗೆ ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ಹೊರ ರಾಜ್ಯದ ಗಣಿ ನೀತಿ ಬಗ್ಗೆ ಅಧ್ಯಯನ ನಡೆಸಿ: ರಾಜ್ಯದ ಗಣಿ ನೀತಿ ಮತ್ತು ಇತರೆ ರಾಜ್ಯಗಳಲ್ಲಿ ಇರುವ ಗಣಿ ನೀತಿ, ನಿಯಮ ಮತ್ತು ಕಾನೂನುಗಳನ್ನು ಸಮಗ್ರವಾಗಿ ಅಧ್ಯಯನ ನಡೆಸಿ, ಹರಾಜು ನಡೆದು ಎಷ್ಟು ಕನಿಷ್ಠ ಅವಧಿಯೊಳಗೆ ಗಣಿಗಾರಿಕೆ ಆರಂಭಿಸಬೇಕು ಎನ್ನುವ ಬಗ್ಗೆ ನಿಯಮ ರೂಪಿಸಿ. ➡ ಪುಟ 9

ಮುಖ್ಯಮಂತ್ರಿಗಳ ನಿರ್ದೇಶನಗಳೇನು?

- ಪೂರ್ವಾನ್ವಯವಾದರೆ ಆದಾಯದ ಪರಿಣಾಮಗಳು
- ಹಿಂದಿನ ದಿನಾಂಕದಿಂದ ಜಾರಿಗೆ ಬಂದಲ್ಲಿ ಉಂಟಾಗುವ ಆದಾಯದ ಪರಿಣಾಮಗಳು
- ಪೂರ್ವಾನ್ವಯವಾಗಿ ಜಾರಿಗೊಳಿಸಿದರೆ ಉಂಟಾಗುವ ಕಂದಾಯದ ಪರಿಣಾಮಗಳು
- ಈ ಪ್ರಸ್ತಾವನೆಯು ಪೂರ್ವಾನ್ವಯವಾಗಿ ಜಾರಿಯಾದರೆ ಸರ್ಕಾರದ ಆದಾಯದ ಪರಿಣಾಮ
- ಪೂರ್ವಾನ್ವಯ ಆದಾಯದ ಪರಿಣಾಮಗಳನ್ನು ಮೌಲ್ಯಮಾಪನ ಮಾಡಿ.
- ಹಿಂದಿನ ಅವಧಿಗೆ ಅನ್ವಯ ಆಗುವ ಕಂದಾಯದ ಪರಿಣಾಮಗಳನ್ನು ಪರಿಶೀಲಿಸಿ

ದತ್ತಾಂಶ ಸಂಗ್ರಹಿಸಿ

• ಪುಟ 9

30 ದಿನ ಬಂಧನದಲ್ಲಿದ್ದರೆ ಹುದ್ದೆಯಿಂದ ತೆರವು

ಜೈಲುವಾಸಿ ಸಿಎಂ, ಪಿಎಂ ಪದಚ್ಯುತಿಗೆ ಶೀಘ್ರ ಕಾಯ್ದೆ

• **ಹೊಸದಿಲ್ಲಿ:** ಗಂಭೀರ ಅಪರಾಧ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ಸತತ 30 ದಿನ ಪೊಲೀಸ್ ಅಥವಾ ನ್ಯಾಯಾಂಗ ಕಸ್ಟಡಿಯಲ್ಲಿರುವ ಪ್ರಧಾನಿ, ಮುಖ್ಯಮಂತ್ರಿ ಅಥವಾ ಸಚಿವರನ್ನು ಹುದ್ದೆಯಿಂದ ತೆರವುಗೊಳಿಸಲು ಅವಕಾಶ ಕಲ್ಪಿಸುವ ಸಂವಿಧಾನದ ವಿವಾದಿತ 130ನೇ ತಿದ್ದುಪಡಿ ಮಸೂದೆ ಕುರಿತಂತೆ ಸಂಸತ್ತಿನ ಜಂಟಿ ಸಮಿತಿ ಜು.17ರಂದು ತನ್ನ ವರದಿ ಅಂಗೀಕರಿಸುವ ಸಾಧ್ಯತೆ ಇದೆ.

ಪ್ರಧಾನಿ, ಮುಖ್ಯಮಂತ್ರಿ, ಇತರ ಸಚಿವರು ಗಂಭೀರ ಅಪರಾಧ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ಸತತ 30 ದಿನ ಕಸ್ಟಡಿಯಲ್ಲಿದ್ದರೆ, ಅವರನ್ನು ಸ್ವಯಂಚಾಲಿತವಾಗಿ ಅಧಿಕಾರದಿಂದ ಕೆಳಗಿಳಿಸುವ ಪ್ರಮುಖ ನಿಯಮವನ್ನು ಸಮಿತಿಯ ವರದಿಯಲ್ಲಿ ಉಳಿಸಿಕೊಳ್ಳುವ ನಿರೀಕ್ಷೆಯಿದೆ. ➡ ಪುಟ 9

ರಾಜಕೀಯ ದುರ್ಬಳಕೆ ತಡೆಗೆ ಈ ಕ್ರಮ



ಮಸೂದೆಯಲ್ಲಿ ಏನಿದೆ? • ಪುಟ 9

ಹಣ ನಿರ್ವಹಣೆಯಲ್ಲಿ ಲೋಪವಾದರೆ ಕ್ರಮ

ಹುಂಡಿ ಹಣ ದುರ್ಬಳಕೆಗೆ ಅವಕಾಶ ನೀಡಲ್ಲ: ಡಿಸಿಎಂ



• **ಬೆಳಗಾವಿ:** ರಾಜ್ಯದ ಯಾವುದೇ ದೇವಾಲಯದಲ್ಲಿ ಭಕ್ತರ ಕಾಣಿಕೆ ಹಾಗೂ ಹುಂಡಿ ಹಣ ದುರುಪಯೋಗವಾಗಲು ಅವಕಾಶ ನೀಡುವುದಿಲ್ಲ, ಹಣಕಾಸು ನಿರ್ವಹಣೆಯಲ್ಲಿ ಲೋಪ ಕಂಡುಬಂದರೆ ಸಂಬಂಧಪಟ್ಟವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಡಿಸಿಎಂ, ಕಂದಾಯ, ಮುಜರಾಯಿ, ಕ್ರೀಡಾ ಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಕೆ ನೀಡಿದರು. ಬುಧವಾರ ಸುವರ್ಣ ಸೌಧದಲ್ಲಿ ಮಾತನಾಡಿದ ಅವರು, ಅಯೋಧ್ಯೆಯಲ್ಲಿ ಇತ್ತೀಚೆಗೆ ನಡೆದ ಘಟನೆ ಧಾರ್ಮಿಕ ದತ್ತಿ ಇಲಾಖೆಗೆ ಎಚ್ಚರಿಕೆಯ ಗಂಟೆಯಾಗಿದ್ದು, ಹೆಚ್ಚಿನ ಆದಾಯ ಹೊಂದಿರುವ 'ಎ' ಮತ್ತು 'ಬಿ' ವರ್ಗದ ದೇವಾಲಯಗಳಲ್ಲಿ ಹಣಕಾಸು ವ್ಯವಹಾರ, ಹುಂಡಿ ಎಣಿಕೆ ಹಾಗೂ ವೆಚ್ಚದ ಮೇಲೆ ವಿಶೇಷ ನಿಗಾ ವಹಿಸಲಾಗುವುದು ಎಂದು ತಿಳಿಸಿದರು. ಹುಂಡಿ ತೆರೆಯುವುದು, ಹಣ ಎಣಿಕೆ, ಬ್ಯಾಂಕ್‌ಗೆ ಜಮೆ ಮಾಡುವುದು ಹಾಗೂ ವೆಚ್ಚದ ಲೆಕ್ಕಪತ್ರ ನಿರ್ವಹಣೆಗೆ ಏಕರೂಪ ಪ್ರಮಾಣಿತ ಕಾರ್ಯಾಚರಣಾ ವಿಧಾನ (ಎಸ್‌ಒಪಿ) ರೂಪಿಸಲಾಗುವುದು. ➡ ಪುಟ 9


ತಡೆಗೋಡೆ ಕುಸಿದು ಮೂವರ ಸಾವು

ಕರಾವಳಿಯಲ್ಲಿ ಮಳೆ ಅಬ್ಬರ

• **ಮಂಗಳೂರು:** ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಸೇರಿದಂತೆ ಕಳೆದ ಮೂರು ದಿನಗಳಿಂದ ಕರಾವಳಿಯಲ್ಲಿ ಭಾರೀ ಮಳೆಯಾಗುತ್ತಿದ್ದು, ಅಲ್ಲಲ್ಲಿ ಪ್ರಾಕೃತಿಕ ವಿಕೋಪಗಳು ಸಂಭವಿಸುತ್ತಿವೆ. ಮಂಗಳೂರಿನ ನಾಗುರಿ ಎಂಬಲ್ಲಿ ಬುಧವಾರ ಮುಂಜಾನೆ ಬೃಹತ್ ತಡೆಗೋಡೆಯೊಂದು ಮನೆಗಳ ಮೇಲೆ ಕುಸಿದು ಬಿದ್ದ ಪರಿಣಾಮ ಇಬ್ಬರು ಮಕ್ಕಳು ಸೇರಿದಂತೆ ಮೂರು ಮಂದಿ ದಾರುಣವಾಗಿ ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ಗಾಯಗೊಂಡಿರುವ ಮೂರು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

• ವಿವರ ಪುಟ 3

ಸಂಪ್ರದಾಯ ಇಲ್ಲದ ಮದುವೆ ಅಸಿಂಧು: ಹೈ



• **ಅಹಮದಾಬಾದ್:** 'ಸಪ್ತಪದಿ'ಯಂತಹ ಅಗತ್ಯ ಸಾಂಪ್ರದಾಯಿಕ ವಿಧಿ ವಿಧಾನಗಳು ಮತ್ತು ಆಚರಣೆಗಳು ನಡೆಯದಿದ್ದರೆ ಕೇವಲ ಕಾನೂನುಬದ್ಧ ನೋಂದಣಿಯೊಂದೇ ಹಿಂದು ವಿವಾಹವನ್ನು ಸಿಂಧುಗೊಳಿಸಲು ಸಾಧ್ಯವಿಲ್ಲ ಎಂದು ಗುಜರಾತ್ ಹೈಕೋರ್ಟ್ ತೀರ್ಪು ನೀಡಿದೆ. ➡ ಪುಟ 9

ಐಸಿಸ್ ಉಗ್ರ ನೆಲೆಗಳ ಮೇಲೆ ವಾಯುದಾಳಿ

• **ಕಾಬೂಲ್:** ಪ್ರಾದೇಶಿಕ ಉದ್ವಿಗ್ನತೆ ತೀವ್ರಗೊಂಡಿರುವ ಹಿನ್ನೆಲೆ ಅಫ್ಘಾನ್ ತಾಲಿಬಾನ್, ಪಾಕಿಸ್ತಾನದ ಬಲೂಚಿಸ್ತಾನ್, ಖೈಬರ್ ಪಖ್ತುನ್ಖ್ವಾ ಪ್ರಾಂತ್ಯಗಳಲ್ಲಿರುವ ಐಸಿಸ್ ಉಗ್ರ ನೆಲೆಗಳ ಮೇಲೆ ಬೃಹತ್ ನಿಖರ ವಾಯುದಾಳಿಗಳನ್ನು ನಡೆಸಿದೆ.

• ವಿವರ ಪುಟ 2

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,40,000(2,35,000) ಅಪರಂಜಿ ಚಿನ್ನ: 1,40,780(1,42,040) ಆಭರಣ ಚಿನ್ನ: 1,29,050(1,31,200) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ,(ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ ಬಿಎಸ್ಇ 76,922(443↑) ಎನ್ಎಸ್ಇ 24,005(140↑)
$1 = ₹94.67

54.68 ಲಕ್ಷ ಎಸ್‌ಐಆರ್ ಅರ್ಜಿ ವಿತರಣೆ

• **ಬೆಂಗಳೂರು:** ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯವು ಅತ್ಯಂತ ಚುರುಕಿನಿಂದ ಸಾಗುತ್ತಿದ್ದು, ಜುಲೈ 1 ರ ಸಂಜೆ 6 ಗಂಟೆಯ ವೇಳೆಗೆ ಒಟ್ಟು 54.68 ಲಕ್ಷ ಗಣತಿ ನಮೂನೆಗಳನ್ನು (ಎನ್ಯುಮರೇಷನ್ ಫಾರಂ) ವಿತರಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಎಸ್‌ಐಆರ್ ಪ್ರಕ್ರಿಯೆಗೆ ಒಳಪಡುವ 5,54,32,314 ಕೋಟಿ ಮತದಾರರಲ್ಲಿ ಜು.1ರವರೆಗೆ 54,68,607 ಗಣತಿ ನಮೂನೆಗಳನ್ನು ವಿತರಿಸಲಾಗಿದ್ದು, ಒಟ್ಟಾರೆ ರಾಜ್ಯದಲ್ಲಿಶೇ.9.87ರಷ್ಟುಪ್ರಗತಿಕಂಡಿದೆ.2,38,453(ಶೇ. 0.43) ನಮೂನೆಗಳು ಡಿಜಿಟಲೀಕರಣಗೊಳಿಸಲಾಗಿದೆ. ಆನ್‌ಲೈನ್ ಮೂಲಕ 26,213(ಶೇ. 0.05) ನಮೂನೆಗಳು ಸಲ್ಲಿಕೆಯಾಗಿವೆ ಎಂದು ಆಯೋಗ ತಿಳಿಸಿದೆ. ಮನೆ-ಮನೆ ಸಮೀಕ್ಷೆ ಹಾಗೂ ಕ್ಷೇತ್ರ ಪರಿಶೀಲನೆಯ ಸಂದರ್ಭದಲ್ಲಿ ಒಟ್ಟು 2,565 ಮತದಾರರನ್ನು ಗೈರುಹಾಜರು, ಸ್ಥಳಾಂತರ, ಮರಣ, ನಕಲು ಮತ್ತು ಇತರರು ಅಡಿಯಲ್ಲಿ ಗುರುತಿಸಲಾಗಿದೆ ಎಂದು ಆಯೋಗ ಮಾಹಿತಿ ನೀಡಿದೆ.

ರಾಜ್ಯದ ಜಿಲ್ಲೆಗಳ ಪೈಕಿ ಬೆಳಗಾವಿ ಜಿಲ್ಲೆಯು ಅತಿ ಹೆಚ್ಚು ಅಂದರೆ 41,07,000 ಮತದಾರರನ್ನು ಹೊಂದಿದ್ದು, ಇಲ್ಲಿಯವರೆಗೆ 2,71,038 ನಮೂನೆ ವಿತರಿಸಲಾಗಿದೆ.



ಎಸ್‌ಐಆರ್ ನಿರತ ಸಿಬ್ಬಂದಿಗೆ ಭೌತಿಕ ಹಾಜರಾತಿಗೆ ವಿನಾಯಿತಿ

ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮತ್ತು ಇತರ ಸಿಬ್ಬಂದಿಗಳು ಎಸ್‌ಐಆರ್‌ನ ಮನೆ-ಮನೆಗೆ ಭೇಟಿ ನೀಡುವ ಕಾರ್ಯದಲ್ಲಿ ತೊಡಗಿರುವುದರಿಂದ ಅವರು ಹಾಜರಾತಿಗಾಗಿ ಕಚೇರಿಗಳಿಗೆ ಭೌತಿಕವಾಗಿ ಹಾಜರಾಗುವುದರಿಂದ ವಿನಾಯಿತಿ ನೀಡಲಾಗಿದೆ ಎಂದು ಸರ್ಕಾರ ತಿಳಿಸಿದೆ. ಕರ್ತವ್ಯ ಮೊಬೈಲ್ ಅಪ್ಲಿಕೇಶನ್ ಮೂಲಕ ಆನ್ ಅದರ್ ಡ್ಯೂಟಿ (ಒಒಡಿ)ಸೌಲಭ್ಯವನ್ನು ಕಲ್ಪಿಸಲಾಗಿದೆ.

ಜುಲೈ 1ರ ಸಂಜೆ 6ರವರೆಗಿನ ಪ್ರಮುಖ ಮಾಹಿತಿ

- ನಮೂನೆಗಳ ವಿತರಣೆ-54,68,607
- ಡಿಜಿಟಲೀಕರಣಗೊಳಿಸಲಾದ ನಮೂನೆಗಳು-2,38,453
- ಆನ್‌ಲೈನ್ ಮೂಲಕ ಸಲ್ಲಿಕೆಯಾದ ನಮೂನೆಗಳು -26,213
- ಮರಣ ಹೊಂದಿದ ಮತದಾರರು-1,383
- ಖಾಯಂ ಆಗಿ ಸ್ಥಳಾಂತರಗೊಂಡವರು-816
- ಈಗಾಗಲೇ ದಾಖಲಾಗಿರುವ (ನಕಲು) ಮತದಾರರು- 327
- ಸಿಗದ / ಗೈರುಹಾಜರಾದ ಮತದಾರರು-21
- ಇತರರು-18

ಬೆಂಗಳೂರು ನಗರ ಜಿಲ್ಲೆಯಲ್ಲಿ 40,21,039 ಮತದಾರರಿದ್ದು, 1,28,403 ನಮೂನೆಗಳನ್ನು ವಿತರಿಸಲಾಗಿದೆ.

ರಾಮಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಆರೆಸ್ಸೆಸ್ಸಿನವರು ಪುಕ್ಕಲರು, ಅವರಿಗೆ ಧೈರ್ಯವಿಲ್ಲ - ಬಿ.ಕೆ.ಹರಿಪ್ರಸಾದ್
- ಹೌದು, ಅವರಿಗೆ ಭಯೋತ್ಪಾದಕರನ್ನು ಬೆಂಬಲಿಸುವ ಧೈರ್ಯವಿಲ್ಲ, ಮತಾಂತರಿಗಳಿಗೆ ಮತಕ್ಕಾಗಿ ಮಸ್ಕಾ ಹಾಕುವ ಧೈರ್ಯವೂ ಇಲ್ಲ, ದೇಶದ್ರೋಹಿಗಳನ್ನು ಸಾಕುವ ಧೈರ್ಯವಂತೂ ಇಲ್ಲವೇ ಇಲ್ಲ!

ದಿನ ಭವಿಷ್ಯ

ಮೇಷ ಎಲ್ಲ ವ್ಯವಹಾರದಲ್ಲಿ ಎಚ್ಚರ ಅವಶ್ಯ. ಜಡತ್ವ ಬಿಟ್ಟು ಕಾರ್ಯವೆಸಗಿ. ಕೋಪದ ವರ್ತನೆ ಹಾನಿ ತಂದೀತು. ಆರೋಗ್ಯ ಸಮಸ್ಯೆ ಪರಿಹಾರ.

ವೃಷಭ ವೃತ್ತಿಕ್ಷೇತ್ರದಲ್ಲಿ ಉನ್ನತಿಯ ಅವಕಾಶ. ಅನಿರೀಕ್ಷಿತ ಬದಲಾವಣೆ. ಅದಕ್ಕೆ ಒಗ್ಗಿಕೊಳ್ಳಿ. ಸಂಗಾತಿ ಜತೆಗೆ ಉತ್ತಮ ಹೊಂದಾಣಿಕೆ.

ಮಿಥುನ ಕೆಲದಿನಗಳ ಗೊಂದಲ ಪರಿಹಾರ. ಎಲ್ಲವೂ ನಿಚ್ಚಳ. ನಿಮ್ಮ ಕಾರ್ಯ ಸಲೀಸು. ಸಂತಾನಾಪೇಕ್ಷಿ ದಂಪತಿಗೆ ಶುಭ ಬೆಳವಣಿಗೆ.

ಕಟಕ ವ್ಯವಹಾರ ಪ್ರಗತಿ. ಆರ್ಥಿಕ ಅಡಚಣೆ ನಿವಾರಣೆ. ಸಂಗಾತಿ ಜತೆ ಸೌಹಾರ್ದ ಪರಿಸರ. ಮನಸ್ತಾಪ ಅಂತ್ಯ. ದೈಹಿಕ ನೋವು ಪರಿಹಾರ.

ಸಿಂಹ ಪ್ರಗತಿಗೆ ತೊಡಕು. ಸಮಾಧಾನದ ಹೆಜ್ಜೆ ಇಡಿ. ಧಾವಂತ ಬೇಡ. ನಿಷ್ಫಲ ಮಾತುಕತೆ ತ್ಯಜಿಸಿ. ಶೇರು ಹೂಡಿಕೆಯಿಂದ ಸ್ವಲ್ಪ ಕಾಲ ದೂರವಿರಿ.

ಕನ್ಯಾ ದಿನವಿಡೀ ಕಾರ್ಯ. ವಿರಾಮಕ್ಕೆ ಸಮಯ ಸಿಗದು. ಆದರೆ ತೃಪ್ತಿಕರ ಫಲಿತಾಂಶ. ಅನ್ಯರ ಮನವೊಲಿಕೆ ಕಾರ್ಯ ಸಫಲ. ಧನ ಪ್ರಾಪ್ತಿ.

ತುಲಾ ಉದ್ದೇಶಿತ ಫಲ ದೊರಕದೆ ನಿರಾಶೆ. ಕೆಲ ವಿಷಯದಲ್ಲಿ ರಾಜಿ ಮಾಡಿಕೊಳ್ಳಬೇಕು. ವೃತ್ತಿ ಒತ್ತಡದಿಂದ ಹೊರಬಂದು ಆಪ್ತರ ಜತೆ ಕಳೆಯಿರಿ.

ವೃಶ್ಚಿಕ ಸಕಾಲದಲ್ಲಿ ನಿಮ್ಮ ಕಾರ್ಯ ಪೂರೈಕೆ. ಮನೆಯಲ್ಲಿ ಸಮರಸದ ವಾತಾವರಣ. ಆರ್ಥಿಕ ಪರಿಸ್ಥಿತಿ ಆಶಾದಾಯಕ. ಒಟ್ಟಿನಲ್ಲಿ ಪೂರಕ ದಿನ.

ಧನು ಬದುಕಲ್ಲಿ ಮಹತ್ವದ ಬದಲಾವಣೆ ಆದೀತು. ಸಂಬಂಧ ವೃದ್ಧಿ. ಉದ್ಯಮದಲ್ಲಿ ಪ್ರಗತಿ. ಆರೋಗ್ಯ ಸಮಸ್ಯೆ ನಿವಾರಣೆ. ನಿರಾಳತೆ.

ಮಕರ ದಿನವಿಡೀ ಕಾರ್ಯವ್ಯಸ್ತ. ಕೆಲವು ಬಗೆಯ ಒತ್ತಡ. ಆಪ್ತರ ಜತೆ ವಾಗ್ವಾದವೂ ನಡೆದೀತು. ಖರ್ಚು ಕಡಿಮೆ ಮಾಡಲೆತ್ನಿಸಿ.

ಕುಂಭ ಎಂದಿನಂತೆ ಸಹಜ ದಿನ. ಮಹತ್ವದ ಬೆಳವಣಿಗೆ ಕಾಣದು. ಆಪ್ತರ ಜತೆಗಿನ ಭಿನ್ನಮತ ಪರಿಹಾರ. ವೃತ್ತಿ ಸಮಸ್ಯೆಯೊಂದು ಇತ್ಯರ್ಥ ಕಾಣಲಿದೆ.

ಮೀನ ಧನಹಾನಿ ಉಂಟಾದೀತು. ಇದರಿಂದ ನೆಮ್ಮದಿ ಹಾಳಾದೀತು. ಕಿವಿನೋವು ಸಂಭವ. ಮನಶ್ಶಾಂತಿ ಸಾಧಿಸಲು ಧ್ಯಾನದಲ್ಲಿ ತೊಡಗಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 4,7,0,3

ಜು.10ರಿಂದ ಅಖಿಲ ಭಾರತೀಯ ಪ್ರಾಂತ ಪ್ರಚಾರಕರ ಸಭೆ

ಬೆಳಗಾವಿಯಲ್ಲಿ 3 ದಿನ ಬೈಠಕ್

• **ಹೊಸದಿಲ್ಲಿ:** ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕ ಅಖಿಲ ಭಾರತೀಯ ಪ್ರಾಂತ ಪ್ರಚಾರಕರ ಬೈಠಕ್ ಇದೇ ಜುಲೈ 10, 11 ಮತ್ತು 12ರಂದು ಬೆಳಗಾವಿಯಲ್ಲಿ ನಡೆಯಲಿದೆ.

ದೇಶದ ವಿವಿಧ ಭಾಗಗಳ ಪ್ರಾಂತ ಪ್ರಚಾರಕರು, ಸಹ ಪ್ರಾಂತ ಪ್ರಚಾರಕರು, ಕ್ಷೇತ್ರ ಪ್ರಚಾರಕರು ಹಾಗೂ ಸಹ ಕ್ಷೇತ್ರ ಪ್ರಚಾರಕರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಂಘದ ಸಂಘಟನಾತ್ಮಕ ರಚನೆಯಲ್ಲಿರುವ ಎಲ್ಲ 11 ಕ್ಷೇತ್ರಗಳು ಮತ್ತು 46 ಪ್ರಾಂತಗಳ ಕಾರ್ಯಕರ್ತರು ಬೈಠಕ್‌ಗೆ ಆಗಮಿಸುವ ನಿರೀಕ್ಷೆಯಿದೆ. ಜತೆಗೆ ಸಂಘ ಪ್ರೇರಿತ 32 ಸಂಘಟನೆಗಳ ಅಖಿಲ ಭಾರತೀಯ ಸಂಘಟನಾ ಮಂತ್ರಿಗಳೂ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

2026ರ ಮಾರ್ಚ್‌ನಲ್ಲಿ ಹರ್ಯಾಣದ ಸಮಾಲ್ಖಾದಲ್ಲಿ ನಡೆದ ಪ್ರತಿನಿಧಿ ಸಭೆಯ ಬಳಿಕ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ದೇಶಾದ್ಯಂತ ವಿವಿಧ ಹಂತಗಳ ಸಂಘ ಶಿಕ್ಷಣ ವರ್ಗಗಳನ್ನು ಆಯೋಜಿಸಲಾಗಿತ್ತು. ಈ ವರ್ಗಗಳ ವರದಿ ಮತ್ತು ಅನುಭವಗಳ ಕುರಿತು ಬೈಠಕ್‌ನಲ್ಲಿ ಅವಲೋಕನ ನಡೆಯಲಿದೆ. ವಾರ್ಷಿಕ ಕಾರ್ಯಯೋಜನೆಯನ್ನು ಶಾಖಾ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆಯೂ ವಿಸ್ತೃತ ಚರ್ಚೆ ನಡೆಯಲಿದೆ.



ಜು.6ಕ್ಕೆ ಮೋಹನ್ ಭಾಗವತ್ ಆಗಮನ

ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಬೈಠಕ್‌ನಲ್ಲಿ ಭಾಗವಹಿಸಲು ಜುಲೈ 6ರಂದೇ ಬೆಳಗಾವಿಗೆ ಆಗಮಿಸಲಿದ್ದಾರೆ. ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಹ ಸರಕಾರ್ಯವಾಹರಾದ ಡಾ. ಕೃಷ್ಣಗೋಪಾಲ್, ಸಿ.ಆರ್. ಮುಕುಂದ, ಅರುಣ್ ಕುಮಾರ್, ರಾಮದತ್ತ, ಅಲೋಕ್ ಕುಮಾರ್ ಮತ್ತು ಅತುಲ್ ಲಿಮಯೆ ಸೇರಿದಂತೆ ಅಖಿಲ ಭಾರತೀಯ ಕಾರ್ಯವಿಭಾಗಗಳ ಪ್ರಮುಖರು ಹಾಗೂ ಕಾರ್ಯಕಾರಿಣಿ ಸದಸ್ಯರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

- ಆರ್‌ಎಸ್‌ಎಸ್ ಶತಾಬ್ದಿ ಕಾರ್ಯಕ್ರಮಗಳ ಅವಲೋಕನ
- 11 ಕ್ಷೇತ್ರ, 46 ಪ್ರಾಂತಗಳ ಪ್ರಮುಖರು ಭಾಗಿ
- ಶಾಖಾ ವಿಸ್ತರಣೆ, ಜನಗಣತಿ ಸೇರಿದಂತೆ ಸಮಕಾಲೀನ ವಿಷಯಗಳ ಚರ್ಚೆ

ಸಂಘದ ಶತಾಬ್ದಿ ವರ್ಷಾಚರಣೆಯ ಅಂಗವಾಗಿ ನಡೆದಿರುವ ಶಾಖಾ ವಿಸ್ತರಣೆಯ ಪ್ರಗತಿಯನ್ನು ಸಭೆಯಲ್ಲಿ ಪರಿಶೀಲಿಸಲಾಗುವುದು. ಮತ್ತಷ್ಟು ಪ್ರದೇಶಗಳಿಗೆ ಶಾಖಾ ಕಾರ್ಯ ವಿಸ್ತರಿಸುವ ಯೋಜನೆಗಳನ್ನು ರೂಪಿಸಲಾಗುತ್ತದೆ. ಶತಾಬ್ದಿ ವರ್ಷದಲ್ಲಿ ಈಗಾಗಲೇ ಪೂರ್ಣಗೊಂಡ ಕಾರ್ಯಕ್ರಮಗಳು, ಉಳಿದಿರುವ ಕಾರ್ಯಕ್ರಮಗಳ ಆಯೋಜನೆ ಹಾಗೂ 2026-27ನೇ ಸಾಲಿನ ಸರಸಂಘಚಾಲಕರ ಪ್ರವಾಸ ಯೋಜನೆಗಳ ಕುರಿತು ಚರ್ಚಿಸಲಾಗುವುದು.

ಸಂಘದ ಶತಾಬ್ದಿ ವರ್ಷದ ಉಳಿದ ಕಾರ್ಯಕ್ರಮಗಳು ವಿಜಯದಶಮಿಯಾದ 2026ರ ಅಕ್ಟೋಬರ್ 20ರವರೆಗೆ ಮುಂದುವರಿಯಲಿವೆ. ದೇಶದ ಪ್ರಸ್ತುತ ಪರಿಸ್ಥಿತಿ, ಜನಗಣತಿ ಸೇರಿದಂತೆ ಪ್ರಮುಖ ಸಮಕಾಲೀನ ವಿಷಯಗಳ ಕುರಿತು ಪ್ರಚಾರಕರು ತಮ್ಮ ಅನುಭವ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ.

ಶಿಶುಪಾಲನಾ ಕೇಂದ್ರದಲ್ಲಿ ಅಮಾನವೀಯ ಕಿರುಕುಳ

• **ಬೆಂಗಳೂರು:** ಖಾಸಗಿ ಶಿಶುಪಾಲನಾ ಕೇಂದ್ರದಲ್ಲಿ ಪುಟ್ಟ ಮಕ್ಕಳ ಮೇಲೆ ಅಮಾನವೀಯವಾಗಿ ವರ್ತಿಸಿರುವ ಆರೋಪ ಕೇಳಿಬಂದಿದ್ದು, ಐವರು ಸಿಬ್ಬಂದಿ ವಿರುದ್ಧ ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ಯಾಪ್ಜೆಮಿನಿ ಬ್ರೂಕ್‌ಫೀಲ್ಡ್ ಕ್ಯಾಂಪಸ್‌ನಲ್ಲಿರುವ ಸೊಸೈಟಿ ಜನರಲ್ ಬೇಬಿ ಕೇರ್ ಸೆಂಟರ್‌ನ ಆರೈಕೆ ಸಿಬ್ಬಂದಿಗಳಾದ ಮಂಜುಳಾ, ವಿಜಯಲಕ್ಷ್ಮಿ, ಸಿಂಧು, ಭವಾನಿ ಹಾಗೂ ಬಿಂದು ಎಂಬ ಆರೋಪಿಗಳ ವಿರುದ್ಧ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾನೂನು ಮತ್ತು ಪರೀಕ್ಷಾ ಅಧಿಕಾರಿ ತಿಲಕೇಶ್ ಕುಮಾರ್ ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ.

ಪೋಷಕರು ಕೆಲಸದ ಸಮಯದಲ್ಲಿ ಮಕ್ಕಳನ್ನು ಈ ಶಿಶುಪಾಲನಾ ಕೇಂದ್ರದಲ್ಲಿ ಬಿಡುತ್ತಿದ್ದರು. ಮಕ್ಕಳು ಅಳುವಾಗ ಅಥವಾ ಚಂಚಲವಾಗಿ ವರ್ತಿಸಿದಾಗ ಅವರನ್ನು ಲೋಡಿಂಗ್ ವಾಷಿಂಗ್ ಮೆಷಿನ್ ಒಳಗೆ ಹಾಕುವುದು,ಶೌಚಾಲಯದಕಮೋಡ್‌ಮೇಲೆ ಕುಳಿತುಕೊಳ್ಳುವಂತೆ ಒತ್ತಾಯಿಸುವುದು, ಜೆಟ್ ಸ್ಪ್ರೇ ಮೂಲಕ ಬಾಯಿಗೆ ನೀರು ಸಿಂಪಡಿಸುವುದು, ಶೌಚಾಲಯದಲ್ಲಿ ಬೀಗ ಹಾಕುವುದು ಹಾಗೂಮೌನವಾಗಿರಲು ಬೆದರಿಕೆ ಹಾಕುವುದು ಸೇರಿದಂತೆ ವಿವಿಧ ರೀತಿಯ ದೌರ್ಜನ್ಯ ಎಸಗಿರುವ ಆರೋಪ ಕೇಳಿಬಂದಿದೆ.

> ಮಕ್ಕಳ ಮೇಲೆ ದೌರ್ಜನ್ಯ ನಡೆದಿರುವ ಕುರಿತು ನನಗೆ ಇನ್ನೂ ಅಧಿಕೃತ ಮಾಹಿತಿ ಬಂದಿಲ್ಲ, ಮಾಹಿತಿ ಬಂದ ಬಳಿಕ ಅಗತ್ಯ ಕ್ರಮಗಳ ಕುರಿತು ತಿಳಿಸುತ್ತೇನೆ.
> ■ **ಸಂತೋಷ್ ಪಾಟೀಲ್,** ಅಧ್ಯಕ್ಷ, ಮಕ್ಕಳ ಹಕ್ಕು ರಕ್ಷಣಾ ಆಯೋಗ

ಈ ಕೃತ್ಯಗಳಿಗೆ ಸಂಬಂಧಿಸಿದ ವಿಡಿಯೋ ತುಣುಕುಗಳನ್ನು ಪೊಲೀಸರಿಗೆ ಸಲ್ಲಿಸಲಾಗಿದ್ದು, ಅವುಗಳ ಸತ್ಯಾಸತ್ಯತೆ, ಘಟನೆಗಳು ನಡೆದ ಸಮಯ ಹಾಗೂ ಇದೇ ರೀತಿಯ ದೌರ್ಜನ್ಯಕ್ಕೆ ಇನ್ನೂ ಹೆಚ್ಚಿನ ಮಕ್ಕಳು ಒಳಗಾಗಿದ್ದಾರೆಯೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಆರೋಪಿ ವಿರುದ್ಧ ಬಾಲ ನ್ಯಾಯ ಕಾಯ್ದೆಯ ಅಡಿ ಪ್ರಕರಣ ದಾಖಲಿಸಲಾಗಿದ್ದು, ವಿಚಾರಣೆಗಾಗಿ ಐವರನ್ನೂ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಶಿಶುಪಾಲನಾ ಕೇಂದ್ರದಲ್ಲಿ ಮಕ್ಕಳ ಮೇಲೆ ನಡೆದಿರುವ ದೌರ್ಜನ್ಯ ಅಮಾನವೀಯವಾಗಿದೆ. ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಶಶಿಧರ್ ಕೋಸಂಬೆ ಆಗ್ರಹಿಸಿದ್ದಾರೆ.

ಹರಾಜಿನಲ್ಲಿ ಪಡೆದ ಜಾಗ ಬಳಕೆಗೆ ನೀತಿ

ಪುಟ ೧➡ ಈ ಕುರಿತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಎಲ್.ಕೆ.ಅತೀಕ್ ಮತ್ತು ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರಿಗೆ ಮುಖ್ಯಮಂತ್ರಿಗಳು ಜವಾಬ್ದಾರಿ ವಹಿಸಿದರು. ಸಭೆಯಲ್ಲಿ ಅಧಿಕಾರಿಗಳು ಮಾಹಿತಿ ನೀಡಿ, 2025-26ನೇ ಸಾಲಿನಲ್ಲಿ 8,845.39 ಕೋಟಿ ರೂ. ಆದಾಯ ಸಂಗ್ರಹವಾಗಿದ್ದು, ನಿಗದಿತ ಗುರಿಯ ಶೇ.98 ಸಾಧಿಸಲಾಗಿದೆ. 2026-27ನೇ ಸಾಲಿನಲ್ಲಿ ಇದುವರೆಗೆ 1,164.11 ಕೋಟಿ ರೂ. ಆದಾಯ ಸಂಗ್ರಹಿಸಲಾಗಿದೆ. 2025-26ನೇ ಸಾಲಿನಲ್ಲಿ ಅಕ್ರಮ ಮತ್ತು ನಿಯಮಬಾಹಿರ ಗಣಿಗಾರಿಕೆ ನಡೆಸಿದ 6301 ಪ್ರಕರಣಗಳನ್ನು ಪತ್ತೆಹಚ್ಚಿ ಪ್ರಕರಣ ದಾಖಲಿಸಲಾಗಿದೆ. 3126 ಲಕ್ಷ ದಂಡ ಸಂಗ್ರಹಿಸಿ, 268 ಎಫ್‌ಐಆರ್ ದಾಖಲಿಸಲಾಗಿದೆ. ಇದರಲ್ಲಿ 3648 ಮರಳು ಗಣಿಗಾರಿಕೆ ಪ್ರಕರಣಗಳೂ ಸೇರಿವೆ ಎಂದು ವರದಿ ಒಪ್ಪಿಸಿದರು.

ಹಿಂದಿನ ಅವಧಿಗೆ ಅಥವಾ ಪೂರ್ವಾನ್ವಯವಾಗುವ ತೆರಿಗೆಯಿಂದ ಸರ್ಕಾರಕ್ಕೆ ಬರಬೇಕಾದ ಆದಾಯಗಳ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆ ಸಮಗ್ರ ಚರ್ಚೆ ನಡೆಸಿದ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಗಣಿ ನಿಯಮಗಳು ಮತ್ತು ಸುಪ್ರೀಂಕೋರ್ಟ್ ನಿರ್ದೇಶನಗಳನ್ನು ಮೀರದಂತೆ ಕ್ರಮ ವಹಿಸುವಂತೆ ಸೂಚಿಸಿದರು.

ದತ್ತಾಂಶ ಸಂಗ್ರಹಿಸಿ

ಗ್ರಾಮೀಣ ಭಾಗಗಳಲ್ಲಿ ವಾಸಿಸುವ ಹಿಂದುಳಿದ ಸಮುದಾಯಗಳ ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣಕ್ಕೆ ಹೊಸ ಆಯಾಮ ನೀಡುವ ಉದ್ದೇಶದಿಂದ, ಇನ್ನೂ ಸಾಂಪ್ರದಾಯಿಕ ವೃತ್ತಿಗಳನ್ನು ಅವಲಂಬಿಸಿರುವ ಸಮುದಾಯಗಳ ಸಮಗ್ರ ದತ್ತಾಂಶ ಸಂಗ್ರಹಿಸಿ, ಅವರ ಅಗತ್ಯಗಳಿಗೆ ಅನುಗುಣವಾದ ವೃತ್ತಿ ಆಧಾರಿತ ಹಾಗೂ ವೈಜ್ಞಾನಿಕ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನ, ಫಲಾನುಭವಿಗಳ ವ್ಯಾಪ್ತಿ, ಯೋಜನೆಗಳ ಪರಿಣಾಮಕಾರಿತ್ವ ಹಾಗೂ ಮುಂದಿನ ಕಾರ್ಯತಂತ್ರದ ಕುರಿತು ಸಮಗ್ರ ಪರಿಶೀಲನೆ ನಡೆಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಅನೇಕ ಹಿಂದುಳಿದ ಸಮುದಾಯಗಳು ತಮ್ಮ ಸಾಂಪ್ರದಾಯಿಕ ವೃತ್ತಿಗಳನ್ನೇ ಜೀವನೋಪಾಯವಾಗಿ ಅವಲಂಬಿಸಿಕೊಂಡಿದ್ದು, ಬದಲಾಗುತ್ತಿರುವ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅವರಿಗೆ ಹೊಸ ಕೌಶಲ್ಯ, ಆಧುನಿಕ ತಂತ್ರಜ್ಞಾನ, ಮಾರುಕಟ್ಟೆ ಸಂಪರ್ಕ ಮತ್ತು ಹಣಕಾಸಿನ ಬೆಂಬಲ ಕಲ್ಪಿಸುವ ದಿಸೆಯಲ್ಲಿ ವಿಶೇಷ ಯೋಜನೆಗಳನ್ನು ರೂಪಿಸಬೇಕಾಗಿದೆ. ಇದಕ್ಕಾಗಿ ಸಮುದಾಯವಾರು ಸಮಗ್ರ ದತ್ತಾಂಶ ಸಂಗ್ರಹಿಸಿ, ಅಗತ್ಯಾಧಾರಿತ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವಂತೆ ಮುಖ್ಯಮಂತ್ರಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಹುಂಡಿ ಹಣ ದುರ್ಬಳಕೆಗೆ ಅವಕಾಶ ನೀಡಲ್ಲ: ಡಿಸಿಎಂ

ಪುಟ ೧➡ ತಹಸೀಲ್ದಾರ್ ಅಥವಾ ಜಿಲ್ಲಾಧಿಕಾರಿಗಳು ಪ್ರತಿ ತಿಂಗಳು ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವ ವ್ಯವಸ್ಥೆ ಜಾರಿಗೆ ತರಲಾಗುವುದು ಎಂದರು.

ದೇಗುಲ ಆಸ್ತಿ ಸಮೀಕ್ಷೆಗೆ ಸೂಚನೆ: ರಾಜ್ಯದ 'ಎ', 'ಬಿ' ಹಾಗೂ 'ಸಿ' ವರ್ಗದ ದೇವಾಲಯಗಳಿಗೆ ಸೇರಿದ ಜಮೀನು, ನಿವೇಶನ ಸೇರಿದಂತೆ ಎಲ್ಲಾ ಆಸ್ತಿಗಳ ಸಮಗ್ರ ಸಮೀಕ್ಷೆ ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಒತ್ತುವರಿಯಾಗಿರುವ ಆಸ್ತಿಗಳನ್ನು ಗುರುತಿಸಿ, ಗಡಿ ನಿಗದಿಪಡಿಸಿ ತೆರವುಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ದೇವಾಲಯದ ಆಸ್ತಿ ದೇವಾಲಯಕ್ಕೇ ಸೇರಬೇಕು. ಯಾರೇ ಒತ್ತುವರಿ ಮಾಡಿಕೊಂಡಿದ್ದರೂ ತೆರವುಗೊಳಿಸಿ ದಾಖಲೆಗಳನ್ನು ಸರಿಪಡಿಸಿ ಸಂರಕ್ಷಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಗೃಹಜ್ಯೋತಿಗೆ ಜಾತಿ ಪ್ರಮಾಣಪತ್ರ ಕಡ್ಡಾಯವಿಲ್ಲ: ಗೃಹಜ್ಯೋತಿ ಯೋಜನೆಗೆ ಜಾತಿ ಪ್ರಮಾಣಪತ್ರ ಕೇಳಲಾ ಗುತ್ತಿದೆ ಎಂಬ ಗೊಂದಲದ ಕುರಿತು ಪ್ರತಿಕ್ರಿಯಿಸಿದ ಡಿಸಿಎಂ, ಈ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ, ಹಳೆಯ ನಿಯಮದಂತೆಯೇ ಪ್ರಕ್ರಿಯೆ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದರು.

ಕ್ರೀಡಾಪಟುಗಳಿಗೆ ನೇಮಕಾತಿ ಮೀಸಲು: ಪೊಲೀಸ್ ಮತ್ತು ಗೃಹ ಇಲಾಖೆಯ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ಶೇ.3ರಷ್ಟು ಹಾಗೂ ಇತರ ಸರ್ಕಾರಿ ಇಲಾಖೆಗಳ ನೇಮಕಾತಿಯಲ್ಲಿ ಶೇ.2ರಷ್ಟು ಮೀಸಲಾತಿ ನೀಡಲಾಗಿದೆ. ಏಷ್ಯನ್ ಗೇಮ್ಸ್, ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡಿದವರ ವರ್ಗೀಕರಣದ ಆಧಾರದಲ್ಲಿ ಈ ಸೌಲಭ್ಯ ನೀಡಲಾಗುವುದು ಎಂದು ಹೇಳಿದರು.

ಹೈಕಮಾಂಡ್ ತೀರ್ಮಾನದಂತೆ ಡಿ.ಕೆ.ಶಿವಕುಮಾರ್ ಸಿಎಂ

• **ಬೆಳಗಾವಿ:** ಕಾಂಗ್ರೆಸ್ ಹೈಕಮಾಂಡ್ ತೀರ್ಮಾನದಂತೆ ಮುಂದಿನ ಎರಡು ವರ್ಷ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಹಾಗೂ ನಾನು ಉಪಮುಖ್ಯಮಂತ್ರಿಯಾಗಿ ಜವಾಬ್ದಾರಿಯುತ ಹಾಗೂ ಜನಪರ ಸರ್ಕಾರ ನಡೆಸಲಿದ್ದೇವೆ ಎಂದು ಡಿಸಿಎಂ ಜಿ. ಪರಮೇಶ್ವರ್ ಹೇಳಿದರು. ಮುಂದಿನ ಬಾರಿ ಸಿಎಂ ಆಗಿ ಬರುತ್ತೀರಾ ಎಂಬ ಪ್ರಶ್ನೆಗೆ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಮಾರ್ಮಿಕವಾಗಿ ಉತ್ತರಿಸಿದರು.

ಲಿಂಕ್ ಕೆನಾಲ್ ವಿರೋಧ

ಶಾಸಕರ ಮನವೊಲಿಕೆ ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆಗೆ ಕಾಂಗ್ರೆಸ್ ಶಾಸಕರೇ ವಿರೋಧ ವ್ಯಕ್ತಪಡಿಸುತ್ತಿರುವ ಕುರಿತು ಉತ್ತರಿಸಿದ ಅವರು, ಇದು ಕ್ಯಾಬಿನೆಟ್ ಅನುಮೋದನೆ ಪಡೆದ ತೀರ್ಮಾನವಾಗಿದೆ. ಈಗಾಗಲೇ ಅರ್ಧದಷ್ಟು ಕೆಲಸ ಮುಗಿದಿದೆ. ವಿರೋಧ ವ್ಯಕ್ತಪಡಿಸುತ್ತಿರುವ ಶಾಸಕರನ್ನು ಕರೆದು ಮಾತನಾಡಿ, ಅವರ ಮನವೊಲಿಸುವ ಮೂಲಕ ಬಾಕಿ ಉಳಿದಿರುವ ಕಾಮಗಾರಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸುತ್ತೇವೆ ಎಂದು ತಿಳಿಸಿದರು.

ಇಂದು ಜಪಾನ್ ಪ್ರಧಾನಿ ತಕೈಚಿ- ಮೋದಿ ಭೇಟಿ

• **ಹೊಸದಿಲ್ಲಿ:** ಮೂರು ದಿನಗಳ ಭಾರತ ಪ್ರವಾಸಕ್ಕಾಗಿ ಜಪಾನ್ ಪ್ರಧಾನಿ ಸಾನೆ ತಕೈಚಿ ಬುಧವಾರ ದಿಲ್ಲಿಗೆ ಬಂದಿಳಿದಿದ್ದಾರೆ. ಪ್ರಧಾನಿ ತಕೈಚಿ ಅವರಿಗೆ ಕೇಂದ್ರ ಸರ್ಕಾರ ಕೆಂಪು ಹಾಸಿನ ಸ್ವಾಗತ ನೀಡಿದ್ದು, ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅಧಿಕೃತವಾಗಿ ಬರಮಾಡಿಕೊಂಡರು.

ಗುರುವಾರ ರಾಷ್ಟ್ರಪತಿ ಭವನದಲ್ಲಿ ಅಧಿಕೃತವಾಗಿ ಪ್ರಧಾನಿ ತಕೈಚಿ ಅವರನ್ನು ಸ್ವಾಗತಿಸಲಾಗುವುದು. ಭಾರತ-ಜಪಾನ್ ಜಂಟಿ ಆರ್ಥಿಕ ಸಭೆಯಲ್ಲಿ ಪಾಲ್ಗೊಳ್ಳುವ ಮುನ್ನ ಪ್ರಧಾನಿನರೇಂದ್ರ ಮೋದಿಅವರನ್ನು ಭೇಟಿಯಾಗಿ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಭಾರತ-ಜಪಾನ್ ಜಂಟಿ ಆರ್ಥಿಕ ಸಭೆಯಲ್ಲಿ 100ಕ್ಕೂ ಅಧಿಕ ಉದ್ಯಮ ನಾಯಕರು, ಹಲವು ಸಿಇಒಗಳು ಪಾಲ್ಗೊಳ್ಳಲಿದ್ದಾರೆ.

ಭಾರತ-ಜಪಾನ್ ಮಧ್ಯೆ ಹಲವು ಒಪ್ಪಂದಗಳಿಗೆ ಸಹಿ ಹಾಕುವುದು ಹಾಗೂ ಜಂಟಿ ಹೇಳಿಕೆಯನ್ನು ಬಿಡುಗಡೆಗೊಳಿಸುವ ಸಾಧ್ಯತೆಯಿದೆ. ಶತಕೋಟಿ ಡಾಲರ್ ಒಪ್ಪಂದಗಳು ಮತ್ತು ವಿತ್ತೀಯ ಸಹಯೋಗದೊಂದಿಗೆ ಜಪಾನ್ ಭಾರತದ ಪ್ರಮುಖ ದೀರ್ಘಾವಧಿ ಆರ್ಥಿಕ ಪಾಲುದಾರನಾಗಿ ಹೊರಹೊಮ್ಮಿದೆ.

ಶಂಕಿತ ಉಗ್ರ ಸೊಹೇಲ್ ಪೊಲೀಸ್ ಕಸ್ಟಡಿಗೆ

• **ದಾವಣಗೆರೆ:** ಪಾಕಿಸ್ತಾನದೊಂದಿಗೆ ನಂಟು ಹೊಂದಿದ್ದ ಆರೋಪದಡಿ ಬಂಧಿತನಾದ ಉತ್ತರ ಪ್ರದೇಶ ಮೂಲದ ಶಂಕಿತ ಉಗ್ರ ಸೊಹೇಲ್ ನ ಪೊಲೀಸ್ ಕಸ್ಟಡಿಯನ್ನು ಬುಧವಾರ ಮತ್ತೆ 14 ದಿನಗಳ ಕಾಲ ವಿಸ್ತರಿಸಿ ಜಿಲ್ಲೆಯ ಹರಿಹರ ಜೆ.ಎಂ.ಎಫ್.ಸಿ ನ್ಯಾಯಾಲಯ ಆದೇಶಿಸಿದೆ.

ವಶಕ್ಕೆ ಪಡೆದಿದ್ದ ಹರಿಹರ ಗ್ರಾಮಾಂತರ ಪೊಲೀಸರು ಸೊಹೇಲ್‌ನನ್ನು ನ್ಯಾಯಾಲಯಕ್ಕೆ ಭಾರೀ ಭದ್ರತೆಯಲ್ಲಿ ಹಾಜರು ಪಡಿಸಿದರು. ನ್ಯಾಯಾಲಯವು ಜುಲೈ 13ರಂದು ಬಂಧಿತ ಶಂಕಿತ ಉಗ್ರ ಸೊಹೇಲ್ ನನ್ನು ಹಾಜರುಪಡಿಸಲು ಸೂಚಿಸಿ, ಮತ್ತೆ 14 ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿತು.

ಈ ಮಧ್ಯೆ, ನ್ಯಾಯಾಲಯದ ಆದೇಶದ ನಂತರ ಶಂಕಿತ ಉಗ್ರನನ್ನು ವಶಕ್ಕೆ ಪಡೆದು, ಕೋರ್ಟ್ ಆವರಣದಲ್ಲಿ ನಿಲ್ಲಿಸಿದ್ದ ವಾಹನಕ್ಕೆ ಕರೆ ತಂದಾಗ ಸೊಹೇಲ್ ಮಾಧ್ಯಮದವರು ಹಾಗೂ ಕ್ಯಾಮರಾಗಳನ್ನು ನೋಡುತ್ತಿದ್ದಂತೆ ಬೆರಳನ್ನು ತೋರಿಸಿ, ಸಂಜ್ಞೆ ಮಾಡುವ ಮೂಲಕ ಉದ್ಧಟತನ ಮೆರೆದಿದ್ದಾನೆ.

ನ್ಯಾಯಾಲಯಕ್ಕೆ ಹಾಜರುಪಡಿಸುವ ಮುನ್ನ ಹರಿಹರ ತಾಲೂಕು ಆಸ್ಪತ್ರೆಯಲ್ಲಿ ಸೊಹೇಲ್ ನ ಆರೋಗ್ಯ ತಪಾಸಣೆ ಮಾಡಿಸಲಾಯಿತು.

ಸಾರಿಗೆ ನೌಕರರ ವೇತನ ಶೇ.12.5ರಷ್ಟು ಹೆಚ್ಚಳ

• **ಬೆಂಗಳೂರು:** ಕೆಎಸ್‌ಆರ್‌ಟಿಸಿ ಸೇರಿ ರಾಜ್ಯದ ನಾಲ್ಕೂ ರಸ್ತೆ ಸಾರಿಗೆ ನಿಗಮಗಳ ನೌಕರರು ಮತ್ತು ಅಧಿಕಾರಿಗಳಿಗೆ ಬುಧವಾರದಿಂದ ಶೇ.12.5ರಷ್ಟು ವೇತನ ಹೆಚ್ಚಳ ಜಾರಿಯಾಗಿದ್ದು, ಈ ಜುಲೈ ತಿಂಗಳ ವೇತನದೊಂದಿಗೆ ಈ ಹೊಸ ವೇತನ ಆಗಸ್ಟ್‌ನಲ್ಲಿ ನೌಕರರ ಖಾತೆಗೆ ಜಮೆ ಆಗಲಿದೆ. 2025ಮಾರ್ಚ್ 31ರ ಮೂಲ ವೇತನದ ಮೇಲೆ ಶೇ.12.5ರಷ್ಟುವೇತನ ಹೆಚ್ಚಳ ಮಾಡಲಾಗಿದೆ. ಈ ಶೇ.12.5ರಷ್ಟು ವೇತನ ಪರಿಷ್ಕರಣೆ ಮಾಡಿ 2 ತಿಂಗಳು ಕಳೆದಿದ್ದು, ಶೇ.12.5ರಷ್ಟು ವೇತನ ಪರಿಷ್ಕರಣೆಗೊಂಡಿರುವುದು ಇದೇ ಜುಲೈ ತಿಂಗಳಿನ ವೇತನದೊಂದಿಗೆ ನೌಕರರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಬೇಕು ಎಂದು ಆದೇಶದಲ್ಲೇ ಸ್ಪಷ್ಟವಾಗಿ ಸೂಚಿಸಲಾಗಿದೆ. 4 ಸಾರಿಗೆ ನಿಗಮಗಳ 1.05 ಲಕ್ಷ ನೌಕರರಿಗೆ ವೇತನ ಪರಿಷ್ಕರಣೆ ಅನ್ವಯವಾಗಲಿದೆ. ಈ ವೇತನ ಪರಿಷ್ಕರಣೆಯಿಂದ 4 ಸಾರಿಗೆ ನಿಗಮಗಳಿಗೆ ಪ್ರತಿ ತಿಂಗಳು 72.80 ಕೋಟಿ ರೂ., ಪ್ರತಿ ವರ್ಷ 873.64 ಕೋಟಿ ರೂ. ಹೆಚ್ಚುವರಿ ವೆಚ್ಚವಾಗಲಿದೆ. ನೌಕರರು ಈಗಲೂ ಸಹ ಈ ಶೇ.12.5ರಷ್ಟು ವೇತನ ಪರಿಷ್ಕರಣೆ ಆಗಿರುವುದನ್ನು ಒಪ್ಪುತ್ತಿಲ್ಲ, ನಮಗೆ ಸರ್ಕಾರಿ ನೌಕರರ ಮಾದರಿಯಲ್ಲಿ ವೇತನ ಹೆಚ್ಚಳ ಮಾಡಿ, ಕನಿಷ್ಠ ವೇತನದ ಪರಿಷ್ಕರಣೆ ಮತ್ತು ಬಾಕಿ ವೇತನ ಪಾವತಿ ಮಾಡಬೇಕು ಎಂದು ಆಗ್ರಹಿಸುತ್ತಿದ್ದಾರೆ.



ಜೈಲುವಾಸಿ ಸಿಎಂ, ಪಿಎಂ ಪದಚ್ಯುತಿಗೆ ಶೀಘ್ರ ಕಾಯ್ದೆ

ಪುಟ ೧➡ ಇದೇ ವೇಳೆ, ರಾಜಕೀಯ ದ್ವೇಷಕ್ಕಾಗಿ ಈ ಕಾನೂನನ್ನು ದುರುಪಯೋಗಪಡಿಸಿಕೊಳ್ಳದಂತೆ ಕೆಲವು ಸುರಕ್ಷತಾ ಕ್ರಮ ಅಳವಡಿಸುವಂತೆಯೂ ಸಮಿತಿ ಶಿಫಾರಸು ಮಾಡಬಹುದು ಎಂದು ಮೂಲಗಳು ತಿಳಿಸಿವೆ.

ಸಂಸತ್ತಿನ ಮುಂಗಾರು ಅಧಿವೇಶನ ಜು.20ರಿಂದ ಆರಂಭವಾಗುವ ಸಾಧ್ಯತೆ ಇದ್ದು, ಈ ಅಧಿವೇಶನದಲ್ಲಿಯೇ ಮಸೂದೆಯನ್ನು ಚರ್ಚೆ, ಅಂಗೀಕಾರಕ್ಕಾಗಿ ಮಂಡಿಸುವ ನಿರೀಕ್ಷೆಇದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಳೆದ ವರ್ಷದ ಆಗಸ್ಟ್‌ನಲ್ಲಿ ಮಸೂದೆ ಮಂಡಿಸಿದ್ದರು. ಬಳಿಕ ಬಿಜೆಪಿ ಸಂಸದರಾದ ಅಪರಾಜಿತಾ ಸಾರಂಗಿ ಅಧ್ಯಕ್ಷತೆಯಲ್ಲಿ 31 ಸದಸ್ಯರ ಸಂಸತ್ತಿನ ಜಂಟಿ ಸಮಿತಿ ರಚಿಸಲಾಗಿತ್ತು. ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳ ಇಂಡಿ ಮೈತ್ರಿಕೂಟದ ಬಹುತೇಕ ಸದಸ್ಯರು ಸಮಿತಿಯ ಕಾರ್ಯಕಲಾಪಗಳನ್ನು ಬಹಿಷ್ಕರಿಸಿದ್ದರು.

ಬಂಧನ ಅಥವಾ ಕಸ್ಟಡಿಯನ್ನೇ ಆಧಾರವಾಗಿಟ್ಟುಕೊಂಡು, ನ್ಯಾಯಾಲಯದಲ್ಲಿ ಅಪರಾಧ ಸಾಬೀತಾಗುವ ಮೊದಲೇ ಚುನಾಯಿತ ಜನಪ್ರತಿನಿಧಿಯನ್ನು ಶಿಕ್ಷಿಸುವುದು ಪ್ರಜಾಪ್ರಭುತ್ವ ವಿರೋಧಿ ಎಂದು ವಿಪಕ್ಷಗಳು ವಾದಿಸಿವೆ. ಈ ಪ್ರಸ್ತಾವನೆ ಒಕ್ಕೂಟ ವ್ಯವಸ್ಥೆ ಹಾಗೂ ಸಹಜ ನ್ಯಾಯದ ತತ್ವಗಳಿಗೆ ವಿರುದ್ಧವಾಗಿದೆ ಎಂದೂ ಅವು ಆಕ್ಷೇಪಿಸಿವೆ. ಆದರೆ, 30 ದಿನಗಳ ಅವಧಿಯಲ್ಲಿ ಬಂಧಿತ ಸಚಿವರಿಗೆ ಕನಿಷ್ಠ ಮೂರು ಬಾರಿ ಜಾಮೀನಿಗಾಗಿ ನ್ಯಾಯಾಲಯದ ಮೊರೆಹೋಗಲು ಅವಕಾಶ ದೊರೆಯುತ್ತದೆ. ಹೀಗಾಗಿ, ಈ ನಿಯಮ ಸಹಜ ನ್ಯಾಯದ ತತ್ವವನ್ನು ಉಲ್ಲಂಘಿಸುವುದಿಲ್ಲ ಎಂದು ಆಡಳಿತಾರೂಢ ಮೈತ್ರಿಕೂಟದ ಸದಸ್ಯರು ಪ್ರತಿಪಾದಿಸಿದ್ದಾರೆ.

ದುರುಪಯೋಗಕ್ಕೆ ಕಡಿವಾಣ: ಆಡಳಿತಾರೂಢ ಮೈತ್ರಿಕೂಟ, ವಿಪಕ್ಷ ಮತ್ತು ತಟಸ್ಥ ಸದಸ್ಯರು ಸೇರಿದಂತೆ ಸಮಿತಿಯ ಬಹುತೇಕ ಸದಸ್ಯರು ಕಾನೂನಿನ ರಾಜಕೀಯ ದುರುಪಯೋಗ ತಡೆಯಲು ಹೆಚ್ಚುವರಿ ನಿಯಮಗಳು ಅಗತ್ಯ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ ಎನ್ನಲಾಗಿದೆ. ಎಲ್ಲ ರೀತಿಯ ಪ್ರಕರಣಗಳಿಗೂ ಈ ನಿಯಮ ಅನ್ವಯಿಸುವ ಬದಲು, ನಿರ್ದಿಷ್ಟ ಸ್ವರೂಪದ ಗಂಭೀರ ಅಪರಾಧಗಳಿಗೆ ಮಾತ್ರ ಸೀಮಿತಗೊಳಿಸುವಂತೆ ಸಮಿತಿ ಸಲಹೆ ನೀಡುವ ಸಾಧ್ಯತೆ ಇದೆ. ಸಮಿತಿಯಲ್ಲಿರುವ ಎಐಎಂಐಎಂ ಸಂಸದ ಅಸಾದುದ್ದೀನ್ ಒವೈಸಿ ಮತ್ತು ಎನ್‌ಸಿಪಿ(ಶರದ್ ಪವಾರ್) ಬಣದ ಸಂಸದೆ ಸುಪ್ರಿಯಾ ಸುಳೆ ಸೇರಿದಂತೆ ವಿಪಕ್ಷ ಸದಸ್ಯರು ವರದಿಗೆ ಭಿನ್ನಾಭಿಪ್ರಾಯದ ಟಿಪ್ಪಣಿ ಸಲ್ಲಿಸುವ ನಿರೀಕ್ಷೆ ಇದೆ.

ವಿಪಕ್ಷಗಳ ಪ್ರಮುಖ ಆಕ್ಷೇಪ

ಅಪರಾಧ ಸಾಬೀತಾಗುವ ಮೊದಲೇ ಕೇವಲ ಬಂಧನದ ಆಧಾರದಲ್ಲಿ ಚುನಾಯಿತ ಸರ್ಕಾರದ ಮುಖ್ಯಸ್ಥರು ಅಥವಾ ಸಚಿವರನ್ನು ಕೆಳಗಿಳಿಸುವ ನಿಯಮವನ್ನು ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ರಾಜಕೀಯ ಪ್ರತಿಸ್ಪರ್ಧಿಗಳ ವಿರುದ್ಧ ದುರುಪಯೋಗಪಡಿಸಿಕೊಳ್ಳಬಹುದು ಎಂಬುದು ವಿಪಕ್ಷಗಳ ಆತಂಕವಾಗಿದೆ.

ಮಸೂದೆಯಲ್ಲಿ ಏನಿದೆ?

- ಐದು ವರ್ಷ ಅಥವಾ ಅದಕ್ಕಿಂತ ಹೆಚ್ಚು ವರ್ಷ ಜೈಲು ಶಿಕ್ಷೆ ವಿಧಿಸಬಹುದಾದ ಅಪರಾಧ ಪ್ರಕರಣಕ್ಕೆ ನಿಯಮ ಅನ್ವಯ.
- ಪ್ರಧಾನಮಂತ್ರಿ, ಮುಖ್ಯಮಂತ್ರಿ ಅಥವಾ ಸಚಿವರು ಬಂಧನಕ್ಕೊಳಗಾಗಿ ಸತತ 30 ದಿನ ಕಸ್ಟಡಿಯಲ್ಲಿದ್ದರೆ ಕ್ರಮ.
- ಪ್ರಧಾನಿ ಸಲಹೆ ಮೇರೆಗೆ ರಾಷ್ಟ್ರಪತಿಗಳು ಕೇಂದ್ರ ಸಚಿವರನ್ನು ತೆರವುಗೊಳಿಸಬಹುದು.
- ಸಿಎಂ ಸಲಹೆ ಮೇರೆಗೆ ರಾಜ್ಯಪಾಲರು ರಾಜ್ಯ ಸಚಿವರನ್ನು ವಜಾಗೊಳಿಸಬಹುದು.
- ಸಂಬಂಧಪಟ್ಟವರು ರಾಜೀನಾಮೆ ನೀಡದಿದ್ದರೆ ಕಸ್ಟಡಿಯ 31ನೇ ದಿನ ಸ್ವಯಂಚಾಲಿತವಾಗಿ ಹುದ್ದೆ ಕಳೆದುಕೊಳ್ಳಲಿದ್ದಾರೆ.

ಸಂಪ್ರದಾಯ ಇಲ್ಲದ ಮದುವೆ ಅಸಿಂಧು: ಹೈ

ಪುಟ ೧➡ ನ್ಯಾಯಮೂರ್ತಿಗಳಾದ ಇಲೇಶ್ ವೋರಾ ಮತ್ತು ಆರ್.ಟಿ. ವಚ್ಛಾನಿ ಅವರಿದ್ದ ವಿಭಾಗೀಯ ಪೀಠ ಕಳೆದ ವರ್ಷ ನವೆಂಬರ್‌ನಲ್ಲಿ ಕೌಟುಂಬಿಕ ನ್ಯಾಯಾಲಯ ನೀಡಿದ್ದ ಆದೇಶವನ್ನು ರದ್ದುಗೊಳಿಸಿದೆ. ಅಹಮದಾಬಾದ್‌ನ ಮಹಿಳೆಯೊಂದಿಗಿನ ಕಲ್ಪಿತ ವಿವಾಹವನ್ನು ಶೂನ್ಯ ಮತ್ತು ಅಸಿಂಧು ಎಂದು ಘೋಷಿಸುವಂತೆ ಕೋರಿ ಯುಕೆಯಲ್ಲಿ ನೆಲೆಸಿರುವ ಕೌಶಲ್ ಸೋನಾರ್ ಸಲ್ಲಿಸಿದ್ದ ಮೇಲ್ಮನವಿಯ ಮೇರೆಗೆ ಈ ತೀರ್ಪು ಬಂದಿದೆ. ವಿವಾಹದ ದಾಖಲೆಗಳಲ್ಲಿ ತಮ್ಮ ಸಹಿಯನ್ನು ವಂಚನೆಯಿಂದ ಪಡೆಯಲಾಗಿದೆ ಮತ್ತು ಯಾವುದೇ ಆಚರಣೆಗಳು ನಡೆದಿಲ್ಲ ಎಂದು ಸೋನಾರ್ ವಾದಿಸಿದ್ದರು. ಯಾವುದೇ ಆಚರಣೆಗಳು ನಡೆದಿಲ್ಲ ಮತ್ತು ಇಬ್ಬರೂ ಪತಿ-ಪತ್ನಿಯಾಗಿ ಒಟ್ಟಿಗೆ ವಾಸಿಸಿಲ್ಲ ಎಂದು ಪ್ರತಿವಾದಿ ಮಹಿಳೆಯೇ ಒಪ್ಪಿಕೊಂಡಿರುವುದರಿಂದ ಕೌಟುಂಬಿಕ ನ್ಯಾಯಾಲಯ ಅರ್ಜಿಯನ್ನು ವಜಾಗೊಳಿಸಿ ತಪ್ಪು ಮಾಡಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಪವಿತ್ರ ಸಂಸ್ಕಾರ: ಹಿಂದು ವಿವಾಹ ಕಾಯ್ದೆಯ ಸೆಕ್ಷನ್ 7 ಅನ್ನು ಉಲ್ಲೇಖಿಸಿದ ಹೈಕೋರ್ಟ್, ಪವಿತ್ರ ಅಗ್ನಿಯ ಮುಂದೆ ನಡೆಯುವ ಸಪ್ತಪದಿಯೇ ಹಿಂದು ವಿವಾಹದ ಅಡಿಪಾಯ ಎಂದು ಸ್ಪಷ್ಟವಾಗಿ ಹೇಳಿದೆ. ಮದುವೆ ಕೇವಲ ಹಾಡು ಮತ್ತು ನೃತ್ಯ ಅಥವಾ ಊಟ ಮತ್ತು ಉಪಚಾರದ ಸಂದರ್ಭವಲ್ಲ, ಬದಲಿಗೆ ಅದೊಂದು ಪವಿತ್ರ ಸಂಸ್ಕಾರ. ಭೌಗೋಳಿಕ ಮತ್ತು ಸಾಂಸ್ಕೃತಿಕ ಭಿನ್ನತೆಗಳಿದ್ದರೂ, ಸಾಂಪ್ರದಾಯಿಕ ಆಚರಣೆಗಳು ಒಬ್ಬ ವ್ಯಕ್ತಿಯ ಆಧ್ಯಾತ್ಮಿಕ ಅಸ್ತಿತ್ವವನ್ನು ಶುದ್ಧೀಕರಿಸುತ್ತವೆ, ಪರಿವರ್ತಿಸುತ್ತವೆಂದು ನಂಬಲಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಸೀಟು ಹಂಚಿಕೆಗೆ ಮತ್ತೊಮ್ಮೆ ಅವಕಾಶ: ಎಚ್. ಪ್ರಸನ್ನ

• **ಬೆಂಗಳೂರು:** ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಇಚ್ಛೆ/ಆಯ್ಕೆಗಳನ್ನು ದಾಖಲಿಸಲು ಕೊನೆ ದಿನಾಂಕ ಮುಗಿದಿದ್ದು, ಇದುವರೆಗೂ ಯಾರೆಲ್ಲ ಆಪ್ಷನ್ಸ್ ದಾಖಲಿಸಿಲ್ಲವೋ ಅಂತಹವರು ಅಣಕು ಸೀಟು ಹಂಚಿಕೆ ಫಲಿತಾಂಶದ ನಂತರ ದಾಖಲಿಸಲು ಮತ್ತೊಮ್ಮೆ ಅವಕಾಶ ನೀಡಲಾಗುತ್ತದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಈ ವಿಷಯದಲ್ಲಿ ಆತಂಕ, ಗೊಂದಲ ಬೇಡ. ಸಾಕಷ್ಟು ಸಮಯ ಕೂಡ ಕೊಡಲಾಗಿತ್ತು. ಆದರೂ ಕೆಲವರು ಆಪ್ಷನ್ಸ್ ದಾಖಲು ಮಾಡಿಲ್ಲ, ಅಂತಹವರು ಅಣಕು ಫಲಿತಾಂಶ ಪ್ರಕಟಿಸುವವರೆಗೂ ತಮ್ಮ ಇಷ್ಟದ ಕಾಲೇಜು/ಕೋರ್ಸ್‌ಗಳನ್ನು ಒಂದು ಕಡೆ ಬರೆದಿಟ್ಟುಕೊಂಡು, ನಂತರ ದಾಖಲಿಸಲು ಸಲಹೆ ನೀಡಿದ್ದಾರೆ.

ಮೊದಲ ಸುತ್ತಿನ ಅಣಕು ಫಲಿತಾಂಶದ ನಂತರ ಹೊಸದಾಗಿ ಆಪ್ಷನ್ಸ್ ದಾಖಲಿಸಲು/ಬದಲಿಸಲು ಅವಕಾಶ ಇರುತ್ತದೆ. ಆ ಸಂದರ್ಭದಲ್ಲಿ ಹೊಸಬರು ಕೂಡ ಆಪ್ಷನ್ಸ್ ದಾಖಲು ಮಾಡಬಹುದು ಎಂದು ಹೇಳಿದ್ದಾರೆ. ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಒಳ ಮೀಸಲಾತಿ ಪ್ರಕಾರ ಹೊಸದಾಗಿ ಜಾತಿ ಪ್ರಮಾಣ ಪತ್ರಗಳನ್ನು ತೆಗೆದುಕೊಳ್ಳಬೇಕಿದ್ದು, ಅದರ ಆರ್‌ಡಿ ಸಂಖ್ಯೆ ನಮೂದಿಸಿದರೆ ಮಾತ್ರ ವೆರಿಫಿಕೇಷನ್ ಸ್ಲಿಪ್ ಡೌನ್‌ಲೋಡ್ ಆಗುತ್ತದೆ. ಈ ರೀತಿಯ ಒಳಮೀಸಲಾತಿ ಪ್ರಕಾರ ಹೊಸ ಆರ್‌ಡಿ ಸಂಖ್ಯೆ ನಮೂದಿಸದ ಇನ್ನೂ ಸುಮಾರು 12ಸಾವಿರ ಅಭ್ಯರ್ಥಿಗಳಿದ್ದಾರೆ. ಅಂತಹವರಿಗೆ ಜು.8ರವರೆಗೆ ಹೊಸ ಆರ್‌ಡಿ ಸಂಖ್ಯೆ ನಮೂದಿಸಿಕೊಂಡು, ವೆರಿಫಿಕೇಷನ್ ಸ್ಲಿಪ್ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಅಂತಹವರಿಗೂ ಅಣಕು ಫಲಿತಾಂಶ ನಂತರವೇ ಆಪ್ಷನ್ಸ್ ದಾಖಲಿಸಲು ಅವಕಾಶ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಜು.3ಕ್ಕೆ 70 ಕ್ರೀಡಾಪಟುಗಳ ದಾಖಲೆ ಪರಿಶೀಲನೆ: ವೃತ್ತಿಪರ ಕೋರ್ಸ್ ಪ್ರವೇಶಕ್ಕೆ ಕ್ರೀಡಾ ಕೋಟಾದ ಅಡಿ ಅರ್ಜಿ ಸಲ್ಲಿಸಿರುವ ಒಟ್ಟು 70 ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಆಗಬೇಕಿದ್ದು, ಅಂತಹವರು ಜು.3ರಂದು ಮೂಲ ದಾಖಲೆಗಳ ಸಮೇತ ಕೆಇಎ ಕಚೇರಿಗೆ ಬರಲು ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಸಿಎಂಗೆ ಅಭಿನಂದನೆ



ಬೆಂಗಳೂರಿನ ಸೇಂಟ್ ಜೋಸೆಫ್ ಸಂಸ್ಥೆಯ ಫಾದರ್ ಡೇನಿಯಲ್, ಫಾದರ್ ಚಾರ್ಲ್ಸ್, ಫಾದರ್ ಜೋಯಲ್, ಫಾದರ್ ನೋರ್ವಿನ್ ಹಾಗೂ ಪ್ರವೀಣ್ ಪೀಟರ್ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸಿಎಂ ಗೃಹಕಚೇರಿ ಕೃಷ್ಣಾದಲ್ಲಿ ಬುಧವಾರ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

ಮುಂದಿನ ಪೀಳಿಗೆಗೆ ದ್ವೇಷದ ಭಾರತ ಬೇಡ: ಹರಿಪ್ರಸಾದ್

• **ಬೆಂಗಳೂರು:** ನಮ್ಮ ಮುಂದಿನ ಪೀಳಿಗೆಗೆ ನಾವು ಹಿಂಸೆ, ದ್ವೇಷ ಸುಳ್ಳಿನ ಭಾರತ ದೇಶವನ್ನು ಕೊಡಬಾರದು. ದೇಶಕ್ಕಾಗಿ ಕಾಂಗ್ರೆಸ್‌ನ ಎಷ್ಟು ಜನ ಪ್ರಾಣ ತ್ಯಾಗ ಮಾಡಿದ್ದಾರೆ ಎಂಬುದನ್ನು ಅರಿಯಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದರು.

ಭಾರತ ಜೋಡೋ ಭವನದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಈ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೂ ಸ್ವಾತಂತ್ರ್ಯ ಹೋರಾಟದ ವಿರುದ್ಧವಿದ್ದವರು, ಸ್ವಾತಂತ್ರ್ಯ ಬಂದ ನಂತರವೂ ದೇಶದ ಆಶಯಗಳಿಗೆ ವಿರುದ್ಧವಾಗಿದ್ದಾರೆ. ಹೀಗಾಗಿ ಅವರನ್ನು ನಾವು ವಿರೋಧ ಮಾಡಲೇಬೇಕು ಎಂದರು.

ಭಾರತ ದೇಶದ ವೈವಿಧ್ಯತೆ ಇಡೀ ಪ್ರಪಂಚದಲ್ಲಿ ಎಲ್ಲೂ ಸಿಕ್ಕುವುದಿಲ್ಲ, 7 ಧರ್ಮಗಳು ಇರುವ ದೇಶ ಭಾರತ. 21 ಅಧಿಕೃತ ಭಾಷೆ, ಅನಧಿಕೃತವಾಗಿರುವ 19 ಸಾವಿರ ಭಾಷೆಗಳಿವೆ. ಇಂತಹ ವೈವಿಧ್ಯತೆ ನಾಶ ಮಾಡುತ್ತಿದ್ದಾರೆ. ಒಂದು ರಾಷ್ಟ್ರ ಒಂದು ಶಿಕ್ಷಣ, ಒಂದು ದೇಶ ಒಬ್ಬ ನಾಯಕ, ಒಂದು ದೇಶ ಒಂದು ಧರ್ಮ ಮಾಡಲು ಹೊರಟಿದ್ದಾರೆ. ಕೆಲವರನ್ನು ದೂರವಿಡಲು ಈ ರೀತಿ ಮಾಡುತ್ತಿದ್ದಾರೆ. ಇದನ್ನು ಮಾಡಲು ಸಾಧ್ಯವಿಲ್ಲ, ಬಹುತ್ವ ಭಾರತದ ಆತ್ಮ ಎಂದರು. ಕಾರ್ಯಕ್ರಮದಲ್ಲಿ ಪ್ರಚಾರ ಸಮಿತಿಯ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ, ಮಾಜಿ ಸಚಿವರಾದ ರಾಣಿ ಸತೀಶ್, ಕಿಮ್ಮನೆ ರತ್ನಾಕರ್, ಶಿವಣ್ಣ, ಮಾಜಿ ಸಂಸದ ಎಲ್. ಹನುಮಂತಯ್ಯ ಸೇರಿದಂತೆ ಅನೇಕ ಮುಖಂಡರುಗಳು ಭಾಗವಹಿಸಿದ್ದರು.

ಮೊದಲ ಬಜೆಟ್ ₹400 ಕೋಟಿ

1952ರಲ್ಲಿ ನೆಹರು ಅವರು ಮೊದಲ ಬಜೆಟ್ ಮಂಡನೆ ಮಾಡಿದಾಗ 400 ಕೋಟಿ ಇತ್ತು. 1947ರಲ್ಲಿ ಮಧ್ಯಂತರ ಸರ್ಕಾರ ಬಂದಾಗ ನೆಹರು ಅವರು ಪ್ರಧಾನಮಂತ್ರಿಗಳಾಗಿದ್ದಾಗ 198 ಕೋಟಿ ಬಜೆಟ್ ಇತ್ತು. ಸಾಕ್ಷರತೆ ಶೇ.11 ರಷ್ಟು ಇತ್ತು. ದೇಶದ ಜನರು ಸ್ವಾತಂತ್ರ್ಯ ಹೋರಾಟದ ಶೇ.25 ರಷ್ಟು ಇತಿಹಾಸ ತಿಳಿದುಕೊಂಡರೆ ಸಾಕು ಎಂದರು.

ಕಿರುಸುದ್ದಿ

ಚಾಮುಂಡೇಶ್ವರಿ ನೇರ ದರ್ಶನಕ್ಕೆ 2000 ರೂ.

• **ಮೈಸೂರು:** ನಾಡ ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿಯ ವಿಶೇಷ ದರ್ಶನ ಪಡೆಯುವುದಕ್ಕೆ 2000 ರೂ. ಟಿಕೆಟ್ ದರ ನಿಗದಿ ಮಾಡಲಾಗಿದೆ ಎಂದು ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಾಮುಂಡಿ ಬೆಟ್ಟದಲ್ಲಿ ಜುಲೈ 17ರಿಂದ ಆಷಾಢ ಮಾಸದ ಶುಕ್ರವಾರಗಳ ವಿಶೇಷ ಪೂಜೆ ಆರಂಭವಾಗಲಿದ್ದು, ಶುಕ್ರವಾರದಿಂದ ಭಾನುವಾರದ ತನಕ ಮೂರು ದಿನಗಳ ಕಾಲ ಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶ ನಿಷೇಧ ಮಾಡಲಾಗಿದೆ ಎಂದರು. ಆದರೆ ಬೆಟ್ಟಕ್ಕೆ ಹೋಗಲು ಭಕ್ತರಿಗೆ ವಿಶೇಷ ವಾಹನ ಸೌಲಭ್ಯ ಕಲ್ಪಿಸಲಾಗಿದೆ. ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ದಿನವೂ ಖಾಸಗಿ ವಾಹನಗಳ ಪ್ರವೇಶ ಇಲ್ಲ ಎಂದು ತಿಳಿಸಿದರು. ಆಷಾಢ ಶುಕ್ರವಾರಗಳಂದು ವಿಐಪಿ ಹಾಗೂ ವಿವಿಐಪಿಗಳಿಗೆ ಪ್ರತ್ಯೇಕ ಸಮಯದ ವ್ಯವಸ್ಥೆ ಮಾಡಲಾಗಿದೆ. ಮುಂಜಾನೆ 5.30ರಿಂದ 9.30ರವರೆಗೆ ಮಾತ್ರ ವಿಐಪಿ ಹಾಗೂ ವಿವಿಐಪಿಗಳು ದರ್ಶನ ಮಾಡಬಹುದು. ಹೊರಡಿಸುವ ಶಿಷ್ಟಾಚಾರದ ನಿಯಮಕ್ಕೆ ಒಳಪಟ್ಟವರು ಇದ್ದರೆ ಮಾತ್ರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು. ಶಿಫಾರಸು ಪತ್ರಗಳನ್ನು ತಂದವರಿಗೆ ಪ್ರತ್ಯೇಕ ದರ್ಶನದ ವ್ಯವಸ್ಥೆ ಇಲ್ಲ ಎಂದು ಹೇಳಿದರು.

300 ರೂ. ಟಿಕೆಟ್ ರದ್ದು: ಭಕ್ತರ ವಿಶೇಷ ದರ್ಶನಕ್ಕೆ ಇದ್ದ 300 ರೂಪಾಯಿ ಟಿಕೆಟ್ ಅನ್ನು ಈ ಬಾರಿ ರದ್ದು ಮಾಡಲಾಗಿದೆ. 2 ಸಾವಿರ ರೂಪಾಯಿ ಟಿಕೆಟ್ ಖರೀದಿ ಮಾಡಿದರೆ, ಸರತಿ ಇಲ್ಲದೆ ದೇವರ ದರ್ಶನ ಪಡೆಯಬಹುದು. ಈ ಟಿಕೆಟ್ ಜತೆಗೆ ಚಾಮುಂಡೇಶ್ವರಿ ಫೋಟೋ, ಲಾಡು ಪ್ರಸಾದ ಒಳಗೊಂಡ ವಿಶೇಷ ಕಿಟ್‌ನ್ನು ಕೊಡಲಾಗುತ್ತದೆ.

ಇಂದು ಸಾರಿಗೆ ಬಸ್ ಟಿಕೆಟ್ ದರ ಏರಿಕೆ ನಿರ್ಧಾರ?

• **ಬೆಂಗಳೂರು:** ಗುರುವಾರ(ಜು.2) ನಡೆಯಲಿರುವ ಸಂಪುಟ ಸಭೆಯಲ್ಲಿ ಸಾರಿಗೆ ಬಸ್ ಪ್ರಯಾಣದ ದರ ಏರಿಕೆ ಮಾಡುವ ಕುರಿತು ಸರ್ಕಾರ ನಿರ್ಧಾರ ಕೈಗೊಳ್ಳಲಿದೆ. ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳುವುದಾಗಿ ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದು, ಇಂದಿನ ಸಂಪುಟ ಸಭೆಯಲ್ಲಿ ದರ ಏರಿಕೆ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ. ಡೀಸೆಲ್ ದರ ಏರಿಕೆಯು ಸಾರಿಗೆ ನಿಗಮಗಳಿಗೆ ಹೊರೆಯಾಗಿದ್ದು, ಇದರ ಜತೆಗೆ ನೌಕರರ ವೇತನ ಪರಿಷ್ಕರಣೆ ಹಾಗೂ ಶಕ್ತಿ ಯೋಜನೆಯ ಬಾಕಿ ಅನುದಾನ ಸೇರಿದಂತೆ ಹಲವು ಆರ್ಥಿಕ ಒತ್ತಡಗಳಿಂದ ನಿಗಮಗಳು ತೀವ್ರ ಸಂಕಷ್ಟಕ್ಕೆ ಒಳಗಾಗಿವೆ, ಈಹಿನ್ನೆಲೆಯಲ್ಲಿ ನಾಲ್ಕು ನಿಗಮಗಳಿಂದ ಬಸ್ ದರ ಏರಿಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಗುರುವಾರ ನಡೆಯಲಿರುವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ ಎಂದು ತಿಳಿಸಲಾಗಿದೆ.

ಶಿರಾ ಬಳಿ ಸ್ಫೋಟ ಪ್ರಕರಣ: ಮೂವರ ಬಂಧನ

• **ಅಂಕೋಲಾ:** ತುಮಕೂರಿನ ಶಿರಾ ಬಳಿ ಅಂಕೋಲಾದ ಯುವಕ ಕಾರಿನಲ್ಲಿ ನಾಡಬಾಂಬ್ ಸ್ಫೋಟಿಸಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಅಂಕೋಲಾ ಪೊಲೀಸರು ನಾಡಬಾಂಬ್ ಹೊಂದಿರುವ ಮತ್ತು ಪೂರೈಸಿದ ಆರೋಪದ ಮೇಲೆ ಮೂವರು ಸ್ಥಳೀಯರನ್ನು ಬಂಧಿಸಿದ್ದಾರೆ. ಮೀನು ಹಿಡಿಯಲು ನೀರಿನಲ್ಲಿ ಸ್ಫೋಟಿಸಲು ಬಳಕೆ ಮಾಡುವ ಮೂರು ಸಜೀವ ಬಾಂಬ್‌ಗಳನ್ನು ಹೊನ್ನಳ್ಳಿಯ ಅರಣ್ಯ ಪ್ರದೇಶದಲ್ಲಿ ಪತ್ತೆ ಹಚ್ಚಲಾಗಿದ್ದು, ಧಾರವಾಡದಿಂದ ಬಾಂಬ್ ನಿಷ್ಕ್ರಿಯ ದಳ ಆಗಮಿಸಿ ಅವುಗಳನ್ನು ಸುರಕ್ಷಿತ ರವಾನೆಗೆ ಕ್ರಮಗಳನ್ನು ಕೈಗೊಂಡಿದ್ದಾರೆ. ಮೃತ ನಾಗೇಂದ್ರನ ಸಂಬಂಧಿಗಳಾದ ನಾರಾಯಣ ಗೌಡ, ನಾಗರಾಜ ಗೌಡ, ಶಿರಗುಂಜಿಯ ಸಂದೀಪ ಎನ್ನುವವರನ್ನು ಬಂಧಿಸಿದ್ದಾರೆ.

ನಕಲಿ ಸುದ್ದಿಗಳಿಂದ ಪತ್ರಕರ್ತರು ಹೊರ ಬನ್ನಿ: ಸಿಎಂ ಡಿ.ಕೆ. ಶಿವಕುಮಾರ್

ವೃತ್ತಿಯಲ್ಲಿ ಆತ್ಮಸಾಕ್ಷಿ ಇರಲಿ

• **ಬೆಂಗಳೂರು:** ಪತ್ರಕರ್ತರು ವೃತ್ತಿಯಲ್ಲಿ ತತ್ವ ನೈತಿಕತೆ ಮತ್ತು ಆತ್ಮಸಾಕ್ಷಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸಿದರೆ ಸಮಾಜಕ್ಕೆ ಒಳಿತಾಗುತ್ತದೆ. ನಕಲಿ ಸುದ್ದಿಗಳಿಂದ ಪತ್ರಕರ್ತರು ಹೊರ ಬರಬೇಕೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಬುಧವಾರ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿ, ನಿರ್ಭೀತಿಯ ಪತ್ರಿಕಾ ವೃತ್ತಿ ಇಂದಿನ ಸಂದರ್ಭದಲ್ಲಿ ಅತ್ಯಂತ ಸವಾಲಿನ ಕೆಲಸವಾಗಿದ್ದು, ತತ್ವ ಬದ್ಧ ವೃತ್ತಿಪರತೆ ಅಗತ್ಯವಾಗಿದೆ ಎಂದರು.

ಮೇಕೆದಾಟು ಪಾದಯಾತ್ರೆಯ ವೇಳೆ ನಿತ್ರಾಣಗೊಂಡು ಕಾರ್ಯಕರ್ತರ ತಳ್ಳಾಟದಿಂದ ತೊಂದರೆಯಾಗಿದ್ದ ಘಟನೆಯನ್ನು ಕುಡಿದು ನಡೆದುಕೊಂಡು ಬರುತ್ತಿದ್ದಾರೆ ಎಂಬ ರೀತಿಯಲ್ಲಿ ಬಿಂಬಿಸಲಾಗಿತ್ತು. ಇದು ಜನರಿಗೆ ತಪ್ಪು ಸಂದೇಶ ನೀಡುವ ಉದ್ದೇಶಪೂರ್ವಕ ಪ್ರಯತ್ನವಾಗಿತ್ತು.

ನಾನು ಬೆಳಗ್ಗೆ ಸಾಮಾನ್ಯ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ಹೋಗಿದ್ದೆ. ಆದರೆ, ಆಸ್ಪತ್ರೆಗೆ ದಾಖಲಾಗಿದ್ದೇನೆ ಎಂದು ಕೆಲವು ಟಿವಿ ವಾಹಿನಿಗಳು ಪ್ರಸಾರ ಮಾಡಿದ್ದವು. ಇದು ಸಂಪೂರ್ಣ ತಪ್ಪು ಸುದ್ದಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾನು ತಪ್ಪು ಮಾಡಿದರೆ ಬಹಿರಂಗಪಡಿಸಿ: ನಾನು ತಪ್ಪು ಮಾಡಿದರೆ ಅದನ್ನು ಬಹಿರಂಗಪಡಿಸಿ. ಆದರೆ ಸುಳ್ಳು ಸುದ್ದಿಗಳನ್ನು ಪ್ರಕಟಿಸಬೇಡಿ, ಪ್ರಸಾರ ಮಾಡಬೇಡಿ. ಸುದ್ದಿ ಪ್ರಕಟವಾಗುವವರೆಗೆ ಅದು ಪತ್ರಕರ್ತರದ್ದಾಗಿರುತ್ತದೆ. ಪ್ರಕಟವಾದ ನಂತರ ಅದು ಸಮಾಜದ ಆಸ್ತಿಯಾಗುತ್ತದೆ. ಆದ್ದರಿಂದ ಪ್ರತಿಯೊಂದು ಸುದ್ದಿಯಲ್ಲೂ ಸತ್ಯ ಮತ್ತು ಪ್ರಾಮಾಣಿಕತೆ ಇರಬೇಕು ಎಂದು ಹೇಳಿದರು.

ಮಾಜಿ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಮಾಧ್ಯಮ ಯಾರ ಒತ್ತಡಕ್ಕೂ ಮಣಿಯದೇ ಕೆಲಸ ಮಾಡಿದಾಗ ಮಾತ್ರ ವ್ಯವಸ್ಥೆ, ಸಮಾಜಕ್ಕೆ ಒಳ್ಳೆಯದಾಗುತ್ತದೆ. ಕಳೆದ ಒಂದು ದಶಕದಲ್ಲಿ ಮಾಧ್ಯಮ ಅತ್ಯಂತ ವೇಗವಾಗಿ ಬದಲಾವಣೆ ಆಗಿದೆ. ಸಾಮಾಜಿಕ ಜಾಲತಾಣ ಬಂದ ಮೇಲಂತೂ ಮಾಧ್ಯಮಕ್ಕೆ ದೊಡ್ಡ ಸವಾಲೇ ಎದುರಾಗಿದೆ. ನಿಜವಾದ ಸುದ್ದಿ ಯಾವುದು ಎನ್ನುವುದನ್ನು ಸಾರ್ವಜನಿಕರು ತಿಳಿದುಕೊಳ್ಳುವುದು ಕಷ್ಟವಾಗಿದೆ. ಈಗ ಎಲ್ಲರೂ ಅಭಿಪ್ರಾಯ ವ್ಯಕ್ತಪಡಿಸುವವರೇ ಆಗಿದ್ದಾರೆ. ಆಕರ್ಷಣೀಯ ಸುದ್ದಿಗಳೇ ಪ್ರಾಧಾನ್ಯತೆ ಪಡೆದುಕೊಳ್ಳುತ್ತಿದೆ. ಮಾನವೀಯತೆಯ ಸುದ್ದಿ ಪ್ರಧಾನವಾಗಿ ಬರಬೇಕು ಎಂದು ಅಭಿಲಾಷೆ ವ್ಯಕ್ತಪಡಿಸಿದರು.

ವಾರ್ತಾಭಾರತಿ ಸಂಪಾದಕ ಅಬ್ದುಸ್ಸಲಾಂ ಪುತ್ತಿಗೆ ಅವರು ಡಿಜಿಟಲ್ ಯುಗದಲ್ಲಿ ನಿಜವಾದ ಪತ್ರಕರ್ತ ಯಾರು ಎಂಬ ವಿಷಯದ ಕುರಿತು ಸಂವಾದ ನಡೆಸಿದರು. ಈ ವೇಳೆ ಆಯ್ದ ಪತ್ರಕರ್ತರಿಗೆ ಮಾಧ್ಯಮ ಕಿಟ್ ವಿತರಿಸಲಾಯಿತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಅನುಚೇತ್, ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಆರ್. ಪೂರ್ಣಿಮಾ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಹಾಗೂ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.



> ಬೆಂಗಳೂರಿನಲ್ಲಿ ಇರುವ ವರದಿಗಾರರು ರಾಜಕೀಯ ಆಯಾಮದ ವರದಿಯಲ್ಲೇ ಮಗ್ನರಾಗಿರುತ್ತಾರೆ, ನಿಜವಾದ ಪತ್ರಕರ್ತರು ಇರೋದು ಜಿಲ್ಲೆಯಲ್ಲಿ. ಅವರು ವಿವಿಧ ವಿಷಯಗಳ ಬಗ್ಗೆ ಬೆಳಕು ಚೆಲ್ಲುತ್ತಾರೆ.
>
> ■ **ಆಯೇಶಾ ಖಾನಂ,** ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ

ನಕಲಿ ಖಾತೆಗಳಿಗೆ ಗೃಹಲಕ್ಷ್ಮಿ ಯೋಜನೆ ಹಣ

ಇನ್ನೂ ಏಕೆ ಎಫ್‌ಐಆರ್ ದಾಖಲಿಸಿಲ್ಲ?: ಸಿ.ಟಿ. ರವಿ

• **ಬೆಂಗಳೂರು:** ಗೃಹಲಕ್ಷ್ಮಿ ಹಣ ನಕಲಿ ಖಾತೆಗಳಿಗೆ ಹಣ ಹೋಗಿದೆ. ಒಂದೇ ಖಾತೆಗೆ ಹಣ ಹಾಕಿದ್ದಾರೆ, ಸತ್ತವರ ಹೆಸರಿಗೆ ಹಣ ಹೋಗಿದೆ ಎಂದು ಸಿಎಜಿ ವರದಿ ತಿಳಿಸಿದೆ. ಇದರ ಕುರಿತು ಯಾಕೆ ಇನ್ನೂ ಎಫ್‌ಐಆರ್ ದಾಖಲಿಸಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ಎಂದು ಪ್ರಶ್ನಿಸಿದ್ದಾರೆ.



ಬುಧವಾರ ನಗರದಲ್ಲಿ ಮಾಧ್ಯಮ ಗಳೊಂದಿಗೆ ಮಾತನಾಡಿ, ಆ ಹಣ ಎಲ್ಲಿ ಹೋಗಿದೆ, ಅದರ ತನಿಖೆಗೆ ಹಾಗೂ ಈಗಿನ ಸಿಎಜಿ ವರದಿ ಕುರಿತು ತನಿಖೆಗೆ ಯಾಕೆ ಆದೇಶ ಮಾಡಿಲ್ಲ, ಇದರ ಹಿಂದೆ ಒಂದು ದೊಡ್ಡ ಷಡ್ಯಂತ್ರ ಇದ್ದಂತಿದೆ. ಅಕ್ರಮದ ವಾಸನೆ ಬಡಿಯುತ್ತಿದೆ. ಸರ್ಕಾರ ತಕ್ಷಣ ಕೇಸು ದಾಖಲಿಸಿಕೊಳ್ಳಬೇಕು. ವಿಶೇಷ ತನಿಖೆಗೆ ತಂಡವನ್ನು ನಿಯುಕ್ತಿ ಮಾಡಬೇಕೆಂದು ಆಗ್ರಹಿಸಿದರು.

ಯಾಕೆ ಇವತ್ತಿನವರೆಗೂ ಎಸ್‌ಐಟಿ ರಚಿಸಿಲ್ಲ ಎಂದು ಪ್ರಶ್ನಿಸಿದ ಸಿ.ಟಿ. ರವಿ ಅವರು, ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿಗೆ ಈಗ್ಯಾಕೆ ಕಂಡಿಷನ್ ಹಾಕಲಾಗುತ್ತಿದೆ. ಆಗ ಕಾಕಾಪಾಟೀಲ್ಗೂ ಫ್ರೀ,ಮಹದೇವಪ್ಪನಿಗೂ ಫ್ರೀ ಎಂದಿದ್ದರು. ಈಗ್ಯಾಕೆ ಪರಿಷ್ಕರಣೆ, ನಮ್ಮ ಆರ್ಥಿಕ ಸ್ಥಿತಿ ಕಂಗೆಟ್ಟಿದೆ ಕೊಡಲಾಗುತ್ತಿಲ್ಲ ಎಂದು ಹೇಳಿರಿ ಎಂದರು.

ಡಿ.ವಿ ಸದಾನಂದ ಗೌಡರ ಆಡಿಯೊ ಎನ್ನಲಾಗುತ್ತಿರುವುದಕ್ಕೆ ಅವರೇ ನನ್ನದಲ್ಲ ಅಂತ ಸ್ಪಷ್ಟನೆ ಕೊಟ್ಟಿದ್ದಾರೆ. ಅವರೇ ನಿರಾಕರಿಸಿದ ಮೇಲೆ ಏನೂ ಹೇಳುವುದು ಇಲ್ಲ, ಎಲ್ಲ ಕಾಲಕ್ಕೂ ನಮ್ಮಲ್ಲಿ ಒಗ್ಗಟ್ಟು ಇರುತ್ತದೆ. ವಿಷಯಾಧಾರಿತ ಹೋರಾಟ ಮತ್ತು ಒಗ್ಗಟ್ಟು ಮಾತ್ರ ನಮ್ಮನ್ನು ಬೆಳೆಸುತ್ತದೆ. ನಮ್ಮ ಪರವಾದ ವಾತಾವರಣ ನಿರ್ಮಾಣವಾಗುತ್ತದೆ ಎಂದರು.

ಕಾಂಗ್ರೆಸ್ ನಾಯಕರ ಆರೋಪ ಸುಳ್ಳು

ಅಯೋಧ್ಯೆ ರಾಮಮಂದಿರ ಹುಂಡಿ ಕಳವು ಸಂಬಂಧ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಕಾಂಗ್ರೆಸ್‌ನವರು ಆರೋಪ ಮಾಡುತ್ತಿರುವ ರೀತಿಯಲ್ಲಿ ಟ್ರಸ್ಟ್‌ನಲ್ಲಿ ಬಿಜೆಪಿಯವರು ಯಾರೂ ಇಲ್ಲ, ಆದರೂ ಬಿಜೆಪಿಯವರು ಲೂಟಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಹುಂಡಿ ಕಳವು ಆಗಿರುವುದರಿಂದ ನಮಗೂ ನೋವಾಗಿದೆ. ಅಯೋಧ್ಯೆ ಐದು ಶತಮಾನಗಳ ಹೋರಾಟ. ಲಕ್ಷಾಂತರ ಜನ ರಾಮಮಂದಿರ ಪುನರ್ ನಿರ್ಮಾಣಕ್ಕಾಗಿ ಜೀವ ತೆತ್ತಿದ್ದಾರೆ. ಕೋಟ್ಯಂತರ ಜನರ ಭಾವನೆ ಬೆರೆಸಿ ಮಂದಿರ ನಿರ್ಮಾಣ ಆಗಿದೆ ಎಂದರು.

ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ಸಿಎಂ ಸೂಚನೆ

ಚಿತ್ರನಗರಿ ನಿರ್ಮಾಣಕ್ಕೆ ಅನುದಾನ ಬಿಡುಗಡೆ

• **ಬೆಂಗಳೂರು:** ಹೊಸ ಚಲನಚಿತ್ರ ನೀತಿ, ಸಹಾಯಧನ ಹೆಚ್ಚಳ, ಚಲನಚಿತ್ರ ಪ್ರಾಚ್ಯಾಗಾರ ಪ್ರಾರಂಭ, ಚಲನಚಿತ್ರ ಪ್ರಶಸ್ತಿ ಪ್ರಕ್ರಿಯೆ ಪ್ರಾರಂಭಿಸಲು ಸೂಕ್ತ ಕ್ರಮ, ಚಿತ್ರನಗರಿ ನಿರ್ಮಾಣಕ್ಕೆ ಘೋಷಣೆ ಮಾಡಿರುವ ಅನುದಾನದ ಬಿಡುಗಡೆಯ ಬಗ್ಗೆ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಸೂಕ್ತ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದ್ದಾರೆ.

ಚಿತ್ರರಂಗದ ಹಲವು ಸಮಸ್ಯೆಗಳನ್ನು ಹೊತ್ತು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆ ಜಯಮಾಲಾ ನೇತೃತ್ವದಲ್ಲಿ ಸಿಎಂ ಅವರನ್ನು ಮಂಗಳವಾರ ವಿಧಾನಸೌಧದಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದರು. ಚಲನಚಿತ್ರ ವಾಣಿಜ್ಯ ಮಂಡಳಿ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಿಎಂ ಯಾವ ರೀತಿಯಲ್ಲಿ ಸಹಾಯ ಮಾಡಬಹುದು ಎಂದು ಆಲೋಚಿಸಲಾಗುವುದು ಎಂದು ತಿಳಿಸಿದರು. ಅಲ್ಲದೇ, ಬಿಡಿಎಯಿಂದ ಐದು ಎಕರೆ ಭೂಮಿ ನೀಡುವ ಕುರಿತಾಗಿ, ಯಾವ ರೀತಿಯಲ್ಲಿ ಸರ್ಕಾರ ಸಹಾಯ ಮಾಡಬಹುದು ಎನ್ನುವ ಬಗ್ಗೆ ವರದಿ ನೀಡಲು ಬಿಡಿಎ ಅಧಿಕಾರಿಗಳಿಗೆ ಸಿಎಂ ಸೂಚಿಸಿದರು.

ಕನ್ನಡ ಚಿತ್ರರಂಗ ಉಳಿವಿಗಾಗಿ ಸಮಗ್ರ ಹೊಸ ಚಲನಚಿತ್ರ ನೀತಿ ಸೇರಿದಂತೆ ಚಲನಚಿತ್ರ ಪ್ರಾಚ್ಯಾಗಾರ (ಆರ್ಕೈವ್) ಸಹಾಯಧನ ಹೆಚ್ಚಳ, ಸರ್ಕಾರದ ಓಟಿಟಿ ವೇದಿಕೆ, ಸಿನಿಮಾಟೋಗ್ರಫಿ ಕಾಯ್ದೆ ತಿದ್ದುಪಡಿ, ಏಕಪರದೆ ಚಿತ್ರಮಂದಿರಗಳ ನವೀಕರಣ, ಆಧುನೀಕರಣಕ್ಕೆ ವಿಶೇಷ ನೆರವು, ಚಿತ್ರರಂಗದವರಿಗೆ ಫ್ಲಾಟ್ ನಿರ್ಮಾಣಕ್ಕೆ ಬಿಡಿಎಯಿಂದ ಐದು ಎಕರೆ ಭೂಮಿ ನೀಡುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ವಾಣಿಜ್ಯ ಮಂಡಳಿಯವರು ಮನವಿ ಸಲ್ಲಿಸಿದರು.

ಮನವಿ ಪತ್ರದಲ್ಲಿನ ಇತರೇ ಅಂಶಗಳು ಈ ಕೆಳಗಿನಂತಿವೆ: ಹೊಸ ಚಲನಚಿತ್ರ ನೀತಿಯಲ್ಲಿ ಓಟಿಟಿ ಮತ್ತು ಡಿಜಿಟಲ್ ವಿತರಣಾ ವ್ಯವಸ್ಥೆ, ಎಐ ಮತ್ತು ಹೊಸ ತಂತ್ರಜ್ಞಾನ ಬಳಕೆ, ಕನ್ನಡ ಚಿತ್ರರಂಗ ರಕ್ಷಣೆ, ಸಣ್ಣ ಚಿತ್ರಗಳಿಗೆ ಪ್ರೋತ್ಸಾಹ, ಚಿತ್ರಮಂದಿರಗಳ ಉಳಿವು, ಕಲಾವಿದರು ಮತ್ತು ಕಾರ್ಮಿಕರ ಕಲ್ಯಾಣ, ಚಲನಚಿತ್ರ ಶಿಕ್ಷಣ ಮತ್ತು ಆರ್ಕೈವ್, ಜಾಗತಿಕ ಮಾರುಕಟ್ಟೆ ವಿಸ್ತರಣೆ ಬಗ್ಗೆ ಬದಲಾವಣೆ ತರಬೇಕು.



ಪ್ರತಿವರ್ಷ 250ಕ್ಕೂ ಹೆಚ್ಚು ಕನ್ನಡ ಚಿತ್ರಗಳು ಬಿಡುಗಡೆಯಾಗುತ್ತೆ. ಅನೇಕ ಓಟಿಟಿ ವೇದಿಕೆಗಳು ಬಹುರಾಷ್ಟ್ರೀಯ ಕಂಪೆನಿಗಳಾಗಿರುವ ಕಾರಣಕ್ಕೆ ಸಣ್ಣ ಮೊತ್ತದ ಸಿನಿಮಾಗಳು ಎಂದು ಖರೀದಿ ಮಾಡುತ್ತಿಲ್ಲ ಆದ ಕಾರಣಕ್ಕೆ ಸರ್ಕಾರದಿಂದಲೇ ಸರ್ಕಾರಿ ಓಟಿಟಿ ವೇದಿಕೆ ಪ್ರಾರಂಭಿಸಬೇಕು. ಸಿನಿಮಾಟೋಗ್ರಫಿ ಕಾಯ್ದೆ ತಿದ್ದುಪಡಿ ಮೂಲಕ ಚಿತ್ರಮಂದಿರಗಳ ಲೈಸೆನ್ಸ್ ನವೀಕರಣಕ್ಕೆ ಏಕಗವಾಕ್ಷಿ ಯೋಜನೆ ತರಬೇಕು. ಹೊಸ ಬಡಾವಣೆ, ಗ್ರಾಮೀಣ ಪ್ರದೇಶದಲ್ಲಿ ಹೊಸ ಚಿತ್ರಮಂದಿರಗಳನ್ನು ನಿರ್ಮಿಸುವುದಕ್ಕೆ ವಿಶೇಷ ಪ್ರೋತ್ಸಾಹ, ತೆರಿಗೆ, ಮೂಲಸೌಕರ್ಯ ವ್ಯವಸ್ಥೆ ಮಾಡುವುದು. ಹಳೆಯ ಏಕ ಪರದೆ ಚಿತ್ರಮಂದಿರಗಳ ನವೀಕರಣ, ಆಧುನೀಕರಣಕ್ಕೆ ನೆರವಿನ ಜೊತೆಗೆ ಶೇ.4 ರಷ್ಟು ಬಡ್ಡಿ ದರದಲ್ಲಿ ಸಾಲ ದೊರೆಯುವ ವ್ಯವಸ್ಥೆ ಮಾಡಬೇಕು.

ಕರಾವಳಿಯಲ್ಲಿ ಮಳೆ | 4 ಮಂದಿ ಪ್ರಾಣಾಪಾಯದಿಂದ ಪಾರು

ತಡೆಗೋಡೆ ಕುಸಿದು ಮೂವರು ಮೃತ್ಯು

• **ಮಂಗಳೂರು:** ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಸೇರಿದಂತೆ ಕಳೆದ3 ದಿನಗಳಿಂದಕರಾವಳಿಯಲ್ಲಿಭಾರೀಮಳೆಯಾಗುತ್ತಿದ್ದು, ಅಲ್ಲಲ್ಲಿ ಪ್ರಾಕೃತಿಕ ವಿಕೋಪಗಳು ಸಂಭವಿಸುತ್ತಿವೆ. ಮಂಗಳೂರಿನ ನಾಗುರಿ ಎಂಬಲ್ಲಿ ಬುಧವಾರ ಮುಂಜಾನೆ ಬೃಹತ್ ತಡೆಗೋಡೆಯೊಂದು ಮನೆಗಳ ಮೇಲೆ ಕುಸಿದು ಬಿದ್ದ ಪರಿಣಾಮ ಇಬ್ಬರು ಮಕ್ಕಳು ಸೇರಿದಂತೆ 3 ಮಂದಿ ದಾರುಣವಾಗಿ ಮೃತ ಪಟ್ಟಿದ್ದಾರೆ. ಘಟನೆಯಲ್ಲಿ ಗಾಯಗೊಂಡಿರುವ 3 ಮಂದಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.



ಅನಾಮಿಕ ಚೌರಾಸಿಯ (7), ತನು (3) ಮತ್ತು ಶಾಂತ (35) ಮೃತದುರ್ದೈವಿಗಳು. ಅಲ್ಕಾ(14), ಅನುಷಾ (11) ಮತ್ತು ಬಾಲಕೃಷ್ಣ (48) ಎಂಬವರು ಗಾಯಗೊಂಡವರಾಗಿದ್ದಾರೆ. ಅವಘಡಕ್ಕೆ ಸಿಲುಕಿದ 4 ಮಂದಿಯನ್ನು ರಕ್ಷಣಾ ತಂಡ ಪ್ರಾಣಾಪಾಯದಿಂದ ಪಾರು ಮಾಡಿದೆ. ಇವರೆಲ್ಲರೂ ಮೂಲತಃ ಬಿಹಾರ ರಾಜ್ಯದವರಾಗಿದ್ದು, ಪ್ರಸ್ತುತ ಮಂಗಳೂರಿನ ನಾಗುರಿಯಲ್ಲಿರುವ ಕಂಕನಾಡಿ ಪೊಲೀಸ್ ಠಾಣಾ ಹಿಂಭಾಗದಲ್ಲಿ ಕಳೆದ 20 ವರ್ಷಗಳಿಂದ ವಾಸ ಮಾಡುತ್ತಿದ್ದರು.

ನಾಲ್ಕು ಮನೆಗಳ ಮೇಲೆ ತಡೆಗೋಡೆ ಕುಸಿತ: ಸಂಭವಿಸಿದ ಈ ದುರಂತದಲ್ಲಿ ಕಾಂಪೌಂಡ್ ಗೋಡೆಯ ಕೆಳಭಾಗದಲ್ಲಿದ್ದ ನಾಲ್ಕು ಬಾಡಿಗೆ ಮನೆಗಳ ಹಿಂಭಾಗದ ಗೋಡೆಗಳು ಕುಸಿದಿವೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ರಕ್ಷಣಾ ತಂಡಗಳು ಮಣ್ಣಿನಡಿ ಸಿಲುಕಿದ್ದವರು ರಕ್ಷಣೆಯ ಕಾರ್ಯದಲ್ಲಿ ನಿರತವಾದವು. ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ದರ್ಶನ್ ಎಚ್. ವಿ, ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್ ಮತ್ತಿತರ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಿಹಾರ ಮೂಲದ ಲಾಲ್‌ಬಾಬು ಹಾಗೂ ಪತ್ನಿ ಇಂದು ಎಂಬವರು ಕಳೆದ ಎಂಟು ವರ್ಷಗಳಿಂದ ಇಲ್ಲಿ ವಾಸವಾಗಿದ್ದರು. ದಂಪತಿಗೆ ನಾಲ್ವರು ಪುತ್ರಿಯರಿದ್ದರು. ಘಟನೆಯಲ್ಲಿ ಲಾಲ್‌ಬಾಬು, ಇಂದು ಹಾಗೂ ಇಬ್ಬರು ಮಕ್ಕಳನ್ನು ಸುರಕ್ಷಿತವಾಗಿ ರಕ್ಷಣೆ ಮಾಡಲಾಗಿದೆ. ಇಬ್ಬರು ಬಾಲಕಿಯರು ಮೃತಪಟ್ಟಿದ್ದಾರೆ.

₹5 ಲಕ್ಷ ಪರಿಹಾರ ಘೋಷಣೆ

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಯು.ಟಿ.ಖಾದರ್ ಪರಿಶೀಲನೆ ನಡೆಸಿದರು. ಮನೆ ಮಂದಿಗೆ ಸಾಂತ್ವಾನ ಹೇಳಿದ ಅವರು, ಮೃತಪಟ್ಟ ಕುಟುಂಬಗಳಿಗೆ ಸರ್ಕಾರದ ನಿಯಮಾನುಸಾರ ತಲಾ ಐದು ಲಕ್ಷ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು,, ಅವರಿಗೆ ಸರಕಾರದ ವತಿಯಿಂದ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು. ಅಲ್ಲದೆ ನಿಯಮಾನುಸಾರ 1.20 ಲಕ್ಷ ರೂಪಾಯಿ ಮನೆ ಪರಿಹಾರ ಮೊತ್ತ ಕೂಡ ಶೀಘ್ರ ವಿತರಿಸಲಾಗುವುದು ಎಂದು ಸಚಿವ ಖಾದರ್ ತಿಳಿಸಿದರು.

ಮಾದಕವಸ್ತು ವಿರೋಧಿ ದಿನಾಚರಣೆಯಲ್ಲಿ ಡಾ. ಡಿ. ವೀರೇಂದ್ರ ಹೆಗ್ಗಡೆ ಭಾಗಿ

1.31 ಲಕ್ಷ ವಿದ್ಯಾರ್ಥಿಗಳಿಂದ ಸ್ವಾಸ್ಥ್ಯ ಸಂಕಲ್ಪ

• **ಧರ್ಮಸ್ಥಳ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ವತಿಯಿಂದ ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆಯ ಪ್ರಯುಕ್ತ ರಾಜ್ಯದ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ದುಶ್ಚಟಗಳ ವಿರುದ್ಧ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಆನ್‌ಲೈನ್ ಮೂಲಕ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಗ್ರಾಮಾಭಿವೃದ್ಧಿ ಯೋಜನೆಯ ಕೇಂದ್ರಕಚೇರಿಯಲ್ಲಿ ನಡೆದ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು. ರಾಜ್ಯದ 1,281 ಶಾಲಾ-ಕಾಲೇಜುಗಳ 1,31,039 ವಿದ್ಯಾರ್ಥಿಗಳು ಏಕಕಾಲದಲ್ಲಿ ಆನ್‌ಲೈನ್ ಮೂಲಕ ಮಾಹಿತಿಯನ್ನು ಪಡೆದರು. ಯುವಜನತೆ ನಮ್ಮ ದೇಶದ ಆಸ್ತಿ. ಅವರು ದುಶ್ಚಟಗಳ ಮೊರೆ ಹೋಗದಂತೆ ಜಾಗೃತಿ ವಹಿಸಬೇಕಾದ ಅಗತ್ಯತೆ ಇಂದು ನಮ್ಮೆದುರಿಗಿದೆ. ಪಂಚೇಂದ್ರಿಯಗಳು ಆಕರ್ಷಿಸುತ್ತವೆ. ಆದರೆ ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾದ ಕರ್ತವ್ಯ ನಮ್ಮದು. ಪ್ರಜ್ಞಾಪೂರ್ವಕವಾಗಿ ತಪ್ಪುಗಳಾಗದಂತೆ ಜಾಗೃತೆವಹಿಸಬೇಕು. ದುಶ್ಚಟಗಳು ನಮ್ಮ ಬದುಕನ್ನು ಹಾಳು ಮಾಡುತ್ತವೆ. ಕೆಟ್ಟದ್ದನ್ನು ತಿರಸ್ಕರಿಸುವ ಮನೋಭಾವನಮ್ಮಲ್ಲಿರಬೇಕು. ದುಶ್ಚಟಗಳಿಂದ ದೂರವಿದ್ದಲ್ಲಿ ಸುಂದರ ಬದುಕು ನಮ್ಮೆದುರಿಗಿದೆ. ಇವುಗಳು ತನ್ನನ್ನು ಮಾತ್ರ ಕೆಡಿಸುವುದಲ್ಲದೆ ಸಮಾಜವನ್ನೇ ಕೆಡಿಸುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ದಾರಿತಪ್ಪದೆ ಸದಾ ಎಚ್ಚರಿಕೆಯಿಂದ ಇರಬೇಕು ಎಂದು ಹೆಗ್ಗಡೆ ಮಾರ್ಗದರ್ಶನ ನೀಡಿದರು.



ಹೇಮಾವತಿ ವೀ. ಹೆಗ್ಗಡೆ ಮಾತನಾಡಿ, ಯುವಜನತೆ ಮತ್ತು ವಿದ್ಯಾರ್ಥಿಗಳನ್ನು ಮಾದಕ ವ್ಯಸನಗಳಿಂದ ದೂರವಿರಿಸುವ ಪ್ರಯತ್ನಗಳನ್ನು ಗ್ರಾಮಾಭಿವೃದ್ಧಿ ಯೋಜನೆಯ ಜನ ಜಾಗೃತಿ ವೇದಿಕೆ ಮಾಡುತ್ತಾ ಬಂದಿದೆ. ಮದ್ಯಮುಕ್ತ ಸಮಾಜದ ನಿರ್ಮಾಣದ ಪ್ರಯತ್ನ ಆಂದೋಲನದ ರೀತಿಯಲ್ಲಿ ನಡೆಯುತ್ತಿದೆ. ಮಾದಕವ್ಯಸನದಲ್ಲಿ ನಮ್ಮ ದೇಶ ಬಹಳ ಮುಂದಿದೆ. ಜೀವನದಲ್ಲಿ ಎಂದಿಗೂ ಮೌಲ್ಯ, ನೈತಿಕತೆಯನ್ನು ಕಳೆದುಕೊಳ್ಳಬಾರದು ಎಂದರು. ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್ ಎಸ್. ಎಸ್. ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮ ನಡೆಯಿತು. ಜನಜಾಗೃತಿ ವೇದಿಕೆಯ ಪ್ರಾದೇಶಿಕ ನಿರ್ದೇಶಕ ವಿವೇಕ್ ವಿನ್ಸೆಂಟ್ ಪಾಯಸ್ ಸ್ವಾಗತಿಸಿದರು. ಯೋಜನೆಯ ಟ್ರಸ್ಟಿಗಳಾದ ಡಾ. ಹರೀಶ್ ಕೃಷ್ಣಸ್ವಾಮಿ, ಮುಖ್ಯ ಹಣಕಾಸು ಅಧಿಕಾರಿಗಳಾದ ಶಾಂತಾರಾಮ್ ಆರ್. ಪೈ, ಪ್ರಾದೇಶಿಕ ನಿರ್ದೇಶಕ ಡಿ.ಜಯರಾಮ್ ಉಪಸ್ಥಿತರಿದ್ದರು.

ಸಮಾಜಸೇವೆಗೆ ಮುಂದಾಗಿ

ಯುವ ಸಮುದಾಯ ತಮ್ಮ ಜಾಗೃತ ಮನಸ್ಸನ್ನು ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಉಪಯೋಗಿಸಬೇಕು. ಅವರು ಯಾವುದೇ ಮಾದಕ ವ್ಯಸನಕ್ಕೆ ಬಲಿಯಾಗದೆ ದೇಶದ ಸಂಪನ್ಮೂಲ ವ್ಯಕ್ತಿಗಳಾಗಿ ಜನಸೇವೆ, ಸಮಾಜಸೇವೆಯಲ್ಲಿ ತೊಡಗಿಕೊಳ್ಳುವ ಮೂಲಕ ಈ ಸಮಾಜವನ್ನು ಕಾಪಾಡಬೇಕು ಎಂದು ಬೆಂಗಳೂರಿನ ನಾರಾಯಣ ಹೃದಯಾಲಯದ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ತಿಳಿಸಿದರು.

ಕ್ವಾರಿ, ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ ಒತ್ತಾಯ

ಗಣಿ ಮಾಲೀಕರಿಗೆ ಭದ್ರತೆ ನೀಡಲಿ

• **ಬೆಂಗಳೂರು:** ಕಳೆದ 10 ವರ್ಷಗಳಿಂದ ವಿವಿಧ ಬೇಡಿಕೆಗಳಿಗಾಗಿ ಹೋರಾಟ ನಡೆಸಲಾಗುತ್ತಿದೆ. ಅಕ್ರಮ ಗಣಿಗಾರಿಕೆಗೆ ತಡೆ ಹಾಕಿ, ಪ್ರಾಮಾಣಿಕ ಗಣಿ ಮಾಲೀಕರಿಗೆ ಭದ್ರತೆ ಒದಗಿಸಬೇಕು ಎಂದು ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ರವೀಂದ್ರಶೆಟ್ಟಿ ತಿಳಿಸಿದರು.

ಬುಧವಾರ ನಗರದ ಪ್ರೆಸ್‌ಕ್ಲಬ್ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023ರಲ್ಲಿ ಕಾನೂನುಬದ್ಧವಾಗಿ ಗಣಿ ನಡೆಸಲು ಸಾಧ್ಯವಾಗುತ್ತಿಲ್ಲವೆಂದು ಬೆಳಗಾವಿ ವಿಧಾನಸಭೆಯ ಅಧಿವೇಶನ ಸಂದರ್ಭದಲ್ಲಿ ಪ್ರತಿಭಟನೆ ನಡೆಸಲಾಗಿತ್ತು ಎಂದು ಹೇಳಿದರು.

ಒಮ್ಮೆ ಮಾತ್ರದ ಇತ್ಯರ್ಥ (ಒಟಿಎಸ್) ಯೋಜನೆಯ ಅಡಿಯಲ್ಲಿ ರಾಜಧನ ಪಾವತಿ ಬಾಕಿಯನ್ನು ಪಾವತಿಸುವಂತೆ ಸರ್ಕಾರ ಸೂಚಿಸಿದೆ. ಆದರೆ, ವೈಜ್ಞಾನಿಕವಲ್ಲದ ಡ್ರೋನ್ ಸಮೀಕ್ಷೆಯನ್ನು ಆಧರಿಸಿ ಕೋಟ್ಯಂತರ ರೂ. ದಂಡ ವಿಧಿಸಲಾಗುತ್ತಿದೆ. ಒಬ್ಬೊಬ್ಬ ಮಾಲೀಕರಿಗೆ ವಿಭಿನ್ನ ಪ್ರಮಾಣದಲ್ಲಿ ದಂಡ ನಿಗದಿಪಡಿಸಲಾಗಿದ್ದು, ಕನಿಷ್ಠ 50 ಲಕ್ಷ ರೂ.ವರೆಗೆ ದಂಡ ವಿಧಿಸಲಾಗಿದೆ. ಇಷ್ಟೊಂದು ದೊಡ್ಡ ಮೊತ್ತವನ್ನು ಪಾವತಿಸುವುದು ಸಾಧ್ಯವಿಲ್ಲ ಎಂದು ಹೇಳಿದರು.

ಈ ಸಂಬಂಧ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿದ್ದು, ರಾಜಧನ ಪಾವತಿ ಸಂಗ್ರಹಣೆ ಕುರಿತಂತೆ ಎಲ್ಲಾ ಸಂಬಂಧಿತ ಇಲಾಖೆಗಳಿಗೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ಗೌರವಾಧ್ಯಕ್ಷ ಆಶಾ ಪ್ರಸನ್ನ, ಉಪಾಧ್ಯಕ್ಷ ಕಿರಣ್ ಜೈನ್ ಸೇರಿದಂತೆ ಪ್ರಮುಖ ಪದಾಧಿಕಾರಿಗಳು ಇದ್ದರು.

ದ್ವಿಗುಣ ವಸೂಲಿಯಿಂದ ಅನ್ಯಾಯ

ಸಾರ್ವಜನಿಕ ಕಾಮಗಾರಿ ಇಲಾಖೆ, ವಸತಿ ಇಲಾಖೆ ಸೇರಿದಂತೆ ವಿವಿಧ ಸರ್ಕಾರಿ ಕಾಮಗಾರಿಗಳಿಗೆ ಕಲ್ಲು ಮತ್ತು ಖನಿಜಗಳನ್ನು ಪೂರೈಸುವ ಗುತ್ತಿಗೆದಾರರ ಬಿಲ್‌ಗಳಿಂದಲೇ ಸಂಬಂಧಿತ ಇಲಾಖೆಗಳು ರಾಜಧನ ಪಾವತಿ ಮೊತ್ತವನ್ನು ಈಗಾಗಲೇ ಕಡಿತಗೊಳಿಸುತ್ತಿವೆ. ಹೀಗಿರುವಾಗ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತೆ ಅದೇ ರಾಜಧನ ಪಾವತಿಯನ್ನು ಕ್ವಾರಿ ಮಾಲೀಕರಿಂದ ವಸೂಲಿ ಮಾಡುವುದು ದ್ವಿಗುಣ ವಸೂಲಿ ಆಗಿದ್ದು, ಇದು ಸಂಪೂರ್ಣ ಅನ್ಯಾಯ ಎಂದು ಒಕ್ಕೂಟದ ಉಪಾಧ್ಯಕ್ಷ ಕಿರಣ್ ಜೈನ್ ಆರೋಪಿಸಿದರು.

ಸಂಪಾದಕೀಯ

ವಿಳಂಬಿತ ನ್ಯಾಯವಾದರೂ ಸಿಗಲಿ!

ವಿಳಂಬಿತ ನ್ಯಾಯವೆಂದರೆ ನ್ಯಾಯ ನಿರಾಕರಿಸಲ್ಪಟ್ಟಂತೆ ಎಂಬ ಮಾತಿದೆ. ಆದರೆ ಕೆಲವು ಸಂದರ್ಭಗಳಲ್ಲಿ ವಿಳಂಬವಾಗಿಯಾದರೂ ನ್ಯಾಯವು ದೊರಕುವುದನ್ನು ಸ್ವಾಗತಿಸಬೇಕಾಗುತ್ತದೆ. ಅತ್ಯಂತ ಹೇಯ ಪಾತಕ ಕೃತ್ಯಗಳನ್ನೆಸಗಿದವರು ತೀರಾ ವಿಳಂಬವಾಗಿಯಾದರೂ ವಿಚಾರಣೆ ಎದುರಿಸಬೇಕಾಗುವುದು, ಶಿಕ್ಷೆ ಅನುಭವಿಸಬೇಕಾಗುವುದು ಸಮಾಧಾನಕರವೆನಿಸುತ್ತದೆ. 1990ರಲ್ಲಿ ಕಾಶ್ಮೀರದಲ್ಲಿ ಸರಳಾ ಭಟ್ ಎಂಬ ನರ್ಸ್‌ನ್ನು ಅಪಹರಿಸಿ ಕ್ರೂರವಾಗಿ ಕೊಲೆಗೈದ ಪ್ರಕರಣಕ್ಕೆ ಸಂಬಂಧಿಸಿ



ಜಮ್ಮು ಕಾಶ್ಮೀರದ ತನಿಖಾ ಸಂಸ್ಥೆಯು (ಎಸ್‌ಐಎ) ಇದೀಗ ಆರೋಪಪಟ್ಟಿ ಸಲ್ಲಿಸಿರುವುದು ಹಾಗೂ ಜೆಕೆಎಲ್ಎಫ್‌ನ ಮುಖಂಡ ಯಾಸಿನ್ ಮಲಿಕ್‌ನನ್ನು ಪ್ರಧಾನ ಆರೋಪಿಯನ್ನಾಗಿ ಹೆಸರಿಸಿರುವುದನ್ನು ಕಾಣುವಾಗ ಕಾನೂನು ಕೊನೆಗಾದರೂ ಆರೋಪಿಗಳನ್ನು ಸುತ್ತಿಕೊಳ್ಳುತ್ತಿದೆಯಲ್ಲ ಹಾಗೂ ನ್ಯಾಯವು ಶಾಶ್ವತವಾಗಿ ನಿರಾಕರಿಸಲ್ಪಡಲಿಲ್ಲವಲ್ಲ ಎಂಬ ಸಮಾಧಾನ ಮೂಡುತ್ತದೆ.

ಕಾಶ್ಮೀರದಲ್ಲಿ ಭಯೋತ್ಪಾದನೆಯು ಉತ್ತುಂಗದಲ್ಲಿದ್ದ ಸಮಯದಲ್ಲಿ ಆಸ್ಪತ್ರೆಯೊಂದರಲ್ಲಿ ನರ್ಸ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಸರಳಾ ಭಟ್‌ಳನ್ನು ಅಪಹರಿಸಲಾಗಿತ್ತು. ಬಳಿಕ ಆಕೆಯ ಶವ ಪತ್ತೆಯಾದಾಗ ಆಕೆಗೆ ಕ್ರೂರ ಚಿತ್ರಹಿಂಸೆ ನೀಡಿ ಕೊಂದಿರುವುದು ಕಂಡುಬಂದಿತ್ತು. ಅಲ್ಲಿಂದ ಬಳಿಕ ತನಿಖೆ ಮುಂದುವರಿದೇ ಇರಲಿಲ್ಲ. ಇದೀಗ 36 ವರ್ಷಗಳ ಬಳಿಕ ಜಮ್ಮು ಕಾಶ್ಮೀರ ಪೊಲೀಸರು ಸಾಕ್ಷ್ಯಾಧಾರಗಳನ್ನು ಕಲೆ ಹಾಕಿ 737 ಪುಟಗಳ ಆರೋಪಪಟ್ಟಿ ದಾಖಲಿಸಿರುವುದು ಸುತ್ತ್ಯರ್ಹವಾಗಿದೆ. ಪ್ರಸ್ತುತ ಜೈಲಿನಲ್ಲಿರುವ ಜೆಕೆಎಲ್ಎಫ್ ಮುಖಂಡ ಯಾಸಿನ್ ಮಲಿಕ್‌ನನ್ನೆ ಈ ಕುಕೃತ್ಯದ ಪ್ರಧಾನ ಆರೋಪಿಯನ್ನಾಗಿ ಹೆಸರಿಸಿರುವುದು ಈ ಪ್ರಕರಣದ ಗಂಭೀರತೆಯನ್ನು ಸೂಚಿಸುತ್ತದೆ. ಇದು ಒಂದು ಹಂತವಾಯಿತಷ್ಟೆ, ಮುಂದಿನ ವಿಚಾರಣೆಯ ಹಂತವೇ ಅತ್ಯಂತ ಪ್ರಮುಖವಾದುದಾಗಿದೆ. ಆರೋಪವನ್ನು ದೃಢಪಡಿಸುವುದು ಗಂಭೀರ ಸವಾಲಾಗಲಿದೆ. ಪ್ರಕರಣದ ಹಲವಾರು ಮಂದಿ ಸಾಕ್ಷಿಗಳು ಒಂದೋ ವೃದ್ಧರಾಗಿದ್ದಾರೆ ಇಲ್ಲವೇ ಕೆಲವರು ಮೃತಪಟ್ಟಿದ್ದಾರೆ. ಸಾಂದರ್ಭಿಕ ಸಾಕ್ಷ್ಯಗಳನ್ನು ಕೂಡಾ ಇಷ್ಟು ವರ್ಷಗಳ ಮಂಡಿಸುವುದು ಗುರುತರ ಸವಾಲೊಡ್ಡಲಿದೆ. ಅವನ್ನೆಲ್ಲ ನಿಭಾಯಿಸಿಕೊಂಡು ಅಪರಾಧಿಗಳಿಗೆ ಸೂಕ್ತ ಶಿಕ್ಷೆಯಾಗುವಂತೆ ಮಾಡುವ ಹೊಣೆಗಾರಿಕೆ ಪ್ರಾಸಿಕ್ಯೂಶನ್ ಮತ್ತು ತನಿಖಾ ಸಂಸ್ಥೆಯ ಮೇಲಿದೆ.

ಇದು ಒಂದು ಪ್ರಕರಣವಾಯಿತು. ಸರಳಾ ಭಟ್‌ರಂತೆ ಕಾಶ್ಮೀರದಲ್ಲಿ ಉಗ್ರಗಾಮಿಗಳಿಗೆ ಬಲಿಯಾದ ಇನ್ನೂ ಅದೆಷ್ಟೋ ಅಮಾಯಕರಿದ್ದಾರೆ. ಅಂತಹ ಪ್ರಕರಣಗಳಿಗೂ ಮರುಜೀವ ನೀಡಬೇಕಾಗಿದೆ. ಅವರೆಲ್ಲರಿಗೂ ನ್ಯಾಯ ಸಿಗುವಂತೆ ಮಾಡಬೇಕಾಗಿದೆ. ನ್ಯಾಯ ಸಿಗುವುದು ವಿಳಂಬವಾದರೂ ಸರಿ, ಶಾಶ್ವತವಾಗಿ ನ್ಯಾಯ ನಿರಾಕರಿಸಲ್ಪಡದಿರಲಿ.

ವಿಯೆಟ್ನಾಂ ಬಳಿಕ ಮಗದೊಂದು ಸೋಲೇ ಇದು?



ತನ್ನನ್ನು ತಾನು ಜಗತ್ತಿನ ದೊಡ್ಡಣ್ಣ ಎಂದು ಬಿಂಬಿಸಿಕೊಳ್ಳುವ ಅಮೆರಿಕ, ಇದೀಗ ಮಗದೊಂದು ಬಾರಿ ಸೋಲಿನ ಅವಮಾನದ ಅಂಚಿಗೆ ಬಂದು ನಿಂತಿದೆ. ಜಗತ್ತಿನ ಬೇರೆ ಬೇರೆ ಮೂಲೆಗಳ ಏಳೆಂಟು ಸಂಘರ್ಷಗಳಿಗೆ ತಾನೇ ತೆರೆ ಎಳೆದಿದ್ದೇನೆ, ತಾನೇ ಶಾಂತಿಯ ದೂತ ಎಂದು ಬೀಗುತ್ತಲೇ ಬಂದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಬೇಕಿಲ್ಲದ ಒಂದು ಯುದ್ಧಕ್ಕೆ ಕೈ ಹಾಕಿ ಈಗ ಕೈ ಸುಟ್ಟುಕೊಂಡಿದ್ದಾರೆ. ಇರಾನ್ ವಿರುದ್ಧ ಕಣಕ್ಕಿಳಿಯುವಂತೆ ಟ್ರಂಪ್ ಅವರಿಗೆ ಸಲಹೆ ಕೊಟ್ಟವರಾದರೂ ಯಾರು ಎಂಬುದೇ ಇಂದು ಯಕ್ಷಪ್ರಶ್ನೆಯಾಗಿ ಉಳಿದಿದೆ.

ಫೆಬ್ರವರಿ 28ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ಆರಂಭಿಸಿ, ಮೊದಲ ದಿನವೇ ಆ ದೇಶದ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರನ್ನೇ ಹತ್ಯೆಗೈದಾಗ, ತಲೆ ಕಡಿದ ಬಳಿಕ ದೇಹ ತಾನಾಗಿಯೇ ಕುಸಿಯುತ್ತದೆ ಎಂದೇ ಅಮೆರಿಕ ಲೆಕ್ಕಾಚಾರ ಹಾಕಿತ್ತು. ಆದರೆ ಆ ಲೆಕ್ಕಾಚಾರ ಸಂಪೂರ್ಣ ತಲೆಕೆಳಗಾಯಿತು. ನಾಯಕನನ್ನು ಕಳೆದುಕೊಂಡರೂ ಇರಾನ್ ಸೇನೆ ಒಂದಿಂಚೂ ಹಿಮ್ಮೆಟ್ಟದೆ, ಗಟ್ಟಿಯಾಗಿ ಎದುರು ನಿಂತಿತು. ಖಮೇನಿ ಅವರ ಪುತ್ರನನ್ನೇ ಉತ್ತರಾಧಿಕಾರಿಯಾಗಿ ನೇಮಿಸಿಕೊಂಡ ಇರಾನ್, ಪ್ರತಿದಾಳಿಯ ತೀವ್ರತೆಯನ್ನು ಒಂದಿನಿತೂ ಕಡಿಮೆ ಮಾಡಲಿಲ್ಲ.

ಇಲ್ಲಿ ಅಮೆರಿಕ ವೆನೆಜುವೆಲಾ ಮತ್ತು ಇರಾನ್ ನಡುವಿನ ಮೂಲಭೂತ ವ್ಯತ್ಯಾಸವನ್ನೇ ಮರೆತಿತ್ತು. ಈ ವರ್ಷದ ಜನವರಿ ಆರಂಭದಲ್ಲಿ ಪಕ್ಕದ ವೆನೆಜುವೆಲಾಗೆ ನುಗ್ಗಿ, ಅಲ್ಲಿನ ಅಧ್ಯಕ್ಷ ನಿಕೋಲಸ್ ಮಡುರೊ ಅವರನ್ನು ಅವರದ್ದೇ ಸೇನಾ ನೆಲೆಯಿಂದ ಕೇವಲ ಎರಡೂವರೆ ಗಂಟೆಗಳಲ್ಲಿ ಎತ್ತಿ ಹಾಕಿಕೊಂಡು ಬಂದು ನ್ಯೂಯಾರ್ಕ್‌ನ ಜೈಲಿಗೆ ತಳ್ಳಿದ್ದ ಅಮೆರಿಕ, ಇರಾನ್ ಅನ್ನೂ ಅಷ್ಟೇ ಸಲೀಸಾಗಿ ಮಣಿಸಬಹುದೆಂದು ಭಾವಿಸಿತ್ತು. ಆದರೆ ಸಾವಿರಾರು ವರ್ಷಗಳ ನಾಗರಿಕತೆಯ ಬೇರು, ಸುಸಜ್ಜಿತ ಸೇನೆ ಹಾಗೂ ಬಲಿಷ್ಠ ಕ್ಷಿಪಣಿ ಸಾಮರ್ಥ್ಯ ಹೊಂದಿರುವ ಇರಾನ್, ಒಂದು ಮಧ್ಯರಾತ್ರಿಯ ಕಾರ್ಯಾಚರಣೆಗೆ ಬಗ್ಗುವ ದೇಶವಾಗಿರಲಿಲ್ಲ.



ಅಮೆರಿಕ ಒಂದು ಬಾಂಬ್ ಹಾಕಿದರೆ ಸಾಕು, ಇರಾನ್ ಅರಬ್ ದೇಶಗಳಲ್ಲಿ ನೆಲೆಗೊಂಡಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ತಿರುಗೇಟು ನೀಡುತ್ತಿದೆ. ಕತಾರ್‌ನ ಅಲ್ ಉದೈದ್ ವಾಯುನೆಲೆ, ಸೌದಿ ಅರೇಬಿಯಾದ ಅರಾಮ್ಕೊ ತೈಲ ಸಂಸ್ಕರಣಾಗಾರ ಸೇರಿದಂತೆ ಹಲವು ಗುರಿಗಳು ಇರಾನ್ ಕ್ಷಿಪಣಿಗಳಿಗೆ ತುತ್ತಾಗಿವೆ. ಇದು ಅರಬ್ ದೇಶಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ತಮ್ಮ ತೈಲ ಬಾವಿಗಳ ಮೇಲೆ ಬಾಂಬ್ ಬಿದ್ದು ಆರ್ಥಿಕ ಅಡಿಪಾಯಕ್ಕೇ ಪೆಟ್ಟು ಬೀಳುವ ಆತಂಕ ಅವುಗಳನ್ನು ಕಾಡುತ್ತಿದೆ. ಆದರೆ ಟ್ರಂಪ್‌ಗಾಗಲೀ, ಅವರ ಸುತ್ತ ನೆರೆದಿರುವ ಸಲಹೆಗಾರರಿಗಾಗಲೀ ಈ ಸೂಕ್ಷ್ಮ ಅರ್ಥವಾಗುತ್ತಿಲ್ಲ.

ನೋಡಿ, ಯುದ್ಧದ ಬಿಸಿ ಇರಾನ್, ಇಸ್ರೇಲ್ ಅಥವಾ ಅಮೆರಿಕಕ್ಕಷ್ಟೇ ಸೀಮಿತವಾಗಿಲ್ಲ. ಜಗತ್ತಿನ ತೈಲ ಸಾಗಣೆಯ ಜೀವನಾಡಿ ಎನಿಸಿರುವ ಹಾರ್ಮುಜ್ ಜಲಸಂಧಿಯನ್ನೇ ಇರಾನ್ ಬಂದ್ ಮಾಡಿದ್ದರಿಂದ, ಇಡೀ ಜಾಗತಿಕ ಇಂಧನ ಪೂರೈಕೆ ಸರಪಳಿಯೇ ಅಸ್ತವ್ಯಸ್ತಗೊಂಡಿತು. ತೈಲ ಬೆಲೆ ಗಗನಕ್ಕೇರಿ, ಯುರೋಪ್ ಸೇರಿದಂತೆ ಬಹುತೇಕ ರಾಷ್ಟ್ರಗಳು ಆರ್ಥಿಕವಾಗಿ ತತ್ತರಿಸಿದವು. ಒಂದು ದೇಶದ ದುಡುಕಿನ ನಿರ್ಧಾರ ಇಡೀ ಜಗತ್ತಿಗೆ ಹೇಗೆ ಹೊರೆಯಾಗಬಲ್ಲದು ಎಂಬುದಕ್ಕೆ ಇದಕ್ಕಿಂತ ಸ್ಪಷ್ಟ ನಿದರ್ಶನ ಬೇಕಿಲ್ಲ. ಈ ಇಡೀ ಬೆಳವಣಿಗೆ ಭಾರತದ ಪಾಲಿಗೂ ದೊಡ್ಡ ಕಳವಳದ ವಿಷಯ. ದೇಶದ ಕಚ್ಚಾ ತೈಲ ಮತ್ತು ಅಡುಗೆ ಅನಿಲದ ಬಹುಪಾಲು ಪೂರೈಕೆ ಇದೇ ಹಾರ್ಮುಜ್ ಜಲಸಂಧಿಯ ಮೂಲಕ ಸಾಗುತ್ತದೆ. ಜಲಸಂಧಿ ಬಂದ್ ಆಗಿ ತೈಲ ಬೆಲೆ ಏರಿದರೆ, ಅದರ ಬಿಸಿ ನೇರವಾಗಿ ಭಾರತದ ಗ್ರಾಹಕನ ಜೇಬಿಗೆ ತಟ್ಟುತ್ತದೆ. ಗಲ್ಫ್ ರಾಷ್ಟ್ರಗಳಲ್ಲಿ ದುಡಿಯುತ್ತಿರುವ ಲಕ್ಷಾಂತರ ಭಾರತೀಯರ ಭವಿಷ್ಯವೂ ಈ ಸಂಘರ್ಷದ ನೆರಳಿನಲ್ಲಿ ತೂಗುಯ್ಯಾಲೆಯಾಡುತ್ತಿದೆ. ಈ ಸಂಘರ್ಷ ಕೇವಲ ಇರಾನ್‌ನ ಗಡಿಗೆ ನಿಲ್ಲಲಿಲ್ಲ, ಲೆಬನಾನ್‌ನಲ್ಲಿ ಹಿಜ್ಬುಲ್ಲಾ, ಯೆಮೆನ್‌ನಲ್ಲಿ ಹೂತಿ ಬಂಡುಕೋರರು ಒಂದೊಂದಾಗಿ ಕಣಕ್ಕಿಳಿದರು. ಇರಾನ್‌ನ ಕ್ಷಿಪಣಿಯೊಂದು ಟರ್ಕಿಯ ಆಗಸವನ್ನೇ ಪ್ರವೇಶಿಸಿ ನ್ಯಾಟೋ ಪಡೆಗಳ ಮಧ್ಯಪ್ರವೇಶಕ್ಕೆ ಕಾರಣವಾಯಿತು. ಆರಂಭದಲ್ಲಿ ಒಂದೆರಡು ದೇಶಗಳ ನಡುವಿನ ಕಾದಾಟ ಎಂಬಂತಿದ್ದದ್ದು, ಇಂದು ಸುಮಾರು ಒಂಬತ್ತು ದೇಶಗಳನ್ನು ಒಳಗೊಂಡ ಪ್ರಾದೇಶಿಕ ಬೆಂಕಿಯಾಗಿ ಹಬ್ಬಿದೆ. ಬೆಂಕಿ ಹಚ್ಚುವುದು ಸುಲಭ, ಆದರೆ ಅದನ್ನು ನಿಯಂತ್ರಿಸುವುದು ಅಷ್ಟೇ ಕಷ್ಟ ಎಂಬ ಸತ್ಯ ಅಮೆರಿಕಕ್ಕೆ ಈಗ ಮನದಟ್ಟಾಗುತ್ತಿದೆ. ಕುತೂಹಲದ ಸಂಗತಿ ಎಂದರೆ, ಜಗತ್ತಿನ ಹಲವು ಕದನಗಳನ್ನು ನಿಲ್ಲಿಸಿ ಶಾಂತಿ ನೆಲೆಸುವಂತೆ ಮಾಡಿದ್ದೇನೆ ಎಂದು ಎದೆ ತಟ್ಟಿಕೊಳ್ಳುತ್ತಿದ್ದ ಟ್ರಂಪ್, ಈಗ ತಾವೇ ಒಂದು ಯುದ್ಧವನ್ನು ಹುಟ್ಟಿಸಿ, ಅದನ್ನು ಆರಿಸಲಾಗದೆ ಒದ್ದಾಡುತ್ತಿದ್ದಾರೆ. ನೊಬೆಲ್ ಶಾಂತಿ ಪ್ರಶಸ್ತಿಯ ಕನಸು ಕಾಣುತ್ತಿದ್ದವರೊಬ್ಬರು, ಇಂದು ಜಗತ್ತಿನ ಅತಿ ದೀರ್ಘ ಸಂಘರ್ಷಗಳಲ್ಲಿ ಒಂದಕ್ಕೆ ಕಾರಣಕರ್ತರಾಗಿ ನಿಂತಿರುವುದೇ ವಿಪರ್ಯಾಸ. ಈ ಯುದ್ಧದಿಂದ ಅಮೆರಿಕ ಸಾಧಿಸಿದ್ದಾದರೂ ಏನು ಎಂಬ ಮೂಲ ಪ್ರಶ್ನೆಗೆ ಇಂದಿಗೂ ಸ್ಪಷ್ಟ ಉತ್ತರವಿಲ್ಲ. ಈಗಾಗಲೇ ಹಲವು ಬಾರಿ ವಿಫಲ ಸಂಧಾನ ಮಾತುಕತೆಗಳು ನಡೆದಿವೆ. ಹಲವು ಬಾರಿ ಕದನ ವಿರಾಮವನ್ನೂ ಘೋಷಿಸಲಾಗಿದೆ. ಅಬ್ಬಾ, ಯುದ್ಧ ಮುಗಿಯಿತಲ್ಲ ಎಂದು ನಿಟ್ಟುಸಿರು ಬಿಡುವಷ್ಟರಲ್ಲೇ ಮತ್ತೆ ಎರಡೂ ಕಡೆಯಿಂದ ಬಾಂಬ್ ದಾಳಿ ಶುರುವಾಗುತ್ತದೆ. ಜೂ.17ರಂದು ಉಭಯ ದೇಶಗಳ ನಡುವೆ ಒಪ್ಪಂದವೊಂದಕ್ಕೆ ಸಹಿ ಬಿದ್ದರೂ, ದೋಹಾದಲ್ಲಿ ಮಾತುಕತೆ ಮುಂದುವರಿದರೂ, ಯುದ್ಧ ಈಗ ಐದನೇ ತಿಂಗಳಿಗೆ ಕಾಲಿಟ್ಟಿದೆ. ಇದುವರೆಗಿನ ಎಲ್ಲ ಕದನ ವಿರಾಮ ಘೋಷಣೆಗಳೂ ನಗೆಪಾಟಲಿಗೆ ಈಡಾಗಿವೆ.

ಯುದ್ಧವಷ್ಟೇ ಅಲ್ಲ, ಟ್ರಂಪ್ ಅವರಿಗೆ ತಮ್ಮ ಮಾತಿನ ಮೇಲೂ ಹಿಡಿತ ಉಳಿದಿಲ್ಲ. ಇರಾನ್ ಹೆದರಿ ಮಾತುಕತೆಗೆ ಬರುತ್ತಿದೆ ಎಂದು ಟ್ರಂಪ್ ಹೇಳಿದ ತಕ್ಷಣ, ಅಂಥ ಯಾವ ಮಾತುಕತೆಯೂ ನಡೆಯುತ್ತಿಲ್ಲ ಎಂದು ಇರಾನ್ ಬಹಿರಂಗವಾಗಿ ಅಲ್ಲಗಳೆದು, ಟ್ರಂಪ್ ಅವರನ್ನು ಮೋಸಗಾರ ಎಂದೇ ಜರಿದಿದೆ. ಇಲ್ಲಿ ವಿದೇಶಾಂಗ ವ್ಯವಹಾರ ಎಂಬುದು ತನ್ನ ಗಾಂಭೀರ್ಯವನ್ನೇ ಕಳೆದುಕೊಂಡು, ಒಂದು ಹಾಸ್ಯಪ್ರಸಂಗದಂತೆ ಭಾಸವಾಗುತ್ತಿದೆ. ಯುದ್ಧ ನಿಜಕ್ಕೂ ಟ್ರಂಪ್ ಅವರ ಹಿಡಿತದಲ್ಲಿ ಇದೆಯೇ ಎಂಬ ಪ್ರಶ್ನೆಯೂ ಇದೀಗ ಮುನ್ನೆಲೆಗೆ ಬಂದಿದೆ. ಇತ್ತ ಅಮೆರಿಕದ ಒಳಗೂ ಟ್ರಂಪ್ ಒತ್ತಡ ಎದುರಿಸುತ್ತಿದ್ದಾರೆ. ಸಂಸತ್ತಿನ ಒಪ್ಪಿಗೆಯಿಲ್ಲದೆ ಯುದ್ಧಕ್ಕೆ ಇಳಿದದ್ದು ಸರಿಯೇ ಎಂಬ ಪ್ರಶ್ನೆ ಎದ್ದಿದ್ದು, ಸೇನೆಯನ್ನು ವಾಪಸ್ ಕರೆಸಿಕೊಳ್ಳುವಂತೆ ಒತ್ತಾಯಿಸುವ ನಿರ್ಣಯಗಳ ಬಗ್ಗೆ ಚರ್ಚೆ ನಡೆದಿದೆ. ಮಿತ್ರ ರಾಷ್ಟ್ರಗಳೂ ಈ ಬೇಕಾಬಿಟ್ಟಿ ಯುದ್ಧದಿಂದ ಅಂತರ ಕಾಯ್ದುಕೊಳ್ಳಲು ಆರಂಭಿಸಿವೆ. ಒಂದು ಯುದ್ಧ ಗೆಲುವು ತರುವ ಬದಲು, ದೇಶದ ಒಳಗೆ ಮತ್ತು ಹೊರಗೆ ಅಮೆರಿಕದ ವಿಶ್ವಾಸಾರ್ಹತೆಯನ್ನೇ ಸವೆಸುತ್ತಿರುವುದು ಟ್ರಂಪ್ ಪಾಲಿಗೆ ದೊಡ್ಡ ಹಿನ್ನಡೆ. ಆರಂಭದಲ್ಲಿ ಇರಾನ್‌ನ ಬೇಷರತ್ ಶರಣಾಗತಿಯೊಂದೇ ನನಗೆ ಬೇಕಿರುವುದು ಎಂದು ಟ್ರಂಪ್ ಗುಡುಗಿದ್ದರು. ಆದರೆ ತಿಂಗಳುಗಳು ಉರುಳಿದರೂ ಆ ಶರಣಾಗತಿ ಬರಲಿಲ್ಲ, ಬದಲಿಗೆ, ಸಾರ್ವಭೌಮ ರಾಷ್ಟ್ರವೊಂದರ ನಾಯಕನನ್ನು ಹತ್ಯೆಗೈದ, ನೆರೆಯ ದೇಶದ ಅಧ್ಯಕ್ಷನನ್ನು ಎತ್ತಿಕೊಂಡು ಹೋದ ಅಮೆರಿಕದ ನಡೆಗಳ ಬಗ್ಗೆ ವಿಶ್ವಸಂಸ್ಥೆ ಸೇರಿದಂತೆ ಜಾಗತಿಕ ಸಮುದಾಯದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಅಂತಾರಾಷ್ಟ್ರೀಯ ಕಾನೂನನ್ನೇ ಗಾಳಿಗೆ ತೂರಿದ ಈ ಧೋರಣೆ, ಬಲಿಷ್ಠ ರಾಷ್ಟ್ರಗಳ ದಬ್ಬಾಳಿಕೆಗೆ ಹೊಸ ನಿದರ್ಶನವಾಗಿ ನಿಂತಿದೆ. ಇರಾನ್ ಈ ಯುದ್ಧದಲ್ಲಿ ಭಾರೀ ಬೆಲೆ ತೆತ್ತಿರುವುದೂ ಸತ್ಯ. ಅದರ ಸೇನಾ ನೆಲೆಗಳು, ಬಂದರುಗಳು ಹಾಗೂ ಮೂಲಸೌಕರ್ಯ ಧ್ವಂಸಗೊಂಡಿವೆ. ಹಣದುಬ್ಬರ ಗಗನಕ್ಕೇರಿ ಜನಸಾಮಾನ್ಯರ ಬದುಕು ದುರ್ಭರವಾಗಿದೆ. ಆದರೆ ಇಂಥ ಅಸಮಬಲ ಯುದ್ಧಗಳಲ್ಲಿ ಗೆಲುವಿನ ಲೆಕ್ಕಾಚಾರ ಬರೀ ಬೀಳಿಸಿದ ಬಾಂಬ್‌ಗಳ ಸಂಖ್ಯೆಯಿಂದ ಆಗುವುದಿಲ್ಲ. ತಮ್ಮ ನೆಲದಲ್ಲಿ, ತಮ್ಮದೇ ಷರತ್ತಿನ ಮೇಲೆ ಹೋರಾಡುವ ದೇಶವನ್ನು ಸಂಪೂರ್ಣ ಮಣಿಸುವುದು ಎಷ್ಟು ಕಷ್ಟ ಎಂಬುದನ್ನು ಇತಿಹಾಸ ಪದೇ ಪದೇ ತೋರಿಸಿಕೊಟ್ಟಿದೆ. ವಿಯೆಟ್ನಾಂನಲ್ಲೂ ಅಮೆರಿಕ ಇಂಥದ್ದೇ ಮುಖಭಂಗ ಅನುಭವಿಸಿತ್ತು. ವಿಶ್ವದ ಬಲಿಷ್ಠ ಸೇನೆ ಎಂಬ ಹಮ್ಮಿನಿಂದ ಕಣಕ್ಕಿಳಿದಿದ್ದ ಅಮೆರಿಕಕ್ಕೆ, ಪುಟ್ಟ ದೇಶ ವಿಯೆಟ್ನಾಂ ಸರಿಯಾಗಿಯೇ ತಿರುಗೇಟು ನೀಡಿ, ಕೊನೆಗೆ ಬಂದ ದಾರಿಗೆ ಸುಂಕವಿಲ್ಲದಂತೆ ಸೇನೆ ವಾಪಸ್ ತೆರಳುವಂತೆ ಮಾಡಿತ್ತು. ಆ ಕರಾಳ ಅಧ್ಯಾಯ ಇಂದಿಗೂ ಅಮೆರಿಕದ ಸೇನಾ ಇತಿಹಾಸದ ಮೇಲಿನ ಕಪ್ಪುಚುಕ್ಕೆ.

ಇಂದು ಇರಾನ್‌ನ ಮರಳುಗಾಡಿನಲ್ಲೂ ಅದೇ ಚಿತ್ರ ಮರುಕಳಿಸುವ ಎಲ್ಲ ಸಾಧ್ಯತೆಗಳಿವೆ. ಬಲದ ಮದದಿಂದ ಆರಂಭಿಸಿದ ಯುದ್ಧ, ಗೆಲುವಿಲ್ಲದೆ, ಗುರಿಯಿಲ್ಲದೆ, ಘನತೆಯಿಲ್ಲದೆ ಎಳೆದಾಡುತ್ತಿರುವಾಗ–ವಿಯೆಟ್ನಾಂ ಬಳಿಕ ಇದು ಮಗದೊಂದು ಸೋಲೇ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ವಿಚಿತ್ರವೆಂದರೆ ಇತಿಹಾಸ ತನ್ನ ಪಾಠವನ್ನು ಮತ್ತೆ ಮತ್ತೆ ಹೇಳುತ್ತದೆ. ಆದರೆ ಅದನ್ನು ಕೇಳಿಸಿಕೊಳ್ಳುವ ವ್ಯವಧಾನ ಬಲಿಷ್ಠರಿಗೆ ಇರುವುದೇ ಇಲ್ಲ, ಹೀಗಾಗಿಯೇ ಇಂಥ ಯುದ್ಧಗಳಿಂದ ಆಗುವ ಎಲ್ಲ ಅಡ್ಡ ಪರಿಣಾಮಗಳ ಬಿಸಿ ತಟಸ್ಥವಾಗಿರುವಂಥವರ ಮೇಲೂ ಬೀಳುತ್ತದೆ.

ತಾಯಿಯ ಚರಣ ಕಮಲಗಳು

ಅದೂರಗಮನಂ ತೀರ್ಥ ಅದೇಹ ದಹನ ತಪಃ ।
ಅನಂಭಃ ಸಂಭವಂ ಸ್ನಾನಂ ಮಾತುಶ್ಚರಣಪಂಕಜಮ್ ॥ –ಸುಭಾಷಿತ ಮುಕ್ತಾವಳಿ

ತಾಯಿಯ ಚರಣ ಕಮಲಗಳು ಬಳಿಯಲ್ಲಿರುವ ಪವಿತ್ರ ಸ್ಥಳ. ದೇಹವನ್ನು ದಂಡಿಸದ ತಪಸ್ಸು, ನೀರನ್ನು ಬಳಸದ ಪವಿತ್ರ ಸ್ನಾನ – ಎಂಬುದು ಶ್ಲೋಕಾರ್ಥ.

''ಮಾತಾಕಿಲ ಮನುಷ್ಯಾಣಾಂ ದೈವತಾನಾಂ ದೈವತಂ'' ಎಂಬ ಮಾತು 'ಮಧ್ಯಮ ವ್ಯಾಯೋಗ' ಎಂಬ ನಾಟಕದಲ್ಲಿ ಬರುತ್ತದೆ. ಮನುಷ್ಯರಿಗೆ ತಾಯಿ ಎಂಬವಳು ದೇವರ ದೇವರು– ಎಂಬುದು ಇದರ ಅರ್ಥ. ತಾಯಿಗಿಂತ ಮಿಗಿಲಾದ ದೇವರಿಲ್ಲ ಎಂಬುದೇ ಇದರ ತಾತ್ಪರ್ಯ. 'ಮಾತಾ ಗುರುತರಾ ಭೂಮೇಃ' – ತಾಯಿ, ಭೂಮಿಗಿಂತ ಹೆಚ್ಚಿನ ತೂಕದವಳು ಎಂಬುದನ್ನು ಮಹಾಭಾರತದ ಈ ಸೂಕ್ತಿ ತಿಳಿಸುತ್ತದೆ. ಹೆತ್ತ ತಾಯಿ ಇಲ್ಲದ ಮನೆಯೂ ಒಂದೇ ಕಾಡು ಒಂದೇ. ಹೀಗೆ ತಾಯಿಯ ಹಿರಿಮೆಯನ್ನು ಕೊಂಡಾಡದ ಭಾರತೀಯ ಗ್ರಂಥಗಳಿಲ್ಲ. ಅತ್ಯಂತ ಪ್ರಾಚೀನವಾದ ವೇದದಿಂದಾರಂಭಿಸಿ ಇಂದಿನವರೆಗಿನ ಎಲ್ಲಾ ಪ್ರಸಿದ್ಧ ಸಾಹಿತ್ಯಗಳು ತಾಯಿಯ ಗುಣಗಾನ ಮಾಡಿವೆ. ತಾಯಿಯ ಸ್ಥಾನವನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ, ಕಣ್ಣಿಗೆ ಕಾಣುವ, ನಡೆದಾಡುವ ದೇವರು ತಾಯಿ. ತಾಯಿಯ ತ್ಯಾಗಕ್ಕೆ, ಮಾತೆಯ ಮನೋಧರ್ಮಕ್ಕೆ ಹೋಲಿಸಲು ಜಗತ್ತಿನಲ್ಲಿ ಇನ್ನೊಂದು ವಸ್ತುವಿಲ್ಲ.



ಪ್ರಕೃತ ಶ್ಲೋಕದಲ್ಲಿಯೂ ಮಾತೆಯ ಮಹಿಮೆಯನ್ನು ಹೇಳುವ ಪ್ರಯತ್ನ ಮಾಡಲಾಗಿದೆ. ತಾಯಿಯ ಪಾದ ಪದ್ಮಗಳಿಗೆ ಮಕ್ಕಳಾದವರು ಎರಗಲೇಬೇಕು. ಪಾದವಷ್ಟೇ ಅಲ್ಲ, ಪಾದಕ್ಕೆ ಅಂಟಿದ ಧೂಳೂ ಪವಿತ್ರ. ಜಗನ್ಮಾತೆಯ ಪಾದಕ್ಕೆ ಅಂಟಿದ ಧೂಳನ್ನು ಬ್ರಹ್ಮನು ಸೃಷ್ಟಿ ಕಾರ್ಯಕ್ಕೆ ಬಳಸಿಕೊಂಡ. ವಿಷ್ಣು ಆದಿಶೇಷನ ರೂಪದ ತನ್ನ ಸಾವಿರ ಹೆಡೆಗೂ ಬಳಿದುಕೊಂಡ. ಶಿವನು ಭಸ್ಮೋದ್ಧೂಳನದಿಯಲ್ಲಿ ತನ್ನ ಶರೀರಕ್ಕೆ ಲೇಪಿಸಿಕೊಂಡ ಎಂಬುದನ್ನು ಸೌಂದರ್ಯ ಲಹರಿ ಹೇಳುತ್ತದೆ. ಮಾತೆಯ ಪಾದ ರಜವು ಪವಿತ್ರವೇ.

ಮಾತೆ ಪಾದಕಮಲಗಳು ಯಾವಾಗಲೂ ನಮ್ಮ ಬಳಿಯಲ್ಲಿಯೇ ಇರುವ ಪವಿತ್ರ ಸ್ಥಳ. ಅದುವೇ ತೀರ್ಥಕ್ಷೇತ್ರ. ಅದುವೇ ಸರ್ವದೇವತಾ ಸ್ಥಾನ. ತಾಯಿಯ ಪಾದ ದರ್ಶನ ಸಕಲ ದೇವತೆಗಳ ದರ್ಶನ ಮಾಡಿದಂತೆ. ಹೆತ್ತಮ್ಮನ ಪಾದಸೇವೆ ಎಲ್ಲಾ ದೇವತೆಗಳ ಸೇವೆಗೈದಂತೆ. ಅವಳ ಪಾದಪೂಜೆ ದೇವ-ದೈವಗಳ ಪೂಜೆ ಕೈಗೊಂಡಂತೆ. ಸಕಲಾನುಗ್ರಹವು ಮಾತೃ ಪಾದ ವಂದನೆಯಿಂದಲೇ ಪ್ರಾಪ್ತವಾಗುತ್ತದೆ. ಮಾತೆಯ ಚರಣ ಕಮಲಗಳಿಗೆ ವಂದಿಸಲು ದೇಹದಂಡನೆ ಮಾಡಬೇಕಾಗಿಲ್ಲ, ಯಾವ ಬಗೆಯ ಕಷ್ಟವಿಲ್ಲದೆ ಸುಲಭದಲ್ಲಿ ಇಷ್ಟಾರ್ಥ ಸಿದ್ಧಿಯಾಗುತ್ತದೆ. ಮನ ಸಂಕಲ್ಪ ಕೈಗೂಡುತ್ತದೆ. ಸಮಸ್ತ ಪ್ರದಕ್ಷಿಣ..... ಇತ್ಯಾದಿ ಯಾವ ಕಷ್ಟವೂ ಇಲ್ಲದೇ ಸಿದ್ಧಿಯನ್ನು ತಾಯಿಯ ಪಾದಾಭಿ ವಂದನೆ ನೀಡುತ್ತದೆ. ಶರೀರ ಶುದ್ಧಿಗೆ ನೀರು ಬೇಕು. ಸ್ನಾನಾದಿಗಳನ್ನು ಮಾಡಬೇಕು. ಆದರೆ ಹೆತ್ತಬ್ಬೆಯ ಪಾದಗಳಿಗೆ ಶ್ರದ್ಧಾ ಭಕ್ತಿಯಿಂದ ನಮಸ್ಕರಿಸುವುದರಿಂದ ಅವರ ಸಾನಿಧ್ಯ, ಅನುಗ್ರಹಗಳೇ ನಮ್ಮನ್ನು ಶುದ್ಧಿಗೊಳಿಸುತ್ತದೆ. ಅನುಗ್ರಹ ಲಭಿಸುತ್ತದೆ.

ಎಲ್ಲಾ ಬಗೆಯ ಪುಣ್ಯ ಸಂಚಯನ, ಪಾಪ ನಿವಾರಣೆಗಳಿಗೆ ಏಕೈಕ ದಿವ್ಯೌಷಧಿ ಮಾತೃ ವಂದನ. ಆದರೆ ಇಂದು ತಾಯಿ ಮಕ್ಕಳ ಸಂಬಂಧ ಹಳಸುತ್ತಿದೆ. ಇದಕ್ಕೆ ಕಾರಣ ಎರಡು ಕಡೆಗಳಲ್ಲೂ ಇದೆ. ಮಕ್ಕಳಿರುವಾಗ ನಮ್ಮ ಮನೆ ಧರ್ಮಗಳ ಸಂಸ್ಕಾರವನ್ನು ಕೊಡದೆ ಹಾಸ್ಟೆಲಿಗೆ ಹಾಕುತ್ತೇವೆ. ಮನೆಯ ಸಂಬಂಧ, ಬಂಧನ, ವಾತ್ಸಲ್ಯ ಮಾಯವಾಗುತ್ತದೆ. ಗೌರವ ದೂರಾಗುತ್ತದೆ. ಅವರು ದೊಡ್ಡವರಾದ ಮೇಲೆ ಹೆತ್ತವರನ್ನು ವೃದ್ಧಾಶ್ರಮಕ್ಕೆ ಹಾಕುತ್ತಾರೆ. ಈ ಎಲ್ಲಾ ಅಪಸವ್ಯಗಳಿಗೆ ನಾವೇ ಕುಳಿತು ಯೋಚಿಸಿ ಪರಿಹಾರ ಕಂಡುಕೊಂಡು ಅನುಷ್ಠಾನಕ್ಕೆ ತರಬೇಕು.

ವಿದೇಶಿ ದೇಣಿಗೆ ಮತಾಂತರಕ್ಕೆ ಬಳಸುವಂತಿಲ್ಲ

ವಿದೇಶಿ ದೇಣಿಗೆ ಕಾಯ್ದೆಗೆ ತಂದಿರುವ ತಿದ್ದುಪಡಿಗಳು ಮಿಷನರಿಗಳ ಮತಾಂತರ ಕಾರ್ಯಗಳಿಗೆ ತಡೆ ಒಡ್ಡಲಿವೆ.

▸ ರಾಮ್ ಮಾಧವ್



ಕೇಂದ್ರ ಗೃಹ ಸಚಿವಾಲಯವು ವಿದೇಶಿ ದೇಣಿಗೆ ಕಾಯ್ದೆಗೆ (ಎಫ್‌ಸಿಆರ್‌ಎ) ಹೊಸ ತಿದ್ದುಪಡಿಗಳನ್ನು ಮಾಡಿ ಜಾರಿಗೆ ತಂದಿದ್ದು, ವಿದೇಶಿ ದೇಣಿಗೆ ಪಡೆಯುವ ಸರಕಾರೇತರ ಸಂಸ್ಥೆಗಳ (ಎನ್‌ಜಿಒ) ಕಾರ್ಯ ಚಟುವಟಿಕೆಗಳ ಮೇಲೆ ಕೆಲವು ನಿರ್ಬಂಧಗಳನ್ನು ಹೇರಿದೆ. ಹೊಸ ನಿಯಮಗಳ ಪ್ರಕಾರ ವಿದೇಶಿ ದೇಣಿಗೆಯನ್ನು ಧಾರ್ಮಿಕ ಸ್ಥಳಗಳ ನಿರ್ಮಾಣ ಮತ್ತು ನಿರ್ವಹಣೆಗೆ , ಯಾತ್ರಿಕರ ಸೌಲಭ್ಯ ವಿಸ್ತರಣೆಗೆ, ಆದಿವಾಸಿಗಳ ಸಾಂಪ್ರದಾಯಿಕ ಆಚರಣೆಗಳಿಗೆ ಬಳಸಬಹುದಾದರೂ ಮತಾಂತರ ಕಾರ್ಯಗಳಿಗೆ ಬಳಸುವಂತಿಲ್ಲ ಎಂಬುದಾಗಿ ಸ್ಪಷ್ಟಪಡಿಸಲಾಗಿದೆ.

ಈ ನೂತನ ತಿದ್ದುಪಡಿಗಳನ್ನು ಅಧಿಕೃತವಾಗಿ ಗಜೆಟ್‌ನಲ್ಲಿ ಪ್ರಕಟಿಸುವ ಮೊದಲೇ ಅದರ ಕಂಪನ ಹಲವೆಡೆ ವ್ಯಾಪಿಸಿದೆ. ಭಾರತವಷ್ಟೇ ಅಲ್ಲದೆ ಅಮೆರಿಕ ಹಾಗೂ ಇನ್ನಿತರ ಕಡೆಗಳಲ್ಲೂ ಅದರ ಪರಿಣಾಮ ಗೋಚರವಾಗಿದೆ. ಕ್ರೈಸ್ತ ಮಿಷನರಿಗಳ ನೇತೃತ್ವದ ಎನ್‌ಜಿಒಗಳು ಅಧಿಕವಿರುವ ಕೇರಳ ಮತ್ತು ತಮಿಳ್ನಾಡುಗಳಲ್ಲಿ ಇತ್ತೀಚಿನ ವಿಧಾನಸಭಾ ಚುನಾವಣೆ ವೇಳೆ ಕೂಡಾ ಪ್ರಸ್ತಾಪಿತ ತಿದ್ದುಪಡಿಗಳು ಚರ್ಚೆಯಾದವು.ಈ ವಿಷಯವು ಅಮೆರಿಕದ ಕ್ಯಾಪಿಟಲ್ ಹಿಲ್‌ನಲ್ಲಿ ಕೂಡಾ ಪ್ರತಿಧ್ವನಿಸಿತು. ಸೆನೆಟ್ ವಿದೇಶ ಸಂಬಂಧಗಳ ಸಮಿತಿಯ ಮುಖ್ಯಸ್ಥರಾದ ಜೇಮ್ಸ್ ರಿಚ್ ಭಾರತದ ಈ ಕಾಯ್ದೆಯನ್ನು ಕಟುವಾಗಿ ವಿರೋಧಿಸಿ ಮಾತನಾಡಿದರು. ಭಾರತದ ಈ ಕಾಯ್ದೆಯು ತೀವ್ರ ಕಳವಳಕಾರಿ ಎಂದು ಬಣ್ಣಿಸಿದ ಅವರು ಕ್ರೈಸ್ತರ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಯಾವುದೇ ದೇಶದ ಪ್ರಯತ್ನವೂ ಖಂಡನಾರ್ಹ ಎಂದು ಹೇಳಿದರು. ಆದರೆ ಕೇಂದ್ರ ಗೃಹ ಸಚಿವಾಲಯವು ಇಂಥ ಟೀಕೆಗಳನ್ನು ಲೆಕ್ಕಿಸಲಿಲ್ಲ, ತಿದ್ದುಪಡಿಗಳನ್ನು ಜಾರಿಗೆ ತಂದಿತು.

ಬ್ರಿಟಿಷ್ ಆಳ್ವಿಕೆಯ ಕಾಲದಿಂದಲೂ ಭಾರತದಲ್ಲಿ ಧಾರ್ಮಿಕ ಮತಾಂತರ ಚಟುವಟಿಕೆಗಳಿಗೆ ವಿದೇಶಿ ದೇಣಿಗೆ ಸಿಗುತ್ತಿರುವುದು ಮತ್ತು ಮತಾಂತರದಲ್ಲಿ ವಿದೇಶಿ ಮಿಷನರಿಗಳೇ ಪ್ರಮುಖ ಪಾತ್ರ ವಹಿಸುತ್ತಿರುವುದು ತಿಳಿಯದ ಸಂಗತಿಯೇನಲ್ಲ. ಬ್ರಿಟಿಷರ ಕಾಲದಲ್ಲಿ ಹಾಗೂ ಸ್ವಾತಂತ್ರ್ಯದ ಬಳಿಕ ನಡೆಯುತ್ತಿರುವ ಮತಾಂತರ ಕಾರ್ಯಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಇದರಿಂದಾಗಿ ಒಡಿಶಾ (1967), ಮಧ್ಯ ಪ್ರದೇಶ (1968) ಮತ್ತು ಅರುಣಾಚಲ ಪ್ರದೇಶ (1978) ಆರಂಭದಲ್ಲೇ ಮತಾಂತರ ವಿರೋಧಿ ಕಾನೂನನ್ನು ಜಾರಿಗೆ ತಂದವು. ಸಂಘ ಪರಿವಾರ ಕೂಡ ಮತಾಂತರಕ್ಕಾಗಿ ಮಿಷನರಿಗಳು ಅನುಸರಿಸುತ್ತಿರುವ ವಿಧಾನಗಳ ಬಗ್ಗೆ ಬಹಳಷ್ಟು ಬಾರಿ ಕಳವಳ ವ್ಯಕ್ತಪಡಿಸಿದೆ. ಕೆಲವು ರಾಜ್ಯಗಳಲ್ಲಿ ಸಾವಿರಾರು ಜನರ ಸಾಮೂಹಿಕ ಮತಾಂತರ ನಡೆದ ಬಗ್ಗೆ ಕೂಡ ಆತಂಕ ವ್ಯಕ್ತಪಡಿಸಿದೆ. ಇದರಿಂದ ಇನ್ನೂ ಕೆಲವು ರಾಜ್ಯಗಳು ಮತಾಂತರ ನಿಷೇಧ ಕಾನೂನನ್ನು ಜಾರಿಗೆ ತಂದವು. ಹೀಗೆ ಜಾರಿಗೆ ತಂದ ರಾಜ್ಯಗಳಲ್ಲಿ ಛತ್ತೀಸ್‌ಗಢ (2000), ಗುಜರಾತ್ (2003), ಹಿಮಾಚಲ ಪ್ರದೇಶ (2006), ಜಾರ್ಖಂಡ್ (2017), ಉತ್ತರಾಖಂಡ (2018), ಉತ್ತರ ಪ್ರದೇಶ (2021), ಹರ್ಯಾಣ (2022), ರಾಜಸ್ಥಾನ (2025) ಮತ್ತು ಮಹಾರಾಷ್ಟ್ರ (2026) ಪ್ರಮುಖವಾಗಿವೆ. ಕುತೂಹಲದ ವಿಷಯವೆಂದರೆ ದಕ್ಷಿಣ ಭಾರತ ಮತ್ತು ಪಂಜಾಬಿನಲ್ಲಿ ಮತಾಂತರ ಪ್ರಮಾಣವು ಅತ್ಯಧಿಕವಾಗಿದ್ದರೂ ಇಲ್ಲಿ ಮತಾಂತರ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಲಾಗಿಲ್ಲ. ತಮಿಳ್ನಾಡು ಮುಖ್ಯಮಂತ್ರಿ ಜಯಲಲಿತಾ 2002ರಲ್ಲಿ ಇಂತಹ ಕಾಯ್ದೆ ಜಾರಿಗೆ ತರಲು ಪ್ರಯತ್ನ ನಡೆಸಿದರಾದರೂ ರಾಜ್ಯದಲ್ಲಿರುವ ಮಿಷನರಿಗಳ ಒತ್ತಡಕ್ಕೆ ಮಣಿದು ಎರಡೇ ವರ್ಷಗಳಲ್ಲಿ ಅದನ್ನು ಹಿಂತೆಗೆದುಕೊಂಡರು.

ಇದೀಗ ಕೇಂದ್ರ ಸರಕಾರವು ವಿದೇಶಿ ದೇಣಿಗೆ ಬಳಕೆ ಮೇಲೆ ವಿಧಿಸಿರುವ ನಿರ್ಬಂಧಗಳು ಮತಾಂತರದ ವಿಷಯದ ಕುರಿತಂತೆ ಮತ್ತೊಮ್ಮೆ ಚರ್ಚೆ ಹುಟ್ಟು ಹಾಕುವುದು ಖಂಡಿತ. ಕ್ರೈಸ್ತರು ಮತಾಂತರ ಮಾಡುವುದು ತಮ್ಮ ಧಾರ್ಮಿಕ ಚಟುವಟಿಕೆಯ ಅವಿಭಾಜ್ಯ ಅಂಗ ಎಂದು ಭಾವಿಸುತ್ತಾರೆ. ಧಾರ್ಮಿಕ ಪ್ರಚಾರದ ಹಕ್ಕು ಎಂದರೆ ಮತಾಂತರದ ಹಕ್ಕೂ ಹೌದು ಎಂದು ಅವರು ವಾದಿಸುತ್ತಾರೆ. ಆದರೆ 1977ರಲ್ಲಿ ಸುಪ್ರೀಂಕೋರ್ಟ್ ಪ್ರಕರಣವೊಂದರಲ್ಲಿ ತೀರ್ಪು ನೀಡುತ್ತಾ ಮತಾಂತರ ನಿಷೇಧ ಕಾಯ್ದೆಯನ್ನು ಎತ್ತಿ ಹಿಡಿದಿತ್ತು. ಸಂವಿಧಾನದ 25ನೇ ವಿಧಿಯು ಒಬ್ಬಾತನಿಗೆ ತನ್ನ ಧರ್ಮವನ್ನು ಆಯ್ಕೆ ಮಾಡಲು ಸ್ವಾತಂತ್ರ್ಯ ನೀಡುತ್ತದಾದರೂ ಮತ್ತೊಬ್ಬರನ್ನು ಮತಾಂತರ ಮಾಡುವ ಅಧಿಕಾರ ನೀಡುವುದಿಲ್ಲ ಎಂದು ನ್ಯಾಯಾಲಯ ಹೇಳಿತ್ತು. ಕೇಂದ್ರ ಸರಕಾರವು ಈ ತೀರ್ಪಿಗನುಗುಣವಾಗಿಯೇ ಈಗಿನ ಕಾನೂನನ್ನು ಜಾರಿಗೆ ತಂದಿದೆ.

ಕ್ರೈಸ್ತರು ಮತಾಂತರ ಕಾರ್ಯ ನಡೆಸುತ್ತಿರುವ ಬಗ್ಗೆ ಸ್ವಾತಂತ್ರ್ಯ ಪೂರ್ವದಲ್ಲೂ ಸಾಕಷ್ಟು ಚರ್ಚೆಗಳು ನಡೆದಿದೆ. ರಾಮಮೋಹನ್ ರಾಯ್, ವಿವೇಕಾನಂದ ಮತ್ತು ಮಹಾತ್ಮಗಾಂಧಿಯವರು ಈ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದ್ದರು. ಸಂವಿಧಾನ ರಚನಾ ಸಭೆಯಲ್ಲಿ ಕೂಡಾ ಮತಾಂತರ ಕಾರ್ಯಕ್ಕೆ ಅನುಸರಿಸುತ್ತಿರುವ ವಿಧಾನದ ಬಗ್ಗೆ ಕಳವಳ ವ್ಯಕ್ತವಾಗಿತ್ತು. ಮಿಷನರಿಗಳ ಮತಾಂತರ ಕಾರ್ಯವನ್ನು ಕಟುವಾಗಿ ವಿರೋಧಿಸುತ್ತಿದ್ದ ಮಹಾತ್ಮಾ ಗಾಂಧಿಯವರು ''ಮತಾಂತರವೆಂಬುದು ಸತ್ಯದ ತಳಹದಿಯ ಮೇಲೆ ಲೇಪಿಸಿದ ಅತ್ಯಂತ ಮಾರಕ ವಿಷ'' ಎಂದು ಬಣ್ಣಿಸಿದ್ದರು.ಸ್ವಾತಂತ್ರ್ಯದ ಬಳಿಕ ಮಿಷನರಿಗಳನ್ನು ಭಾರತದಲ್ಲಿ ಉಳಿಸಿಕೊಳ್ಳುವುದಕ್ಕೆ ನೀವು ಪೂರಕವಾಗಿದ್ದೀರಾ ಎಂದು ಗಾಂಧಿಯವರನ್ನು ಪ್ರಶ್ನಿಸಿದಾಗ, ಅವರು ಕೇವಲ ಮಾನವೀಯ ನೆರವು ನೀಡುತ್ತಿದ್ದರೆ ಪರವಾಗಿಲ್ಲ, ಆದರೆ ಅವರು ಮತಾಂತರ ಕಾರ್ಯಕ್ಕೆ ತೊಡಗಿದರೆ ಭಾರತ ಬಿಟ್ಟು ತೊಲಗಿ ಎಂದೇ ನಾನು ಹೇಳುತ್ತೇನೆ ಎಂದುತ್ತರಿಸಿದ್ದರು. 1935ರ ಹರಿಜನ ಪತ್ರಿಕೆಯಲ್ಲಿ ಅವರ ಸಂದರ್ಶನ ಪ್ರಕಟವಾಗಿದ್ದು ಅದರಲ್ಲಿ ಅವರು ''ನನಗೆ ಶಾಸನ ಮಾಡುವ ಅಧಿಕಾರ ಸಿಕ್ಕಿದರೆ ಮತಾಂತರ ಕಾರ್ಯವನ್ನು ಸಂಪೂರ್ಣ ನಿಲ್ಲಿಸುತ್ತೇನೆ. ಅದು ಸಂಘರ್ಷದ ಮೂಲ ಕಾರಣ'' ಎಂದು ಹೇಳಿದ್ದರು.

ಗಾಂಧಿಯವರ ಅಭಿಪ್ರಾಯದ ಅರಿವಿದ್ದ ಮಿಷನರಿಗಳು ತಮ್ಮ ಭವಿಷ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಆಗ ಜವಾಹರಲಾಲ ನೆಹರೂ ಅವರ ನೆರವಿಗೆ ಬಂದಿದ್ದರು. 1946ರಲ್ಲಿ ಮಿಷನರಿಗಳಿಗೆ ಆಶ್ವಾಸನೆ ನೀಡಿದ ಅವರು ''ಕ್ರೈಸ್ತರು ನಮ್ಮ ದೇಶದ ಮೂರನೆಯ ಅತೀ ದೊಡ್ಡ ಸಮುದಾಯ. ಹಾಗಾಗಿ ಅವರ ಧಾರ್ಮಿಕ ಅಥವಾ ಇತರ ಹಕ್ಕುಗಳನ್ನು ಕಡೆಗಣಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ'' ಎಂದಿದ್ದರು.

ಸಂವಿಧಾನ ರಚನಾ ಸಭೆಯಲ್ಲಿ ಕೂಡಾ ಧಾರ್ಮಿಕ ಪ್ರಚಾರ, ಮತಾಂತರ ಮತ್ತು ಧಾರ್ಮಿಕ ಪ್ರಚೋದನೆಯ ಕುರಿತಂತೆ ಚರ್ಚೆ ನಡೆದಿತ್ತು. ಧರ್ಮದ ಆಚರಣೆ ಮತ್ತು ಪ್ರಚಾರದ ಸ್ವಾತಂತ್ರ್ಯ ನೀಡುವುದಾಗಿ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿತ್ತು. ಆದರೆ ಮಿಷನರಿಗಳು ಧಾರ್ಮಿಕ ಪ್ರಚಾರದ ಜತೆಗೇ ಮತಾಂತರದ ಹಕ್ಕನ್ನೂ ನೀಡಬೇಕೆಂದು ಒತ್ತಾಯಿಸಿದ್ದರು. ಕೆ. ಮುನ್ಷಿ, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ಸಿ.ರಾಜಗೋಪಾಲಾಚಾರಿ ಮೊದಲಾದವರು ಮತಾಂತರ ಕಾರ್ಯಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಸರ್ದಾರ್ ಪಟೇಲ್ ಮತ್ತು ಮೌಲಾನಾ ಆಜಾದ್ ಕೂಡಾ ಮಿಷನರಿಗಳು ಸಾಮೂಹಿಕ ಮತಾಂತರ ಮಾಡುವುದನ್ನು ನಿಲ್ಲಿಸಬೇಕು ಎಂದು ಬಯಸಿದ್ದರು. ಮುನ್ಷಿಯವರು ಕರಡು ಪ್ರಸ್ತಾವವೊಂದನ್ನು ಸಂವಿಧಾನ ಉಪಸಮಿತಿಗೆ ಸಲ್ಲಿಸಿದ್ದರು. ಅದರಲ್ಲಿ ಅವರು ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಒತ್ತಾಯದಿಂದ ಅಥವಾ ಆಮಿಷದಿಂದ ಅಥವಾ ಪ್ರಲೋಭನೆಯಿಂದ ಮತಾಂತರ ಮಾಡುವುದನ್ನು ನಿಷೇಧಿಸಬೇಕು ಹಾಗೂ ಅಂಥ ಕಾರ್ಯಕ್ಕೆ ಶಿಕ್ಷೆ ವಿಧಿಸಬೇಕು ಎಂದು ಕೋರಿದ್ದರು.ಆದರೆ ಇಂಥ ಸಲಹೆಗೆ ಸಂವಿಧಾನ ಸಭೆಯಲ್ಲಿ ಬಹುಮತ ಸಿಗಲಿಲ್ಲ, ಕೊನೆಗೆ 19ನೇ ವಿಧಿಯಲ್ಲಿ ಧಾರ್ಮಿಕ ಪ್ರಚಾರದ ಹಕ್ಕನ್ನು ಸೇರಿಸಲಾಯಿತು.

ಆ ಬಳಿಕವೂ ಮಿಷನರಿ ಚಟುವಟಿಕೆಗಳ ಕುರಿತಂತೆ ಚರ್ಚೆಗಳು ನಡೆದಿದ್ದವು.1954ರಲ್ಲಿ ಮಧ್ಯಪ್ರದೇಶ ಸರಕಾರವು ಮಿಷನರಿಗಳು ಆದಿವಾಸಿ ಪ್ರದೇಶಗಳಲ್ಲಿ ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ವರದಿ ಮಾಡಲು ನಿಯೋಗಿ ಸಮಿತಿಯನ್ನು ನೇಮಿಸಿತ್ತು. ಈ ಸಮಿತಿಯು ಮಿಷನರಿಗಳು ಅನುಸರಿಸುತ್ತಿರುವ ವಿಧಾನಗಳ ಬಗ್ಗೆ ಮತ್ತು ಅವರ ಆಚರಣೆಗಳ ಬಗ್ಗೆ ಕಟುವಾಗಿ ಟೀಕಿಸಿ ವರದಿ ನೀಡಿತ್ತು.

ಮಿಷನರಿಗಳ ವಿರುದ್ಧ ಕೇಳಿಬರುತ್ತಿರುವ ಆರೋಪಗಳು ಸತ್ಯ ಎಂದು ಹೇಳಿದ್ದ ನಿಯೋಗಿ ಆಯೋಗವು ಮತಾಂತರ ತಡೆಯಲು ಮಧ್ಯಪ್ರದೇಶ ಸರಕಾರಕ್ಕೆ ಹಲವಾರು ಶಿಫಾರಸುಗಳನ್ನು ಮಾಡಿತ್ತು. 1.ಮತಾಂತರ ಕಾರ್ಯವನ್ನೇ ತಮ್ಮ ಪ್ರಮುಖ ಕಾರ್ಯವಾಗಿಸಿರುವ ಮಿಷನರಿಗಳು ರಾಜ್ಯ ಬಿಟ್ಟು ತೆರಳುವಂತೆ ಸೂಚಿಸಬೇಕು ಹಾಗೂ ರಾಜ್ಯಕ್ಕೆ ದೊಡ್ಡ ಸಂಖ್ಯೆಯಲ್ಲಿ ವಿದೇಶಿ ಮಿಷನರಿಗಳು ಬರುವುದನ್ನು ತಡೆಯಬೇಕು. 2.ಒತ್ತಡ, ವಂಚನೆ ಮತ್ತು ಆಮಿಷದಿಂದ ಮತಾಂತರ ಮಾಡುವುದನ್ನು ತಡೆಯಲು ಸಂವಿಧಾನದಲ್ಲಿ ತಿದ್ದುಪಡಿ ತರಬೇಕು ಎಂಬುದು ಅದರ ಶಿಫಾರಸುಗಳಾಗಿದ್ದವು.

ಆದರೆ ನೆಹರೂ ಸರಕಾರವು ನಿಯೋಗಿ ಸಮಿತಿಯ ವರದಿಗಳನ್ನು ತಿರಸ್ಕರಿಸಿತ್ತು. ಈ ಕುರಿತಂತೆ ಸಂಸತ್‌ನಲ್ಲಿ ಚರ್ಚೆ ನಡೆದಾಗ ಈ ವರದಿಯನ್ನು ಒಪ್ಪಿಕೊಳ್ಳಲಾಗುವುದಿಲ್ಲ ಎಂದು ಹೇಳಿತ್ತು. ಇದೀಗ ಏಳು ದಶಕಗಳ ಬಳಿಕ ಮೋದಿ ಸರಕಾರವು ನಿಯೋಗಿ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತಿದೆ.

ಗಲ್ಫ್ ಸಂಘರ್ಷದಲ್ಲಿ ಭಾರತದ ಸ್ಥಿರ ಹಾಗೂ ಸುಭದ್ರ ಹೆಜ್ಜೆ

▸ ವಿ. ಅನಂತ ನಾಗೇಶ್ವರನ್

ಫೆಬ್ರವರಿ ಕೊನೆಯಲ್ಲಿ ಹಾರ್ಮುಜ್ ಜಲಸಂಧಿಯ ಮೇಲೆ ದಾಳಿಗಳು ನಡೆದು ಸಮುದ್ರ ಮಾರ್ಗ ಮುಚ್ಚಿಹೋದಾಗ, ಭಾರತದ ಕಥೆ ಮುಗಿಯಿತು ಎಂದೇ ಎಲ್ಲರೂ ಭಾವಿಸಿದ್ದರು. ತನ್ನ ಕಚ್ಚಾ ತೈಲದ ಶೇ.90ರಷ್ಟು ಮತ್ತು ಅರ್ಧಕ್ಕಿಂತ ಹೆಚ್ಚು ಅಡುಗೆ ಅನಿಲವನ್ನು ಗಲ್ಫ್ ದೇಶಗಳಿಂದಲೇ ಆಮದು ಮಾಡಿಕೊಳ್ಳುವ ಭಾರತ, ಆರ್ಥಿಕ ನಿಯಮಗಳ ಪ್ರಕಾರ ದೊಡ್ಡ ಸಂಕಷ್ಟಕ್ಕೆ ಸಿಲುಕಬೇಕಿತ್ತು. ಪೆಟ್ರೋಲ್ ಬಂಕ್‌ಗಳಲ್ಲಿ ಕ್ಯೂ ನಿಲ್ಲುವ, ಅಡುಗೆಮನೆಗಳು ಖಾಲಿಯಾಗುವ, ರೂಪಾಯಿ ಮೌಲ್ಯ ಕುಸಿದು ಡಾಲರ್‌ಗಾಗಿ ಪರದಾಡುವ ಪರಿಸ್ಥಿತಿ ಬರಬೇಕಿತ್ತು. ಆದರೆ ನಾಲ್ಕು ತಿಂಗಳು ಕಳೆಯುತ್ತಾ ಬಂದು ಈಗ ಆ ಸಮುದ್ರ ಮಾರ್ಗ ಮತ್ತೆ ತೆರೆದಿದ್ದರೂ, ಇಂಧನದ ಬೆಲೆ ಹಳೆಯ ಸ್ಥಿತಿಗೆ ಮರಳಿದ್ದರೂ, ಭಾರತದಲ್ಲಿ ಅಂತಹ ಯಾವುದೇ ಆಪತ್ತು ಬರಲಿಲ್ಲ, ಒಂದು ಪೆಟ್ರೋಲ್ ಬಂಕ್ ಕೂಡ ಖಾಲಿಯಾಗಲಿಲ್ಲ, ಕೇಳಿದ ಪ್ರತಿಯೊಂದು ಕುಟುಂಬಕ್ಕೂ ಗ್ಯಾಸ್ ಸಿಲಿಂಡರ್ ಸಿಕ್ಕಿತು. ಭಾರತವು 1991 ಅಥವಾ 2013 ರಲ್ಲಾದಂತಹ ಆರ್ಥಿಕ ದಿವಾಳಿತನಕ್ಕೆ ಸಿಲುಕದೆ, ತನ್ನ ಆರ್ಥಿಕ ಸ್ಥಿರತೆಯನ್ನು ಕಾಪಾಡಿಕೊಂಡಿತು.

ಇದು ಕೇವಲ ಆಕಸ್ಮಿಕವಾಗಿ ಅಥವಾ ಅದೃಷ್ಟದಿಂದ ನಡೆದಿದ್ದಲ್ಲ, ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ ಸರ್ಕಾರ ಹೇಗೆ ಕೆಲಸ ಮಾಡಿತ್ತೋ, ಇಲ್ಲೂ ಅದೇ ಮಾದರಿಯನ್ನು ಅನುಸರಿಸಿತು. ಒಂದೇ ಒಂದು ನಾಟಕೀಯ ನಿರ್ಧಾರಕ್ಕೆ ಕೈಹಾಕುವ ಬದಲಿಗೆ, ಪರಿಸ್ಥಿತಿಗೆ ತಕ್ಕಂತೆ ಹಂತಹಂತವಾಗಿ ಅಗತ್ಯ ಕ್ರಮಗಳನ್ನು ಜರುಗಿಸುತ್ತಾ ಹೋಯಿತು. ಇದರಲ್ಲಿ ಸರ್ಕಾರದ ಮೊದಲ ಆದ್ಯತೆ ಸಾಮಾನ್ಯ ಕುಟುಂಬಗಳಾಗಿದ್ದವು. ಇಡೀ ಬಿಕ್ಕಟ್ಟಿನ ಅವಧಿಯಲ್ಲಿ ದೇಶದ ಯಾವುದೇ ಚಿಲ್ಲರೆ ಮಳಿಗೆಯಲ್ಲಿ ದಾಸ್ತಾನು ಖಾಲಿಯಾಗಲಿಲ್ಲ. ಅಂತಾರಾಷ್ಟ್ರೀಯ ಮಾರುಕಟ್ಟೆಯ ದರದ ಪ್ರಕಾರ 14.2 ಕೆಜಿಯ ಒಂದು ಗ್ಯಾಸ್ ಸಿಲಿಂಡರ್ ಬೆಲೆ 1,600 ರೂಪಾಯಿ ದಾಟಿದ್ದರೂ, ಸಾಮಾನ್ಯ ಜನರಿಗೆ ಅದರ ಬೆಲೆಯನ್ನು 900 ರೂಪಾಯಿ ಆಸುಪಾಸಿನಲ್ಲೇ ಹಿಡಿದಿಡಲಾಯಿತು. ಬಡವರಿಗಂತೂ ಇದಕ್ಕಿಂತ ಕಡಿಮೆ ಬೆಲೆಗೆ ನೀಡಲಾಯಿತು. ಇಡೀ ದೇಶದ ಆರ್ಥಿಕತೆಗೆ ಶಕ್ತಿ ನೀಡುವ ಇಂಧನಗಳ ವಿಷಯದಲ್ಲೂ ಸರ್ಕಾರ ಇದೇ ಹಾದಿ ಹಿಡಿಯಿತು. ಬೆಲೆ ಏರಿಕೆಯ ಆಘಾತವನ್ನು ಜನರ ಮೇಲೆ ಹಾಕುವ ಬದಲಿಗೆ, ತಾನೇ ಭರಿಸಲು ನಿರ್ಧರಿಸಿತು. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಲೀಟರ್‌ಗೆ ಹತ್ತು ರೂಪಾಯಿಗಳಷ್ಟು ಕಡಿತಗೊಳಿಸಿತು. ಇದರಿಂದ ಸರ್ಕಾರಕ್ಕೆ ಬರಬೇಕಿದ್ದ ಸುಮಾರು 1.7 ಲಕ್ಷ ಕೋಟಿ ರೂಪಾಯಿ ಆದಾಯ ಕೈಬಿಟ್ಟು ಹೋಯಿತು. ಜೊತೆಗೆ ವಿಮಾನದ ಇಂಧನದ ಮೇಲಿನ ಹೊರೆಯನ್ನು ಕಡಿಮೆ ಮಾಡಿತು. ತೈಲ ಮಾರಾಟ ಕಂಪನಿಗಳು ಸಹ ಎರಡು ತಿಂಗಳಿಗೂ ಹೆಚ್ಚು ಕಾಲ ಪೆಟ್ರೋಲ್ ಬಂಕ್ ದರಗಳನ್ನು ಹೆಚ್ಚಿಸದೆ ಸ್ಥಿರವಾಗಿ ಕಾಯ್ದುಕೊಂಡವು, ಅನಂತರವೇ ತೀರಾ ಅನಿವಾರ್ಯ ಎನ್ನುವಷ್ಟೇ ಸಣ್ಣ ಪ್ರಮಾಣದ ದರ ಪರಿಷ್ಕರಣೆ ಮಾಡಿದವು.

ಪ್ರಾಮಾಣಿಕವಾಗಿ ಹೇಳಬೇಕೆಂದರೆ ಈ ಯಶಸ್ಸಿನ ಹಿಂದೆ ಅದೃಷ್ಟವೂ ಕೈಜಾಚಿತು ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಜಲಸಂಧಿ ಮುಚ್ಚಿದ ಕೆಲವೇ ವಾರಗಳಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ ನೂರ ಇಪ್ಪತ್ತು ಡಾಲರ್ ದಾಟಿತ್ತು. ಆದರೆ ಮೇ ತಿಂಗಳಿನಿಂದ ಚೀನಾ ದೇಶವು ತೈಲ ಖರೀದಿಯನ್ನು ಕಡಿಮೆ ಮಾಡಿತು ಮತ್ತು ಅಮೆರಿಕ ತನ್ನ ತುರ್ತು ದಾಸ್ತಾನಿನಿಂದ ನಿರಂತರವಾಗಿ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿತು. ಇದರಿಂದಾಗಿ ತೈಲ ಬೆಲೆ ಮತ್ತೆ ನೂರು ಡಾಲರ್‌ಗಿಂತ ಇಳಿಯಿತು. ಇದರ ಜೊತೆಗೆ ಚೀನಾವು ರಸಗೊಬ್ಬರಗಳ ರಫ್ತನ್ನು ಪುನರಾರಂಭಿಸಿದ್ದರಿಂದ ನಮ್ಮ ದೇಶದ ಬಜೆಟ್‌ಗೆ ಭಾರಿ ಆರ್ಥಿಕ ಹೊರೆ ತಪ್ಪಿದಂತಾಯಿತು. ಒಂದು ವೇಳೆ ಈ ಬಿಕ್ಕಟ್ಟು ದೀರ್ಘಕಾಲ ಎಳೆದಿದ್ದರೆ ಅಥವಾ ತೈಲ ಬೆಲೆ 120 ಡಾಲರ್ ಆಸುಪಾಸಿನಲ್ಲೇ ಉಳಿದಿದ್ದರೆ, ಪರಿಸ್ಥಿತಿ ಇಷ್ಟು ಆರಾಮದಾಯಕವಾಗಿರುತ್ತಿರಲಿಲ್ಲ. ಅಂದರೆ, ಸರಿಯಾದ ನೀತಿಗಳು ಮತ್ತು ಅದೃಷ್ಟ ಎರಡೂ ಒಟ್ಟಿಗೇ ಕೆಲಸ ಮಾಡಿವೆ.

ವಾಸ್ತವವಾಗಿ ಸರಿಯಾದ ನೀತಿಗಳನ್ನು ರೂಪಿಸುವವರಿಗೆ ಅದೃಷ್ಟವೂ ಒಲಿಯುತ್ತದೆ. ಭಾರತದ ಈ ಆರ್ಥಿಕ ಚೇತರಿಕೆಯನ್ನು ಗಮನಿಸಿಯೇ, ಪ್ರಸಿದ್ಧ ಜಾಗತಿಕ ಸಂಸ್ಥೆಯಾದ ಗೋಲ್ಡ್‌ಮನ್ ಸ್ಯಾಚ್ಸ್ ಇತ್ತೀಚೆಗೆ ಭಾರತದ ಆರ್ಥಿಕ ಬೆಳವಣಿಗೆಯ ಮುನ್ನೋಟವನ್ನು ಹೆಚ್ಚಿಸಿದೆ. ಅದು 2026 ರ ಕ್ಯಾಲೆಂಡರ್ ವರ್ಷಕ್ಕೆ ಭಾರತದ ಬೆಳವಣಿಗೆಯನ್ನು 6.8% ಗೆ ಮತ್ತು ಪ್ರಸಕ್ತ ಹಣಕಾಸು ವರ್ಷಕ್ಕೆ 6.5% ಗೆ ಏರಿಸಿದೆ. ಇವೆರಡೂ ಹಿಂದಿನ ಅಂದಾಜಿಗಿಂತ 30 ಬೇಸಿಸ್ ಪಾಯಿಂಟ್‌ಗಳಷ್ಟು ಹೆಚ್ಚಾಗಿವೆ. ನಮ್ಮ ಮುಂದಿರುವ ಆಳವಾದ ಸಮಸ್ಯೆಯೆಂದರೆ ಆಮದುಗಳ ಮೇಲಿನ ಅತಿಯಾದ ಅವಲಂಬನೆ. ಆದರೆ ಇದು ಕೇವಲ ಇಂಧನಕ್ಕೆ ಮಾತ್ರ ಸೀಮಿತವಾಗಿಲ್ಲ, ನಮ್ಮ ದೇಶದ ಒಟ್ಟಾರೆ ವ್ಯಾಪಾರ ಕೊರತೆಯು (ಆಮದು ಮತ್ತು ರಫ್ತು ನಡುವಿನ ವ್ಯತ್ಯಾಸ) ರಾಷ್ಟ್ರೀಯ ಆದಾಯದ ಸುಮಾರು ಎಂಟು ಪ್ರತಿಶತದಷ್ಟಿದೆ. ಇದರಲ್ಲಿ ತೈಲವನ್ನು ಹೊರತುಪಡಿಸಿದರೂ ಅದು ಐದು ಪ್ರತಿಶತ ಉಳಿಯುತ್ತದೆ. ತೈಲ ಮತ್ತು ಚಿನ್ನ ಎರಡನ್ನೂ ಕೈಬಿಟ್ಟರೂ ಇನ್ನೂ ಮೂರೂವರೆ ಪ್ರತಿಶತದಷ್ಟು ಕೊರತೆ ಇರುತ್ತದೆ. ನಮ್ಮ ಗಾತ್ರದ ಇತರ ದೊಡ್ಡ ಆರ್ಥಿಕತೆಗಳು ಈ ವಿಷಯದಲ್ಲಿ ನಮಗಿಂತ ಉತ್ತಮ ಸ್ಥಿತಿಯಲ್ಲಿವೆ. ಆದ್ದರಿಂದ, ಭಾರತವು ತಾನು ಸ್ಪರ್ಧಾತ್ಮಕವಾಗಿ ಉತ್ಪಾದಿಸಬಹುದಾದ ಮತ್ತು ಉತ್ಪಾದಿಸಲೇಬೇಕಾದ ವಸ್ತುಗಳನ್ನು ತನ್ನ ದೇಶದ ಒಳಗೇ ತಯಾರಿಸಲು (ಸ್ವದೇಶೀಕರಣ) ಒತ್ತು ನೀಡಬೇಕು. ನಮ್ಮ ಕಂಪನಿಗಳು ಮತ್ತು ವ್ಯಾಪಾರ ಸಂಸ್ಥೆಗಳು ಜಾಗತಿಕ ಒಪ್ಪಂದಗಳ ಲಾಭ ಪಡೆಯಲು ಇನ್ನಷ್ಟು ಶ್ರಮಿಸಬೇಕು.

ವಿಶೇಷವಾಗಿ ಯುನೈಟೆಡ್ ಕಿಂಗ್‌ಡಮ್ ಮತ್ತು ಯುರೋಪಿಯನ್ ಯೂನಿಯನ್ ಜೊತೆಗೆ ಈ ವರ್ಷ ಜಾರಿಗೆ ಬರಲಿರುವ ಹೊಸ ಒಪ್ಪಂದಗಳು, ದೇಶದಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಸುವ ರಫ್ತು ಉದ್ಯಮಗಳಿಗೆ ದೊಡ್ಡ ಉತ್ತೇಜನ ನೀಡಬೇಕಾಗಿದೆ. ಆದರೆ ನುರಿತ ಕಾರ್ಮಿಕರಿಲ್ಲದೆ ಇವೆಲ್ಲವೂ ಸಾಧ್ಯವಿಲ್ಲ, ಅದಕ್ಕಾಗಿಯೇ ನಮ್ಮ ಯುವ ಭಾರತೀಯರಿಗೆ ವೃತ್ತಿಪರ ಮತ್ತು ತಾಂತ್ರಿಕ ಕೌಶಲ್ಯಗಳ ತರಬೇತಿ ನೀಡುವ ಕೆಲಸ ಈಗ ಯುದ್ಧೋಪಾದಿಯಲ್ಲಿ ನಡೆಯಬೇಕಿದೆ.

ಈ ಎಲ್ಲಾ ಕಾರ್ಯಗಳನ್ನು ನಾವು ಅತ್ಯಂತ ವೇಗವಾಗಿ ಮತ್ತು ನಿರಂತರವಾಗಿ ಮಾಡಬೇಕಾಗಿದೆ. ಇವುಗಳ ಕಡೆಗೆ ಗಮನ ಹರಿಸುವಾಗಲೇ, ಸರ್ಕಾರವು ಸದ್ಯಕ್ಕೆ ನಿರಾಶೆ ಮೂಡಿಸಿರುವ ಮುಂಗಾರು ಮಳೆಯ ಪರಿಸ್ಥಿತಿಯನ್ನು ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಆಗಮನದಿಂದ ಭಾರತೀಯರ ಉದ್ಯೋಗ ಹಾಗೂ ಜೀವನದ ಮೇಲಾಗುವ ಪರಿಣಾಮಗಳನ್ನು ಸಮರ್ಥವಾಗಿ ನಿಭಾಯಿಸಬೇಕಾಗಿದೆ. ಗಲ್ಫ್ ಸಂಘರ್ಷವು ನಮ್ಮ ಆರ್ಥಿಕತೆಯ ಒಂದು ರೀತಿಯ ಸ್ಥಿತಿಸ್ಥಾಪಕತ್ವವನ್ನು ಪರೀಕ್ಷಿಸಿತು. ಆದರೆ ಮುಂಬರುವ ವರ್ಷಗಳು ಇಂತಹ ಬೇರೆ ರೀತಿಯ ಸವಾಲುಗಳನ್ನು ತಂದೊಡ್ಡಲಿವೆ. ಭಾರತವು ಮೊದಲ ಪರೀಕ್ಷೆಯನ್ನು ಯಶಸ್ವಿಯಾಗಿ ಎದುರಿಸಿದೆ. ಇದು ನಮಗೆ ಅತಿಯಾದ ಹೆಮ್ಮೆಯನ್ನಲ್ಲದಿದ್ದರೂ, ಒಂದು ಆತ್ಮವಿಶ್ವಾಸವನ್ನು ನೀಡಿದೆ.

ಡಿಜಿಟಲ್ ಇಂಡಿಯಾ ಯೋಜನೆಗೆ 11 ವರ್ಷ
ಬಡ, ದುರ್ಬಲ ವರ್ಗದ ಸಬಲೀಕರಣ: ಮೋದಿ

• **ಹೊಸದಿಲ್ಲಿ:** ಕಳೆದ 11 ವರ್ಷಗಳಲ್ಲಿ ಡಿಜಿಟಲ್ ಇಂಡಿಯಾ ಉಪಕ್ರಮಗಳಿಂದ ದೇಶದ ಬಡವರು ಮತ್ತು ದುರ್ಬಲವರ್ಗದ ಸಬಲೀಕರಣವಾಗಿದ್ದು, ಕೋಟ್ಯಂತರ ಜನರ ಬದುಕು ಹಸನಾಗಿದೆ ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದ್ದಾರೆ.

ಡಿಜಿಟಲ್ ಇಂಡಿಯಾ ಉಪಕ್ರಮವು ಆಡಳಿತ ವ್ಯವಸ್ಥೆಯನ್ನು ಪುನರ್‌ವ್ಯಾಖ್ಯಾನಿಸಿದೆ. ದೇಶದ ನಾಗರಿಕರ ಸಬಲೀಕರಣಕ್ಕೆ ನೆರವಾಗಿದ್ದು, ಸರ್ವಾಂಗೀಣ ಅಭಿವೃದ್ಧಿಗೆ ವೇಗ ನೀಡಿದೆ ಎಂಬುದಾಗಿ ಡಿಜಿಟಲ್ ಇಂಡಿಯಾ ಉಪಕ್ರಮದ 11ನೇ ವರ್ಷಾಚರಣೆಯ ಸಂದರ್ಭದಲ್ಲಿ ಮೋದಿಯವರು ತಿಳಿಸಿದರು. ಡಿಜಿಟಲ್ ಇಂಡಿಯಾ ಜೀವನದ ಪ್ರತಿಯೊಂದು ಕ್ಷೇತ್ರವನ್ನೂ ತಲುಪಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.



ಆಪ್ಟಿಕಲ್ ಫೈಬರ್ ಜಾಲದ ವಿಸ್ತರಣೆಯಿಂದ ಹಿಡಿದು ಡಿಜಿಟಲ್ ವ್ಯವಹಾರದ ಹೆಚ್ಚಳದವರೆಗೆ ಭಾರತದ ಡಿಜಿಟಲ್ ಸಾಧನೆಯ ಯಶಸ್ಸು ಜಾಗತಿಕ ಗಮನ ಸೆಳೆದಿದೆ. ತಡೆರಹಿತ ಡಿಜಿಟಲ್ ಪಾವತಿಗಳು ಮತ್ತು ನೇರ ಲಾಭ ವರ್ಗಾವಣೆಯಂತಹ ವ್ಯವಸ್ಥೆಗಳಿಂದಾಗಿ ಜನತೆಗೆ ಸರಕಾರಿ ಯೋಜನೆಗಳ ಲಾಭ ನೇರವಾಗಿ ಮತ್ತು ಪಾರದರ್ಶಕವಾಗಿ ತಲುಪುವಂತಾಗಿದೆ. ತಂತ್ರಜ್ಞಾನವು ಜನರ ಬದುಕನ್ನು ಇನ್ನಷ್ಟು ಸುಗಮಗೊಳಿಸುವುದಕ್ಕೆ ಒಂದು ಶಕ್ತಿಶಾಲಿ ಸಾಧನವಾಗಿದೆ ಎಂದು ವಿಶ್ಲೇಷಿಸಿದರು.

ಡಿಜಿಟಲ್ ಇಂಡಿಯಾದ ಆವಿಷ್ಕಾರಗಳ ಅಲೆ ಭಾರತದ ಎಲ್ಲ ಭಾಗಗಳಿಗೂ ವ್ಯಾಪಿಸಿದೆ. ವಿಶೇಷವಾಗಿ ಗ್ರಾಮಗಳಿಗೆ, 2 ಮತ್ತು 3ನೇ ಹಂತದ ನಗರಗಳಿಗೆ ಇದರ ಹೆಚ್ಚಿನ ಪ್ರಯೋಜನ ಲಭಿಸಿದೆ. ದೇಶದ ಯುವ ಉದ್ಯಮಿಗಳು, ಸ್ಟಾರ್ಟ್‌ಅಪ್‌ಗಳು, ನಾವೀನ್ಯತಾ ಸಂಶೋಧಕರು, ದೇಶದ ಪ್ರತಿಯೊಂದು ಭಾಗಗಳಿಂದಲೂ ನಮ್ಮ ಜಗತ್ತನ್ನು ಕಾಡುವ ಸವಾಲುಗಳಿಗೆ ಪರಿಹಾರ ಕಲ್ಪಿಸುವಲ್ಲಿ ಶ್ರಮಿಸುತ್ತಿದ್ದಾರೆ. ಈ ಉಪಕ್ರಮವು ಶಿಕ್ಷಣ, ಆರೋಗ್ಯಸೇವೆ, ಕೃಷಿ, ವಾಣಿಜ್ಯ ಮತ್ತು ಸಾರ್ವಜನಿಕ ವಿತರಣಾ ಸೇವೆಗಳನ್ನು ಇನ್ನಷ್ಟು ಬಲಗೊಳಿಸಿದೆ ಎಂದು ವಿವರಿಸಿದರು.

ಡಿಜಿಟಲ್ ಜಗತ್ತಿನಲ್ಲಿ ಸರ್ಕಾರದ ಕ್ರಮಗಳಿಂದಾಗಿ ಭಾರತವು ಎಐ, ಸೆಮಿಕಂಡಕ್ಟರ್‌ಗಳು, ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು ಇತರ ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ತ್ವರಿತ ಪ್ರಗತಿ ಸಾಧಿಸುತ್ತಿದೆ. ತಂತ್ರಜ್ಞಾನವು ಮಾನವೀಯತೆಗೆ ಸೇವೆ ಸಲ್ಲಿಸುವ, ಪ್ರತಿಯೊಬ್ಬ ನಾಗರಿಕನನ್ನು ಸಬಲೀಕರಣಗೊಳಿಸುವ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಮುನ್ನಡೆಸುವ ಭವಿಷ್ಯವನ್ನು ಸೃಷ್ಟಿಸುವತ್ತ ಸರ್ಕಾರ ವಿಶೇಷ ಕಾಳಜಿ ವಹಿಸಲಿದೆ ಎಂದು ಮೋದಿ ಹೇಳಿದರು.

ವೈದ್ಯರಿಗೆ, ಸಿಎಗಳಿಗೆ ಮೋದಿ ಶುಭಾಶಯ

• **ಹೊಸದಿಲ್ಲಿ:** ವೈದ್ಯರ ದಿನ ಮತ್ತು ಚಾರ್ಟರ್ಡ್ ಅಕೌಂಟೆಂಟ್ಸ್ ದಿನದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವೈದ್ಯರು ಮತ್ತು ಸಿಎಗಳಿಗೆ ಶುಭಾಶಯ ತಿಳಿಸಿದ್ದು, ಅವರ ಸೇವೆಯನ್ನು ಶ್ಲಾಘಿಸಿದ್ದಾರೆ.

ವಿಜಯ್ ಸರ್ಕಾರ ಉರುಳಿಸಲು ಡಿಎಂಕೆ ಸಂಚು
ಶಾಸಕರಿಗೆ ₹50 ಕೋಟಿ ಆಮಿಷ?

» ತಮಿಳುನಾಡಿನಲ್ಲಿ ಕುದುರೆ ವ್ಯಾಪಾರ ಕದನ

» 35 ಕೋಟಿ ರೂ. ಆಮಿಷ ಪ್ರಕರಣದಲ್ಲಿ ಮೂವರ ಬಂಧನ

• **ಚೆನ್ನೈ:** ತಮಿಳುನಾಡಿನಲ್ಲಿ ಮುಖ್ಯಮಂತ್ರಿ ಜೋಸೆಫ್ ವಿಜಯ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಎರಡು ತಿಂಗಳು ಕಳೆಯುವ ಮೊದಲೇ ಶಾಸಕರ ಕುದುರೆ ವ್ಯಾಪಾರದ ಆರೋಪ ಕೇಳಿಬಂದಿದೆ. ಆಡಳಿತಾರೂಢ ತಮಿಳಗ ವೆಟ್ರಿ ಕಳಗಂ ಶಾಸಕರನ್ನು ಹಣದ ಆಮಿಷವೊಡ್ಡಿ ಸೆಳೆಯಲು ಪ್ರತಿಪಕ್ಷ ಡಿಎಂಕೆ ಪ್ರಯತ್ನಿಸಿದೆ ಎಂದು ಸಚಿವ ಆರ್. ನಿರ್ಮಲ್ ಕುಮಾರ್ ಗಂಭೀರ ಆರೋಪ ಮಾಡಿದ್ದಾರೆ.

ಟಿವಿಕೆ ಶಾಸಕ ಎನ್. ಇಳೈಯರಾಜ ಅವರಿಗೆ ವಿಧಾನಸಭೆಯ ನಿರ್ಣಯವೊಂದರ ವೇಳೆ ಪಕ್ಷದ ನಿಲುವಿನ ವಿರುದ್ಧ ಮತ ಚಲಾಯಿಸಲು 35 ಕೋಟಿ ರೂ. ನೀಡುವುದಾಗಿ ಆಮಿಷವೊಡ್ಡಲಾಗಿತ್ತು ಎನ್ನಲಾಗಿದೆ. ಆಮಿಷವನ್ನು ತಿರಸ್ಕರಿಸಿದ ಬಳಿಕ ಶಾಸಕರಿಗೆ ಹಾಗೂ ಅವರ ಕುಟುಂಬಕ್ಕೆ ಬೆದರಿಕೆ ಹಾಕಲಾಗಿದೆ ಎಂಬ ದೂರಿನ ಆಧಾರದಲ್ಲಿ ಪೊಲೀಸರು ತಿರುನಾವುಕ್ಕರಸು, ನರೇಶ್ ಮತ್ತು ತ್ಯಾಗರಾಜನ್ ಎಂಬ ಮೂವರನ್ನು ಬಂಧಿಸಿದ್ದಾರೆ.

ತಿರುನಾವುಕ್ಕರಸು ಎಂಬಾತ ತಾನು ಇಂಡಿಯನ್ ಪೊಲಿಟಿಕಲ್ ಡೆಮಾಕ್ರಟಿಕ್ ಸ್ಟ್ರಾಟಜೀಸ್ ಎಂಬ ರಾಜಕೀಯ ಸಮೀಕ್ಷಾ ಸಂಸ್ಥೆಯನ್ನು ಪ್ರತಿನಿಧಿಸುತ್ತಿರುವುದಾಗಿ ಹೇಳಿಕೊಂಡು ಶಾಸಕರನ್ನು ಸಂಪರ್ಕಿಸಿದ್ದ. ವಿಧಾನಸಭೆಯಲ್ಲಿ ಸಭಾಧ್ಯಕ್ಷರ ವಿರುದ್ಧ ನಿರ್ಣಯ ತರಲಾಗುತ್ತಿದ್ದು, ಅದರ ಪರವಾಗಿ ಮತ ಹಾಕಿದರೆ 35 ಕೋಟಿ ರೂ. ನೀಡುವುದಾಗಿ ಹೇಳಿದ್ದ ಎನ್ನಲಾಗಿದೆ.

ಕಳೆದ 40 ದಿನಗಳಿಂದ ಡಿಎಂಕೆ ನಾಯಕರು ಟಿವಿಕೆಯ ಬಹುತೇಕ ಶಾಸಕರನ್ನು ಸಂಪರ್ಕಿಸಿದ್ದು, ಪಕ್ಷ ತೊರೆದರೆ ತಲಾ 10 ಕೋಟಿ ರೂ.ನಿಂದ 50 ಕೋಟಿ ರೂ.ವರೆಗೆ ನೀಡುವುದಾಗಿ ಆಮಿಷವೊಡ್ಡಿದ್ದಾರೆ ಎಂದು ಸಚಿವ ನಿರ್ಮಲ್ ಕುಮಾರ್ ಆರೋಪಿಸಿದ್ದಾರೆ.


ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಮತ್ತು ಪ್ರತಿಪಕ್ಷದ ಉಪನಾಯಕ ಉದಯನಿಧಿ ಸ್ಟಾಲಿನ್ ಅವರ ಅನುಮತಿಯೊಂದಿಗೆ ಮಾಜಿ ಸಚಿವ ವಿ. ಸೆಂಥಿಲ್ ಬಾಲಾಜಿ ಈ ಕಾರ್ಯಾಚರಣೆ ನಡೆಸಿದ್ದಾರೆ ಎಂದೂ ಅವರು ದೂರಿದ್ದಾರೆ. ಬಂಧಿತ ನರೇಶ್, ಸೆಂಥಿಲ್ ಬಾಲಾಜಿ ಅವರ ಸಹೋದರ ಅಶೋಕ್ ಕುಮಾರ್ ಜತೆ ನಿರಂತರ ಸಂಪರ್ಕದಲ್ಲಿದ್ದ ಎಂಬ ಮಾಹಿತಿಯನ್ನೂ ಪೊಲೀಸರು ಪರಿಶೀಲಿಸುತ್ತಿದ್ದಾರೆ.



ಮೊದಲ ಬಾರಿಗೆ ಭಾರತೀಯ ಸೇನೆ ಮುಂಚೂಣಿ ಯುದ್ಧ ಕಾರ್ಯಾಚರಣೆಗಳಲ್ಲಿ ಡ್ರೋನ್‌ಗಳನ್ನು ಸಮಗ್ರವಾಗಿ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ. ಈ ಉದ್ದೇಶದಿಂದ ಬಾಜ್ ಬೆಟಾಲಿಯನ್ ಎಂಬ ವಿಶೇಷ ಡ್ರೋನ್ ದಳವೊಂದನ್ನು ರಚಿಸಲು ನಿರ್ಧರಿಸಿದೆ. ವಿವಿಧ ಯುದ್ಧರಂಗಗಳಲ್ಲಿ ನಿರಂತರ ವೈಮಾನಿಕ ಕಣ್ಗಾವಲು, ನಿಖರ ಗುರಿ ಹಾಗೂ ಡ್ರೋನ್ ಆಧಾರಿತ ಯುದ್ಧ ಕಾರ್ಯಾಚರಣೆಗಳ ಜವಾಬ್ದಾರಿ ನಿರ್ವಹಿಸಲಿವೆ. ಬಾಜ್ ಬೆಟಾಲಿಯನ್ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಪ್ರತ್ಯೇಕ ಬೆಟಾಲಿಯನ್ ಅಗತ್ಯವೇನು?

ರಷ್ಯಾ-ಉಕ್ರೇನ್ ಯುದ್ಧವಿರಲಿ ಅಥವಾ ಮಧ್ಯಪ್ರಾಚ್ಯ ಯುದ್ಧವಿರಲಿ, ಸೈನಿಕರಿಗಿಂತ ಹೆಚ್ಚು ಡ್ರೋನ್‌ಗಳ ಬಳಕೆಯಾಗುತ್ತಿವೆ. ಸೈನಿಕರು ಭೂಮಿಯಲ್ಲಿ ಹೋರಾಡುತ್ತಿದ್ದರೆ, ಮಾನವರಹಿತ ಡ್ರೋನ್‌ಗಳು ವೈಮಾನಿಕ ದಾಳಿ ನಡೆಸುತ್ತವೆ. ಈಗಾಗಲೇ ಭಾರತದ ಸಶಸ್ತ್ರಪಡೆಗಳು ಡ್ರೋನ್‌ಗಳನ್ನು ಹೊಂದಿವೆ. ಆದರೂ ಬಾಜ್ ಬೆಟಾಲಿಯನ್ ಎಂಬ ಪ್ರತ್ಯೇಕ ದಳವನ್ನು ರಚಿಸುವ ಅಗತ್ಯವೇನಿತ್ತು? ಸಂಪೂರ್ಣ ಮಾನವರಹಿತ ಡ್ರೋನ್ ಕಾರ್ಯಾಚರಣೆ, ವಿವಿಧ ಯುದ್ಧರಂಗಗಳಲ್ಲಿ ನಿರಂತರ ಕಣ್ಗಾವಲು ಇತ್ಯಾದಿಗಳಲ್ಲಿ ವಿಶೇಷ ದಳವೊಂದನ್ನು ರಚಿಸುವುದು ಸೇನೆಯ ಉದ್ದೇಶ.





ಇದರ ಜವಾಬ್ದಾರಿಗಳೇನು?

ಮಾನವರಹಿತ ವೈಮಾನಿಕ ಯುದ್ಧ ಕಾರ್ಯಾಚರಣೆಗಳನ್ನು ನಡೆಸಬಲ್ಲ ವಿಶೇಷಜ್ಞ ಡ್ರೋನ್ ಯುದ್ಧ ಘಟಕಗಳಾಗಿ ಬಾಜ್ ಬೆಟಾಲಿಯನ್ ಸೇವೆ ಸಲ್ಲಿಸಲಿವೆ. ನಿರಂತರ ಬೇಹುಗಾರಿಕೆ, ಕಣ್ಗಾವಲು ಮತ್ತು ಸ್ಥಳಾನ್ವೇಷಣೆ (ಐಎಸ್‌ಆರ್) ಚಟುವಟಿಕೆಗಳು, ದೂರವ್ಯಾಪ್ತಿಯ ವೈಮಾನಿಕ ಕಣ್ಗಾವಲು, ನಿಖರ ಡ್ರೋನ್ ದಾಳಿಗಳು, ಕಮಿಕಾಜಿ ಡ್ರೋನ್‌ಗಳ ನಿರ್ವಹಣೆ, ಆರ್ಟಿಲರಿ ಮತ್ತು ಕ್ಷಿಪಣಿ ಘಟಕಗಳೊಂದಿಗೆ ಸಹಯೋಗ, ಎಲೆಕ್ಟ್ರಾನಿಕ್ ಯುದ್ಧ ಮತ್ತು ಡ್ರೋನ್ ನಿರೋಧಕ ವ್ಯವಸ್ಥೆಗಳೊಂದಿಗೆ ಏಕೀಕರಣ, ಇನ್‌ಫ್ಯಾಂಟ್ರಿ ಸೇರಿದಂತೆ ಇತರ ಸೇನಾ ವಿಭಾಗಗಳಿಗೆ ಬೆಂಬಲ ನೀಡಲಿದೆ.

ಬಾಜ್ ಬೆಟಾಲಿಯನ್ ಎಂದರೇನು?

ಬಾಜ್ ಪದಕ್ಕೆ ಹದ್ದು, ಬೇಟೆ ಹಕ್ಕಿ (ಫಾಲ್ಕನ್ ಅಥವಾ ಹಾಕ್) ಎಂಬ ಅರ್ಥವಿದೆ. ಇದು ಪಂಜಾಬಿ, ಹಿಂದಿ, ಉರ್ದು ಭಾಷೆಗಳಲ್ಲಿ ಬಳಕೆಯಾಗುವ ಪರ್ಷಿಯನ್ ಮೂಲದ ಪದ. ಬೆಟಾಲಿಯನ್ ಸೇನೆಯ ಪ್ರಮುಖ ಘಟಕವಾಗಿದ್ದು, ಸಾಮಾನ್ಯ ಒಂದು ಬೆಟಾಲಿಯನ್‌ನಲ್ಲಿ 300ರಿಂದ 1,000 ಸೈನಿಕರು ಇರುತ್ತಾರೆ. ಇದನ್ನು ಒಬ್ಬ ಲೆಫ್ಟಿನೆಂಟ್ ಕರ್ನಲ್ ಮುನ್ನಡೆಸುತ್ತಾರೆ. ಈ ಬೆಟಾಲಿಯನ್‌ನಲ್ಲಿ ಡ್ರೋನ್‌ಗಳೇ ಬಾಜ್‌ನಂತೆ(ಹದ್ದಿನಂತೆ) ಕಣ್ಗಾವಲು ಮತ್ತು ದಾಳಿ ಮಾಡಲಿವೆ.

ಸಿಂದೂರದಲ್ಲಿ ಡ್ರೋನ್ ಮಳೆ

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತ್ಯುತ್ತರವಾಗಿ ಭಾರತದ ಸಶಸ್ತ್ರಪಡೆಗಳು ಒಂದಾಗಿ ನಡೆಸಿದ ಆಪರೇಷನ್ ಸಿಂದೂರ ಕಾರ್ಯಾಚರಣೆಯಲ್ಲಿ ಭಾರತವು ಅತ್ಯಧಿಕ ಡ್ರೋನ್, ಕೌಂಟರ್-ಡ್ರೋನ್ ವ್ಯವಸ್ಥೆಗಳನ್ನು ಬಳಸಿತ್ತು. ಸಿಂದೂರದ ನಂತರ ರಕ್ಷಣಾ ಸಾಮರ್ಥ್ಯ ಬಲವರ್ಧನೆ ಮತ್ತು ರಕ್ಷಣಾ ಉತ್ಪಾದನೆ ಹೆಚ್ಚಿಸಲು ಕೇಂದ್ರ ಸರ್ಕಾರ ಗಮನಹರಿಸಿದೆ. ಆಪರೇಷನ್ ಸಿಂದೂರದಲ್ಲಿ ಹಲವು ಅತ್ಯಾಧುನಿಕ ಕ್ಷಿಪಣಿಗಳ ಬಳಕೆಯಾಗಿದ್ದವು. ಆದರೆ ಡ್ರೋನ್‌ಗಳು ಸಂಘರ್ಷದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದವು. ಪಾಕಿಸ್ತಾನವೂ ಸಹ ಪ್ರಮುಖ ಭಾರತೀಯ ನಗರಗಳ ಮೇಲೆ ಡ್ರೋನ್ ದಾಳಿಗೆ ಸಂಚು ರೂಪಿಸಿತ್ತು. ಆದರೆ ಭಾರತದ ವಾಯು ರಕ್ಷಣಾ ವ್ಯವಸ್ಥೆ ಅವುಗಳನ್ನು ತಡೆದಿದ್ದವು. ಇದೇ ಸಿಂದೂರಕ್ಕೆ ಒಂದು ವರ್ಷ ತುಂಬಿದ್ದು, ಬಾಜ್ ಬೆಟಾಲಿಯನ್ ರಚಿಸುವುದಾಗಿ ಭಾರತೀಯ ಸೇನೆ ಘೋಷಿಸಿದೆ.

ಡ್ರೋನ್‌ಗಳ ಪಾತ್ರ ವಿಸ್ತರಣೆ

ಇಲ್ಲಿಯವರೆಗೆ ಸೇನೆಯಲ್ಲಿ ಡ್ರೋನ್‌ಗಳ ಕಾರ್ಯಾಚರಣೆಯನ್ನು ಇನ್‌ಫ್ಯಾಂಟ್ರಿ, ಆರ್ಟಿಲರಿ ಅಥವಾ ಇನ್ನಿತರ ಸಣ್ಣ ವಿಭಾಗಗಳು ನೋಡಿಕೊಳ್ಳುತ್ತಿದ್ದವು. ಸ್ಥಳಾನ್ವೇಷಣೆ, ಕಣ್ಗಾವಲು ಮತ್ತು ಫಿರಂಗಿ ಮದ್ದುಗುಂಡುಗಳ ನೆರವು ನೀಡುವುದು ಇನ್‌ಫ್ಯಾಂಟ್ರಿ, ಆರ್ಟಿಲರಿ ಮೊದಲಾದ ವಿಭಾಗಗಳ ಜವಾಬ್ದಾರಿ. ಆದರೆ ಇತ್ತೀಚಿನ ಯುದ್ಧ ಸಂಘರ್ಷಗಳಿಂದ ಡ್ರೋನ್‌ಗಳ ಪಾತ್ರವು ಹೆಚ್ಚಿನ ಮಹತ್ವ ಪಡೆದುಕೊಂಡಿವೆ. ಡ್ರೋನ್‌ಗಳನ್ನು ಗುಪ್ತಚರ ಮಾಹಿತಿ ಸಂಗ್ರಹಿಸಲು, ನಿಖರವಾದ ಮಾರ್ಗದರ್ಶನದೊಂದಿಗೆ ಟ್ಯಾಂಕ್‌ಗಳು, ಬಂಕರ್‌ಗಳು ಹಾಗೂ ಫಿರಂಗಿ ನೆಲೆಗಳನ್ನು ಧ್ವಂಸಗೊಳಿಸುವ ಸಾಮರ್ಥ್ಯ ಹೊಂದಿವೆ. ಒಂದೇ ವೇಳೆ ಹಲವು ಡ್ರೋನ್‌ಗಳನ್ನು ಬಳಸಿಕೊಂಡು ಸ್ವಾರ್ಮ್ ದಾಳಿ ನಡೆಸುವುದೂ ಸಾಧ್ಯವಿದೆ. ಇದರೊಂದಿಗೆ ದಾಳಿಯ ಬಳಿಕ ಹಾನಿಯ ಮೌಲ್ಯಮಾಪನ ನಡೆಸುವುದು ಹಾಗೂ ಎಲೆಕ್ಟ್ರಾನಿಕ್ ಯುದ್ಧ ವ್ಯವಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ಶತ್ರುವಿನ ಸಂಪರ್ಕ ವ್ಯವಸ್ಥೆಗಳನ್ನು ಪತ್ತೆಹಚ್ಚುವುದು, ಪತ್ತೆಹಚ್ಚಿ ಜಾಮ್‌ಗೊಳಿಸುವ ಕಾರ್ಯವನ್ನೂ ಡ್ರೋನ್‌ಗಳು ನಿರ್ವಹಿಸುತ್ತವೆ. ಈ ವಿಸ್ತೃತ ಜವಾಬ್ದಾರಿಗಳನ್ನು ಗಮನದಲ್ಲಿಟ್ಟುಕೊಂಡು ಡ್ರೋನ್‌ಗಳನ್ನು ಕೇವಲ ಸಹಾಯಕ ಸಾಧನವನ್ನಾಗಿ ಪರಿಗಣಿಸುವ ಬದಲು, ಒಂದು ವಿಶೇಷಜ್ಞ ದಳವನ್ನಾಗಿ ಸಂಘಟಿಸುವ ಅಗತ್ಯವಿದೆ ಎಂಬ ಪ್ರಮುಖ ನಿರ್ಧಾರವನ್ನು ಭಾರತೀಯ ಸೇನೆ ತೆಗೆದುಕೊಂಡಿದೆ.

ಬಾಜ್-ಅಶಿನಿ ನಡುವಿನ ವ್ಯತ್ಯಾಸ?

ಅಶಿನಿ ಎಂದರೆ ಸಂಸ್ಕೃತದಲ್ಲಿ ವಜ್ರ ಎಂದರ್ಥ. ಅಶಿನಿ ಡ್ರೋನ್ ಪ್ಲಾಟೂನ್, ಇವು ಭಾರತೀಯ ಸೇನಾ ತುಕಡಿಗಳಿಗಾಗಿ ರಚಿಸಲಾದ ವಿಶೇಷ ಡ್ರೋನ್ ಘಟಕಗಳಾಗಿವೆ. ಎರಡೂ ಡ್ರೋನ್‌ಗಳ ಕಾರ್ಯಾಚರಣೆ ಜವಾಬ್ದಾರಿ ಹೊಂದಿವೆಯಾದರೂ



ಎರಡೂ ಘಟಕಗಳು ವಿಭಿನ್ನ ಮಟ್ಟದಲ್ಲಿ ಕಾರ್ಯಾಚರಣೆ ನಡೆಸಲಿವೆ. ಅಶಿನಿ ಮಾದರಿಯಲ್ಲಿ, ಇನ್‌ಫ್ಯಾಂಟ್ರಿ ಬೆಟಾಲಿಯನ್‌ಗಳಿಗೆ ಕಣ್ಗಾವಲು, ಶತ್ರುಗಳ ಚಲನವಲನ ಗಮನಿಸಲು ಹಾಗೂ ಕಡಿಮೆ ದೂರವ್ಯಾಪ್ತಿಯಿಂದ ರಣರಂಗದ ಪರಿಸ್ಥಿತಿ ತಿಳಿದುಕೊಳ್ಳಲು ಸಣ್ಣ ಪ್ರಮಾಣದ ಡ್ರೋನ್ ನೆರವು ನೀಡಲಾಗುತ್ತದೆ. ಆದರೆ ಬಾಜ್, ಒಂದು ಸಂಪೂರ್ಣ ಡ್ರೋನ್ ಯುದ್ಧ ಕಾರ್ಯಾಚರಣೆಗಳ ಜವಾಬ್ದಾರಿ ಹೊತ್ತ ಸ್ವತಂತ್ರ ಬೆಟಾಲಿಯನ್ ಆಗಿರಲಿದೆ. ಅಶಿನಿ ಮುನ್ನೆಲೆ ಕಾಲಾಳು ಪಡೆಗಳ ಕಣ್ಣಿನಂತೆ ಸೇವೆ ಸಲ್ಲಿಸುವುದಾದರೆ, ಬಾಜ್ ಬೆಟಾಲಿಯನ್ ಸಂಪೂರ್ಣ ಹದ್ದಿನ ಕಣ್ಣಿನಂತೆ ಕರ್ತವ್ಯ ನಿರ್ವಹಿಸಲಿದೆ.

ಕಿರುಸುದ್ದಿ

ಜಿಎಸ್‌ಟಿ ಸಂಗ್ರಹ ಕಳೆದ ಜೂನ್‌ಗಿಂತ 14% ಏರಿಕೆ

• **ಹೊಸದಿಲ್ಲಿ:** 2026ರ ಜೂನ್‌ನಲ್ಲಿ ಜಿಎಸ್‌ಟಿ ಸಂಗ್ರಹವು ಕಳೆದ ವರ್ಷ ಜೂನ್‌ಗಿಂತ ಶೇ.14 ಏರಿಕೆಯಾಗಿದ್ದು, 1.95 ಲಕ್ಷ ಕೋಟಿ ರೂ. ತಲುಪಿದೆ. ಜೂನ್‌ನಲ್ಲಿ ಆಮದು ಮತ್ತು ದೇಶೀಯ ಪೂರೈಕೆಗಳಿಂದ ಅಧಿಕ ಜಿಎಸ್‌ಟಿ ತೆರಿಗೆ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಬುಧವಾರ ಮಾಹಿತಿ ನೀಡಿದೆ. ಮೇನಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) 1.94 ಲಕ್ಷ ಕೋಟಿ ರೂ. ಇತ್ತು. 2025ರ ಜೂನ್‌ನಲ್ಲಿ ಜಿಎಸ್‌ಟಿ ಸಂಗ್ರಹ 1.71 ಲಕ್ಷ ಕೋಟಿ ರೂ. ಆಗಿತ್ತು. ಕೇಂದ್ರ ಸರ್ಕಾರದ ಮಾಹಿತಿ ಪ್ರಕಾರ, ದೇಶೀಯ ವಹಿವಾಟುಗಳ ಜಿಎಸ್‌ಟಿ ಸಂಗ್ರಹವು ಶೇ.6.5ರಷ್ಟು ಏರಿಕೆಯಾಗಿದ್ದು, 1.35 ಲಕ್ಷ ಕೋಟಿ ರೂ. ತಲುಪಿದೆ.

ಮಂದಿರ ಕಾಣಿಕೆ ಪ್ರಕರಣ ತನಿಖೆಯ ಅವಧಿ ವಿಸ್ತರಣೆ

• **ಲಖನೌ:** ಅಯೋಧ್ಯೆಯ ಶ್ರೀರಾಮ ದೇವಾಲಯದಲ್ಲಿ ಕಾಣಿಕೆ ದುರುಪಯೋಗದ ಆರೋಪಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡಕ್ಕೆ ಉತ್ತರ ಪ್ರದೇಶ ಸರ್ಕಾರವು 15 ದಿನಗಳ ಕಾಲಾವಕಾಶ ನೀಡಿದೆ. ಈ ಬಗ್ಗೆ ವಿಸ್ತೃತ ತನಿಖೆ ಮಾಡಲು ಮತ್ತು ತನಿಖೆಯ ವ್ಯಾಪ್ತಿಯನ್ನು ವಿಸ್ತರಿಸಲು ವಿಶೇಷ ತನಿಖಾ ತಂಡದ(ಎಸ್‌ಐಟಿ) ಅಧಿಕಾರಾವಧಿಯನ್ನು ವಿಸ್ತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಅಯೋಧ್ಯೆಯಲ್ಲಿ ಕಾಣಿಕೆಗೆ ಸಂಬಂಧಿತ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿಗೆ ಜುಲೈ 15ರವರೆಗೆ ಗಡುವನ್ನು ವಿಸ್ತರಿಸಿದ್ದಾರೆ.

ನೀರು ಸಿಗದಿದ್ದರೆ ವಿಶ್ವವ್ಯವಸ್ಥೆ ಕುಸಿತ

• **ಇಸ್ಲಾಮಾಬಾದ್:** ಸಿಂಧು ಜಲ ಒಪ್ಪಂದವನ್ನು ಭಾರತ ಅಮಾನತಿನಲ್ಲಿಟ್ಟಿರುವುದರಿಂದ ತೀವ್ರ ಜಲಕ್ಷಾಮ ಎದುರಾಗಬಹುದೆಂಬ ಆತಂಕಕ್ಕೆ ಒಳಗಾಗಿರುವ ಪಾಕಿಸ್ತಾನ ಈಗ ಅಂತಾರಾಷ್ಟ್ರೀಯ ಸಮುದಾಯದ ಮೊರೆ ಹೋಗಿದೆ. ಒಪ್ಪಂದವನ್ನು ಗೌರವಿಸದಿದ್ದರೆ ಎರಡನೇ ಮಹಾಯುದ್ಧದ ನಂತರ ರೂಪುಗೊಂಡಿರುವ ಅಂತಾರಾಷ್ಟ್ರೀಯ ವ್ಯವಸ್ಥೆಯ ವಿಶ್ವಾಸಾರ್ಹತೆಯೇ ಕುಸಿದುಬೀಳಲಿದೆ ಎಂದು ಪಾಕಿಸ್ತಾನದ ನಾಯಕರು ಗೋಳು ತೋಡಿಕೊಂಡಿದ್ದಾರೆ. ಪಾಕಿಸ್ತಾನದ ನಿರಂತರ ಪ್ರಚೋದನೆ, ಗಡಿಯಾಚೆ ಭಯೋತ್ಪಾದನೆ ಮತ್ತು ದ್ವಿಪಕ್ಷೀಯ ಮಾತುಕತೆಯ ವೈಫಲ್ಯದ ಹಿನ್ನೆಲೆಯಲ್ಲಿ ಸಿಂಧು ಜಲ ಒಪ್ಪಂದವನ್ನು ಅಮಾನತಿನಲ್ಲಿಡುವುದು ಅನಿವಾರ್ಯವಾಯಿತು ಎಂಬುದು ಭಾರತದ ನಿಲುವಾಗಿದೆ ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ಹರೀಶ್ ಪರ್ವತನೇನಿ ಸ್ಪಷ್ಟಪಡಿಸಿದ್ದರು.

ರಸ್ತೆ ಅಪಘಾತ: ಎಂಟು ಮಂದಿ ಸಜೀವ ದಹನ

• **ದೌಸಾ:** ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇನಲ್ಲಿ ಬುಧವಾರ ಮುಂಜಾನೆ ಬಸ್ಸೊಂದು ಟ್ರಕ್‌ಗೆ ಡಿಕ್ಕಿ ಹೊಡೆದು ಬೆಂಕಿ ಹೊತ್ತಿಕೊಂಡ ಪರಿಣಾಮ ಎಂಟು ಜನರು ಸಜೀವ ದಹನವಾಗಿದ್ದಾರೆ. ಇತರ 24 ಜನರು ಗಾಯಗೊಂಡಿದ್ದಾರೆ.

ಹಂಸ್ ಟ್ರಾವೆಲ್ಸ್‌ಗೆ ಸೇರಿದ ಬಸ್ ರಿಷಿಕೇಶದಿಂದ ಇಂದೋರ್‌ಗೆ ತೆರಳುತ್ತಿದ್ದಾಗ ಧನಾವಡಾ ಬಳಿ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ಎರಡೂ ವಾಹನಗಳಲ್ಲಿ ಬೆಂಕಿ ಹೊತ್ತಿಕೊಂಡಿದೆ.

ಗಾಯಗೊಂಡ 14 ಜನರಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಮೃತರಲ್ಲಿ ಆರು ಜನರ ದೇಹಗಳು ಗುರುತಿಸಲಾಗದಷ್ಟು ಸುಟ್ಟುಹೋಗಿರುವುದರಿಂದ ಅವರ ಗುರುತು ಪತ್ತೆ ಹಚ್ಚಲು ಡಿಎನ್‌ಎ ಪರೀಕ್ಷೆ ನಡೆಸಲಾಗುವುದು. ಅಗ್ನಿಶಾಮಕ ಸಿಬ್ಬಂದಿ, ಪೊಲೀಸರು ಮತ್ತು ಸ್ಥಳೀಯ ಆಡಳಿತ, ಬೆಂಕಿಯನ್ನು ಹತೋಟಿಗೆ ತಂದ ನಂತರ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ರಾಜ್ಯಪಾಲ ಹರಿಭಾವು ಬಾಗಡೆ ಮತ್ತು ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಸೇರಿದಂತೆ ಹಲವು ನಾಯಕರು ಘಟನೆಗೆ ತೀವ್ರ ಸಂತಾಪ ಸೂಚಿಸಿದ್ದಾರೆ.

ಬಸ್ ದುರಂತಕ್ಕೆ ನಾಲ್ವರು ಬಲಿ: ಮತ್ತೊಂದು ಹೆದ್ದಾರಿ ದುರಂತದಲ್ಲಿ, ಮಥುರಾದ ಯಮುನಾ ಎಕ್ಸ್‌ಪ್ರೆಸ್‌ವೇನಲ್ಲಿ ಬಸ್ಸೊಂದು ಕಂಟೈನರ್ ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಮೃತಪಟ್ಟಿದ್ದಾರೆ. ಇತರ 32 ಪ್ರಯಾಣಿಕರು ಗಾಯಗೊಂಡಿದ್ದಾರೆ. ಈ ವಾಹನದಲ್ಲಿ ನಿಗದಿತ ಸಾಮರ್ಥ್ಯಕ್ಕಿಂತ ಹೆಚ್ಚಾಗಿ 65 ಪ್ರಯಾಣಿಕರನ್ನು ತುಂಬಿಸಲಾಗಿತ್ತು. ಅಲ್ಲದೆ, ಅಪಘಾತ ಸಂಭವಿಸಿದ ಸಮಯದಲ್ಲಿ ಚಾಲಕನ ಬದಲಿಗೆ ನಿರ್ವಾಹಕ ಬಸ್ ಚಲಾಯಿಸುತ್ತಿದ್ದ ಎನ್ನಲಾಗಿದೆ.

ಬೃಹತ್ ರಾಹೆ ವಿಸ್ತರಣೆ ಯೋಜನೆಗಳಿಗೆ ಸಮ್ಮತಿ

• **ಹೊಸದಿಲ್ಲಿ:** ದಿಲ್ಲಿ ಮತ್ತು ಉತ್ತರ ಪ್ರದೇಶದಲ್ಲಿ ಒಟ್ಟು 14,115 ಕೋಟಿ ರೂ. ಮೊತ್ತದ ಬೃಹತ್ ಹೆದ್ದಾರಿ ವಿಸ್ತರಣೆ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ ಎಂದು ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆ, ರಾಷ್ಟ್ರೀಯ ಹೆದ್ದಾರಿ-148ಎಇಗಾಗಿ 8.1 ಕಿಮೀ ಉದ್ದದ ಆರು ಪಥಗಳ ರಸ್ತೆ ಸುರಂಗವನ್ನು ನಿರ್ಮಿಸಲು 6,969.67 ಕೋಟಿ ರೂ.ಗಳ ಯೋಜನೆಗೆ ಅನುಮತಿ ನೀಡಿದೆ. ಐದು ವರ್ಷಗಳಲ್ಲಿ ಪೂರ್ಣಗೊಳ್ಳಲಿರುವ ಈ ಭೂಗತ ಅವಳಿ-ಟ್ಯೂಬ್ ಸುರಂಗ, ದ್ವಾರಕಾ ಎಕ್ಸ್‌ಪ್ರೆಸ್ ವೇಯನ್ನು ವಸಂತ ಕುಂಜ್‌ನ ನೆಲ್ಸನ್ ಮಂಡೇಲಾ ಮಾರ್ಗಕ್ಕೆ ಸಂಪರ್ಕಿಸಲಿದೆ.



ಇದು ಗುರುಗ್ರಾಮ, ದ್ವಾರಕಾ, ಪಶ್ಚಿಮ ದಿಲ್ಲಿ ಮತ್ತು ಐಜಿಐ ವಿಮಾನ ನಿಲ್ದಾಣದಿಂದ ದಕ್ಷಿಣ ದಿಲ್ಲಿಯ ಕಡೆಗಿನ ಸಂಚಾರ ದಟ್ಟಣೆಯನ್ನು ಸುಗಮಗೊಳಿಸುವ ನಿರೀಕ್ಷೆಯಿದೆ. ಇದರ 1.98 ಕಿಮೀ ಭಾಗ, ದಕ್ಷಿಣದ ರೇಂಜ್ ಅರಣ್ಯದ ಕೆಳಗಿನಿಂದ ಸುರಕ್ಷಿತವಾಗಿ ಹಾದುಹೋಗಲಿದೆ. ಉತ್ತರ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ-34ರ ಕಾನ್ಪುರ-ಕಬ್ರಾಯ್ ವಿಭಾಗದಲ್ಲಿ 117.7 ಕಿಮೀ ಉದ್ದದ, 4/6 ಪಥಗಳ ಪ್ರವೇಶ ನಿಯಂತ್ರಿತ ಗ್ರೀನ್‌ಫೀಲ್ಡ್ ಹೆದ್ದಾರಿ ನಿರ್ಮಾಣಕ್ಕೂ ಒಪ್ಪಿಗೆ ನೀಡಿದೆ. ಅಂದಾಜು 7,145.14 ಕೋಟಿ ರೂ. ವೆಚ್ಚದ ಈ ಯೋಜನೆ, ಭೋಪಾಲ್-ಕಾನ್ಪುರ ಆರ್ಥಿಕ ಕಾರಿಡಾರ್‌ನ ಪ್ರಮುಖ ಭಾಗ.

ಅರುಣಾಚಲ, ಹಿಮಾಚಲ, ಅಸ್ಸಾಂನಲ್ಲಿ ಭಾರೀ ಮಳೆ

• **ಹೊಸದಿಲ್ಲಿ:** ದೇಶದ ವಿವಿಧ ಭಾಗಗಳಲ್ಲಿ ಬುಧವಾರ ಭಾರೀ ಮಳೆ ಸುರಿದಿದ್ದು, ಮುಂಬೈ, ಅಸ್ಸಾಂ ಮತ್ತು ಹಿಮಾಚಲ ಪ್ರದೇಶದಲ್ಲಿ ಭೂಕುಸಿತ, ಪ್ರವಾಹದ ಪರಿಸ್ಥಿತಿ ಎದುರಾಗಿದೆ.

ಅರುಣಾಚಲ ಪ್ರದೇಶವು ಹಠಾತ್ ಪ್ರವಾಹದ ಪರಿಣಾಮವನ್ನು ಎದುರಿಸುತ್ತಿದ್ದರೆ, ಮಹಾರಾಷ್ಟ್ರದ ಹಲವಾರು ಭಾಗಗಳಲ್ಲಿ ಭಾರೀ ಮಳೆಯಾಗಿದೆ. ಮುಂಬರುವ ದಿನಗಳಲ್ಲಿ ದಕ್ಷಿಣ ಬಂಗಾಳದಲ್ಲಿ ಭಾರೀ ಮಳೆಯಾಗಲಿದೆ ಎಂದು ಐಎಂಡಿ ಎಚ್ಚರಿಕೆ ನೀಡಿದೆ. ನವೀ ಮುಂಬೈನಲ್ಲಿ ವಿದ್ಯುತ್ ಆಘಾತಕ್ಕೊಳಗಾದ ಇಬ್ಬರು ಹುಡುಗಿಯರು ಪವಾಡಸದೃಶವಾಗಿ ಪಾರಾಗಿದ್ದಾರೆ. ಮಹಾರಾಷ್ಟ್ರದಲ್ಲಿ, ಥಾಣೆ ಮತ್ತು ಪಾಲ್ಘರ್ ಜಿಲ್ಲೆಗಳು ಮತ್ತು ಮುಂಬೈ ಮೆಟ್ರೋಪಾಲಿಟನ್ ಪ್ರದೇಶದಲ್ಲಿ (ಎಂಎಂಆರ್) ಭಾರೀ ಮಳೆಯಾಗಿದ್ದು, ಹಲವಾರು ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ.



ಇನ್ನು ಅಸ್ಸಾಂನ ಪ್ರವಾಹ ಪರಿಸ್ಥಿತಿ ಇದ್ದು, ನಾಲ್ಕು ಜಿಲ್ಲೆಗಳಲ್ಲಿ ಸುಮಾರು 48,500 ಜನರು ಬಾಧಿತರಾಗಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ಶಿಮ್ಲಾ, ಮನಾಲಿ ಮತ್ತು ಧರ್ಮಶಾಲಾ ಸೇರಿದಂತೆ ರಾಜ್ಯದ ಹಲವಾರು ಭಾಗಗಳಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ನಿರಂತರ ಮಳೆಯು ಚಂಬಾ ಜಿಲ್ಲೆಯ ಲಾನೋಟ್ ಮತ್ತು ಫಾಗ್ನಾಗ್ ಗ್ರಾಮಗಳಲ್ಲಿ ಪ್ರವಾಹದಂತಹ ಪರಿಸ್ಥಿತಿಗಳನ್ನು ಸೃಷ್ಟಿಸಿದೆ. ಅಲ್ಲಿ ಪರ್ವತದಿಂದ ಬೀಳುವ ಅವಶೇಷಗಳು ಎರಡು ಮನೆಗಳಿಗೆ ನುಗ್ಗಿ, ಗೋಡೆಗಳ ಮೇಲೆ ಬಿರುಕುಗಳು ಸೇರಿದಂತೆ ತೀವ್ರ ಹಾನಿಯನ್ನುಂಟುಮಾಡಿದೆ.

ವಾಣಿಜ್ಯ ಎಲ್ಪಿಜಿ ಸಿಲಿಂಡರ್ ದರ ₹183.50 ಇಳಿಕೆ

• **ಹೊಸದಿಲ್ಲಿ:** ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಬಳಕೆಯಾಗುವ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ 183.50 ರೂ. ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 19 ಕೆಜಿ ವಾಣಿಜ್ಯ ಎಲ್‌ಪಿಜಿ ದರ 3,021 ರೂ.ಗೆ ಇಳಿದಿದೆ. ಈ ವರ್ಷ ಇದೇ ಮೊದಲ ಬಾರಿಗೆ 19 ಕೆಜಿ ಎಲ್‌ಪಿಜಿ ದರ ಇಳಿಕೆಯಾಗಿದೆ. ಜಾಗತಿಕ ತೈಲ ಬೆಲೆ ಕುಸಿತದಿಂದಾಗಿ ದರ ಇಳಿಸಲಾಗಿದೆ. ಈಗ ಪ್ರತಿ 19 ಕೆ.ಜಿ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ 2,930 ರೂ. ವರೆಗೆ ಇಳಿದಿದೆ ಎಂದು ತೈಲ ಕಂಪನಿಗಳು ಹೇಳಿವೆ. ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಕಚ್ಚಾ ತೈಲ ಪೂರೈಕೆ ಅವ್ಯವಸ್ಥೆಯಿಂದಾಗಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ವೊಂದರ ದರ ಸಾರ್ವಕಾಲಿಕ ಅತ್ಯಧಿಕ 3,113 ರೂ. ತಲುಪಿತ್ತು. ಎಟಿಎಫ್ ಇಂಧನವೂ ಲೀಟರ್‌ಗೆ 5 ರೂ. ಇಳಿಕೆಯಾಗಿದ್ದು, 110 ರೂ. ತಲುಪಿದೆ. ಬೆಂಗಳೂರಿನಲ್ಲಿ 5 ಕೆ.ಜಿ. ಗೃಹಬಳಕೆಯ ಎಲ್‌ಪಿಜಿ ದರ 318.50 ರೂ. ಮತ್ತು 14.2 ಕೆ.ಜಿ. ಗೃಹಬಳಕೆಯ ಎಲ್‌ಪಿಜಿ ದರ 944.50 ರೂ.ನಲ್ಲಿ ಸ್ಥಿರವಾಗಿದೆ.

ಪಾಕ್ ದಾಳಿ ಬಳಿಕ ಅಫ್ಘಾನ್‌ನಿಂದ ಪ್ರತೀಕಾರ
ಐಸಿಸ್ ಉಗ್ರ ನೆಲೆಗಳ ಮೇಲೆ ತಾಲಿಬಾನ್ ವಾಯುದಾಳಿ

• **ಕಾಬೂಲ್:** ಪ್ರಾದೇಶಿಕ ಉದ್ವಿಗ್ನತೆ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಅಫ್ಘಾನ್ ತಾಲಿಬಾನ್, ಪಾಕಿಸ್ತಾನದ ಬಲೂಚಿಸ್ತಾನ್ ಮತ್ತು ಖೈಬರ್ ಪಖ್ತುನ್ಖ್ವಾ ಪ್ರಾಂತ್ಯಗಳಲ್ಲಿರುವ ಐಸಿಸ್ ಉಗ್ರ ನೆಲೆಗಳ ಮೇಲೆ ಬೃಹತ್ ನಿಖರ ವಾಯುದಾಳಿಗಳನ್ನು ನಡೆಸಿದೆ ಎಂದು ಅಫ್ಘಾನ್ ರಕ್ಷಣಾ ಸಚಿವಾಲಯವನ್ನು ಉಲ್ಲೇಖಿಸಿ ಕೆಲವು ಮಾಧ್ಯಮಗಳು ವರದಿ ಮಾಡಿವೆ.


ಪಾಕಿಸ್ತಾನಿ ಪಡೆಗಳು ಅಫ್ಘಾನಿಸ್ತಾನದಲ್ಲಿ ವಾಯು ಮತ್ತು ಭೂ ಕಾರ್ಯಾಚರಣೆ ನಡೆಸಿದ ಕೇವಲ ಎರಡು ದಿನಗಳ ನಂತರ ಈ ಪ್ರತೀಕಾರ ದಾಳಿ ನಡೆದಿದೆ. ಅಫ್ಘಾನಿಸ್ತಾನದೊಳಗೆ ವಿಧ್ವಂಸಕ ಕೃತ್ಯಗಳು ಮತ್ತು ನಾಗರಿಕರ ಮೇಲಿನ ದಾಳಿಗಳನ್ನು ಯೋಜಿಸಲು ಪಾಕಿಸ್ತಾನ ಈ ನೆಲೆಗಳನ್ನು ಬಳಸಲಾಗುತ್ತಿತ್ತು ಎಂದು ಸಚಿವಾಲಯ ತಿಳಿಸಿದೆ. ಈ ನಿಖರ ದಾಳಿಗಳು ಯಾವುದೇ ನಾಗರಿಕ ಸಾವುನೋವುಗಳನ್ನು ಉಂಟುಮಾಡದೆ, ಐಸಿಸ್‌ಗೆ ಭಾರಿ ಸಾವುನೋವು ಮತ್ತು ನಷ್ಟ ಉಂಟುಮಾಡಿದೆ ಎಂದು ವರದಿಯಾಗಿದೆ. ಜೂನ್ 28ರಂದು ಗಡಿ ಕಾರ್ಯಾಚರಣೆ ಹೆಸರಲ್ಲಿ ಪಾಕಿಸ್ತಾನ ಅಫ್ಘಾನಿಸ್ತಾನ ಮೇಲೆ ವಾಯುದಾಳಿ ನಡೆಸಿತ್ತು. ಈ ದಾಳಿಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 38 ನಾಗರಿಕರು ಮೃತಪಟ್ಟಿದ್ದಾರೆ ಅಥವಾ ಗಾಯಗೊಂಡಿದ್ದಾರೆ ಎಂದು ಅಫ್ಘನ್ ತಿಳಿಸಿತ್ತು, ಚಿತ್ರಗಳನ್ನು ಬಿಡುಗಡೆ ಮಾಡಿತ್ತು.

ಪಾಕಿಸ್ತಾನದ ಮಾಹಿತಿ ಸಚಿವ ಅತಾವುಲ್ಲಾ ತರಾರ್, ಪಾಕಿಸ್ತಾನ ನಡೆಸಿದ ದಾಳಿ ಜಮಾತ್-ಉಲ್-ಅಹ್ರಾರ್ ಸಂಘಟನೆ ಹೊಣೆ ಹೊತ್ತ ಕರಾಚಿ ದಾಳಿ ಸೇರಿದಂತೆ ಇತ್ತೀಚಿನ ಹಿಂಸಾಚಾರಕ್ಕೆ ಪ್ರತಿಯಾಗಿತ್ತು ಎಂದಿದ್ದಾರೆ. ಆದರೆ, ಅಫ್ಘಾನ್ ತಾಲಿಬಾನ್ ಉಗ್ರರಿಗೆ ಆಶ್ರಯ ನೀಡಿರುವುದನ್ನು ಬಲವಾಗಿ ನಿರಾಕರಿಸಿದ್ದು, ಪಾಕಿಸ್ತಾನದ ದಂಗೆ ಸಂಪೂರ್ಣವಾಗಿ ಅದರ ಆಂತರಿಕ ಸಮಸ್ಯೆ ಎಂದು ಪ್ರತಿಪಾದಿಸಿದೆ.

ಮೆಟಾಗೆ ಕೇಂದ್ರ ನೋಟಿಸ್ | 3 ದಿನದಲ್ಲಿ ಉತ್ತರ ನೀಡಲು ತಾಕೀತು
ವಾಟ್ಸ್‌ಆ್ಯಪ್ ಬಳಕೆದಾರ ಹೆಸರಿಗೆ ತಡೆ

• **ಹೊಸದಿಲ್ಲಿ:** ಮೊಬೈಲ್ ಸಂಖ್ಯೆಯನ್ನು ಬಹಿರಂಗಪಡಿಸದೆಯೇ ಬಳಕೆದಾರ ಹೆಸರು ಮೂಲಕ ಸಂಪರ್ಕ ಸಾಧಿಸಲು ಅವಕಾಶ ನೀಡುವ ವಾಟ್ಸ್‌ಆ್ಯಪ್‌ನ ಹೊಸ ವೈಶಿಷ್ಟ್ಯದ ಕುರಿತು ಕೇಂದ್ರ ಸರ್ಕಾರ ಆತಂಕ ವ್ಯಕ್ತಪಡಿಸಿದ್ದು, ಈ ಪ್ರಕ್ರಿಯೆಯನ್ನೇ ಸ್ಥಗಿತಗೊಳಿಸಲು ಆದೇಶಿಸಿದೆ. ಈ ಸೌಲಭ್ಯವು ನಕಲಿ ಗುರುತು, ಸೈಬರ್ ವಂಚನೆ ಮತ್ತು ಸರ್ಕಾರಿ ಸಂಸ್ಥೆಗಳ ಹೆಸರಿನಲ್ಲಿ ವಂಚನೆಗೆ ದಾರಿ ಮಾಡಿಕೊಡುವ ಸಾಧ್ಯತೆಗಳಿದ್ದು, ಈ ಸಂಬಂಧ ವಾಟ್ಸ್‌ಆ್ಯಪ್‌ನ ಮಾತೃಸಂಸ್ಥೆ ಮೆಟಾಗೆ ನೋಟಿಸ್ ನೀಡಿ 3 ದಿನದಲ್ಲಿ ಉತ್ತರ ಸುವಂತೆ ಸೂಚಿಸಿದೆ ಎಂದು ಮೂಲಗಳು ಹೇಳಿವೆ.

ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಈ ವೈಶಿಷ್ಟ್ಯದ ಕಾನೂನುಬದ್ಧತೆ ಹಾಗೂ ಸುರಕ್ಷತಾ ಪರಿಣಾಮಗಳನ್ನು ಪರಿಶೀಲಿಸಲಿದೆ. ಅಪಾಯಗಳು ಗಂಭೀರವಾಗಿದ್ದರೆ ಭಾರತದಲ್ಲಿ ಇದರ ಜಾರಿಯನ್ನು ನಿಯಂತ್ರಿಸುವುದು ಅಥವಾ ತಡೆಯಲು ಲಭ್ಯವಿರುವ ಕಾನೂನು ಮಾರ್ಗಗಳನ್ನು ಬಳಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಹೊಸ ವ್ಯವಸ್ಥೆಯಲ್ಲಿ ವಂಚಕರು ಸರಕಾರಿ ತನಿಖಾ ಸಂಸ್ಥೆಗಳು, ಹಿರಿಯ ಅಧಿಕಾರಿಗಳು, ಬ್ಯಾಂಕ್‌ಗಳು ಅಥವಾ ಪ್ರಸಿದ್ಧ ವ್ಯಕ್ತಿಗಳ ಹೆಸರನ್ನು ಹೋಲುವ ಬಳಕೆದಾರ ಹೆಸರುಗಳನ್ನು ಸೃಷ್ಟಿಸಬಹುದು ಎಂಬುದು ಅಧಿಕಾರಿಗಳ ಆತಂಕವಾಗಿದೆ. ನಕಲಿ ಭಾವಚಿತ್ರ ಮತ್ತು ಹೋಲಿಕೆಯ ಹೆಸರನ್ನು ಬಳಸಿ ಹಣ ವರ್ಗಾವಣೆ ಮಾಡುವಂತೆ ಸಾರ್ವಜನಿಕರನ್ನು ವಂಚಿಸುವ ಅಪಾಯವಿದೆ. ಮೊಬೈಲ್ ಸಂಖ್ಯೆ ಕಾಣಿಸದಿದ್ದರೆ ಆರೋಪಿಯು ಭಾರತದಲ್ಲಿದ್ದಾನೆಯೇ ಅಥವಾ ವಿದೇಶದಲ್ಲಿದ್ದಾನೆಯೇ ಎಂಬುದನ್ನು ಪತ್ತೆಹಚ್ಚುವುದು ತನಿಖಾ ಸಂಸ್ಥೆಗಳಿಗೆ ಕಷ್ಟವಾಗಬಹುದು. ಬಳಕೆದಾರ ಹೆಸರು ಆಧಾರಿತ ಸಂಪರ್ಕ ವ್ಯವಸ್ಥೆ ಹೊಂದಿರುವ ಟೆಲಿಗ್ರಾಂ ಮತ್ತು ಸಿಗ್ನಲ್‌ಗಳಲ್ಲಿ ಎದುರಾಗಿರುವ ಸಮಸ್ಯೆಗಳು ವಾಟ್ಸ್‌ಆ್ಯಪ್‌ನಲ್ಲಿಯೂ ಕಾಣಿಸಿಕೊಳ್ಳಬಹುದು ಎಂದು ದೂರಸಂಪರ್ಕ ಇಲಾಖೆ ಹಾಗೂ ದಿಲ್ಲಿ ಪೊಲೀಸರು ಆತಂಕ ವ್ಯಕ್ತಪಡಿಸಿದ್ದಾರೆ.



ವರ್ಷದ ಅಂತ್ಯಕ್ಕೆ ಜಾರಿ

ವಾಟ್ಸ್‌ಆ್ಯಪ್ ಜೂ.29ರಿಂದ ಬಳಕೆದಾರ ಹೆಸರುಗಳನ್ನು ಮುಂಗಡವಾಗಿ ಕಾಯ್ದಿರಿಸಲು ಅವಕಾಶ ನೀಡಿದೆ. ಈ ವೈಶಿಷ್ಟ್ಯವನ್ನು 2026ರ ಅಂತ್ಯದೊಳಗೆ ಹಂತಹಂತವಾಗಿ ಜಾಗತಿಕವಾಗಿ ಪರಿಚಯಿಸಲಾಗುತ್ತದೆ. ಬಳಕೆದಾರರು ತಮ್ಮ ದೂರವಾಣಿ ಸಂಖ್ಯೆಯನ್ನು ಹಂಚಿಕೊಳ್ಳದೆಯೇ ಹೊಸ ವ್ಯಕ್ತಿಗಳು ಮತ್ತು ಸಂಸ್ಥೆಗಳೊಂದಿಗೆ ಸಂಭಾಷಣೆ ಆರಂಭಿಸಬಹುದಾಗಿದೆ. ಇದು ಐಚ್ಛಿಕ ಸೌಲಭ್ಯವಾಗಿರಲಿದೆ.

ಈಶಾ ಫೌಂಡೇಶನ್ ಸಂಸ್ಥಾಪಕ ಶ್ರೀ ಸದ್ಗುರು ಜಗ್ಗಿ ವಾಸುದೇವ್ ಸ್ವಾಮೀಜಿ

ವ್ಯಕ್ತಿಗತ ಅರಿವಿನಿಂದ ಜಗತ್ತಿನಲ್ಲಿ ಶಾಂತಿ

• **ಚಿತ್ರದುರ್ಗ:** ಜಗತ್ತಿನಲ್ಲಿ ಕೇವಲ ಸಮಾಜ, ರಾಷ್ಟ್ರ ಅಥವಾ ವಿಶ್ವ ಎಂಬುದು ಸ್ವತಂತ್ರವಾಗಿ ಅಸ್ತಿತ್ವದಲ್ಲಿಲ್ಲ, ನಿಮ್ಮ ಜೊತೆ ನಾನೊಬ್ಬ ಸೇರಿದರೆ ಮಾತ್ರ ಇಲ್ಲಿ ಸಮಾಜ ನಿರ್ಮಾಣವಾಗುತ್ತದೆ. ವ್ಯಕ್ತಿಗತವಾಗಿ ನಮ್ಮಲ್ಲಿ ಪ್ರೀತಿ, ಕರುಣೆ ಹಾಗೂ ಅರಿವು ಮೂಡಿದಾಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ ಎಂದು ಈಶಾ ಫೌಂಡೇಶನ್ ಸಂಸ್ಥಾಪಕ ಶ್ರೀಸದ್ಗುರು ಜಗ್ಗಿ ವಾಸುದೇವ್ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ನಗರದ ಹೊರವಲಯದ ಶ್ರೀಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇವಲ ವೇದಿಕೆಗಳಲ್ಲಿ, ಬೀದಿಗಳಲ್ಲಿ ವಿಶ್ವ ಶಾಂತಿ ಎಂದು ಘೋಷಣೆ ಕೂಗುವುದರಿಂದ ಜಗತ್ತು ಬದಲಾಗುವುದಿಲ್ಲ, ಸನ್ನಿವೇಶಗಳು ಹೇಗೆ ಇರಲಿ, ನಾವು ಪ್ರೀತಿಯಿಂದ, ನೆಮ್ಮದಿಯಿಂದ ಇರುವುದನ್ನು ಕಲಿಯಬೇಕು. ಈ ಪರಿವರ್ತನೆ ಇಂದಿನ ಯುವ ಪೀಳಿಗೆಯಲ್ಲಿ ಆರಂಭವಾಗಬೇಕಿದೆ. ಯುವಕರೆಂದರೆ ಕೇವಲ ವಯಸ್ಸಿನ ಮಿತಿಯಲ್ಲ, ನಮ್ಮಲ್ಲಿ ಜೀವಂತಿಕೆ ಇರುವವರೆಗೂ ನಾವೆಲ್ಲರೂ ಯುವಕರೇ ಎಂದರು.

ಮಾನವನು ಕೇವಲ ಪ್ರಾಣಿಜನ್ಯ ಪ್ರವೃತ್ತಿಗಳಿಂದ ಬದುಕುವ ಕೇವಲ ಜೀವಿ ಅಲ್ಲ, ಆತ ತಾನು ಹೇಗೆ ಬಾಳಬೇಕೆಂಬುದನ್ನು ಅರಿತಿರುವ ಅಸ್ತಿತ್ವದ ಸ್ವರೂಪ ಪ್ರಾಣಿಗಳು ಕೇವಲ ಪ್ರಚೋದನೆಗಳಿಗೆ ಪ್ರತಿಕ್ರಿಯಿಸುತ್ತಾ ಪ್ರಕೃತಿಯ ಸಹಜ ಪ್ರವೃತ್ತಿಯಂತೆ ಬದುಕುತ್ತವೆ. ಆದರೆ ಮಾನವನಿಗೆ ಜೀವನದಲ್ಲಿ ಎದುರಾಗುವ ಯಾವುದೇ ಸನ್ನಿವೇಶದಲ್ಲೂ ತಾನು ಹೇಗೆ ಇರಬೇಕು ಎಂದು ನಿರ್ಧರಿಸುವ ಅದ್ಭುತ ಸಾಮರ್ಥ್ಯವಿದೆ. ಜೀವ ವಿಕಾಸದ ಹಾದಿಯಲ್ಲಿ ಅನೇಕ ಹಂತಗಳನ್ನು ದಾಟಿ ನಾವಿಂದು ಅತ್ಯುನ್ನತ ಮಟ್ಟದ ಪ್ರಜ್ಞೆಯನ್ನು ಪಡೆದುಕೊಂಡಿದ್ದೇವೆ ಎಂದರು.

ಒಮ್ಮೆ ಮನುಷ್ಯನಾಗಿ ಹುಟ್ಟಿದ ಮೇಲೆ ಪ್ರತಿಯೊಬ್ಬರಿಗೂ ಬದುಕಿನಲ್ಲಿ ಕೆಲವು ಅನಿವಾರ್ಯತೆಗಳು ಎದುರಾಗುತ್ತವೆ. ಪ್ರಾಣಿಗಳಂತೆ ದಿನನಿತ್ಯದ ಕ್ರಿಯೆಗಳನ್ನು ನಡೆಸಿದರೂ ಬದುಕಿನಲ್ಲಿ ಏನೋ ಒಂದು ಅಪೂರ್ಣತೆಯ ಭಾವ ಕಾಡುತ್ತಲೇ ಇರುತ್ತದೆ ಎಂದು ಹೇಳಿದರು.

ದೇಹ ಮತ್ತು ಮನಸ್ಸು ಎಂಬ ಈ ಎರಡೂ ಅದ್ಭುತ ಪರಿಕರಗಳನ್ನು ಪ್ರಕೃತಿ ನಮಗೆ ನೀಡಿದೆ. ಆದರೆ ಇವುಗಳನ್ನು ಹೇಗೆ ನಿರ್ವಹಿಸಬೇಕೆಂಬ ಕೈಪಿಡಿ ಓದಿಕೊಳ್ಳದೆ ನಾವು ಬದುಕಿನ ಸಂಕೀರ್ಣ ಯಂತ್ರವನ್ನು ಚಲಾಯಿಸಲು ಹೊರಟಿದ್ದೇವೆ. ಪರಿಣಾಮವಾಗಿ ದೈನಂದಿನ ಜೀವನದಲ್ಲಿ ಅನೇಕ ತಪ್ಪುಗಳು, ಅಪಘಾತಗಳು ಮತ್ತು ನೋವುಗಳು ಸಂಭವಿಸುತ್ತಿವೆ. ಮನಸ್ಸು ಮತ್ತು ದೇಹ ನಮ್ಮ ಅಧೀನದಲ್ಲಿ ಇರಬೇಕು. ಈ ಇಬ್ಬರು ಸಹಾಯಕರು ನಮ್ಮ ಜೊತೆ ಸಹಕರಿಸದಿದ್ದರೆ ಜೀವನ ಸಾಗಿಸುವುದು ಕಷ್ಟಕರವಾಗುತ್ತದೆ ಎಂದರು.

ಆರಂಭದಲ್ಲಿ ಶಿವಶರಣ ಮಾದಾರ ಚೆನ್ನಯ್ಯನವರನ್ನು ಸ್ಮರಿಸುತ್ತಾ ಮಹಾಕಾಲ ಯೋಗೀಶ್ವರ ಎಂಬ ಶ್ಲೋಕ ಹಾಡುವ ಮೂಲಕ ಸದ್ಗುರುಗಳು ಸಭಿಕರನ್ನು ಮಂತ್ರಮುಗ್ಧಗೊಳಿಸಿದರು. ನಂತರ ತಮ್ಮದೇ ಆದ ವಿಶಿಷ್ಟ ಹಾಸ್ಯ ಹಾಗೂ ಆಳವಾದ ಆಧ್ಯಾತ್ಮಿಕ ಚಿಂತನೆಗಳ ಮೂಲಕ ನೆರೆದಿದ್ದವರ ಗಮನ ಸೆಳೆದರು. ಚಿತ್ರದುರ್ಗ ಜಿಲ್ಲೆಯು ರಾಜ್ಯದ ಕೇಂದ್ರ ಭಾಗದಲ್ಲಿದ್ದು, ಚಿಕ್ಕಬಳ್ಳಾಪುರ ಮಾದರಿಯಲ್ಲೇ ಚಿತ್ರದುರ್ಗದಲ್ಲೂ ಭವ್ಯ ಆಧ್ಯಾತ್ಮಿಕ ಕೇಂದ್ರವೊಂದು ನಿರ್ಮಾಣವಾಗಬೇಕು ಎಂದು ಸ್ಥಳೀಯ ಭಕ್ತರು ಹಾಗೂ ಪೀಠದ ಅನುಯಾಯಿಗಳು ಸದ್ಗುರುಗಳಲ್ಲಿ ಮನವಿ ಮಾಡಿದರು.

ವೇದಿಕೆಯಲ್ಲಿ ಮುರುಘಾಮಠದ ಡಾ. ಶ್ರೀಬಸವಕುಮಾರ ಸ್ವಾಮೀಜಿ, ಅಥಣಿ ಶಿವಯೋಗಾಶ್ರಮದ ಶಿವಬಸವ ಸ್ವಾಮೀಜಿ, ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಕಬೀರಾನಂದಾಶ್ರಮದ ಶಿವಲಿಂಗಾನಂದ ಸ್ವಾಮೀಜಿ ಉಪಸ್ಥಿತರಿದ್ದರು.



> **ಭೂಮಿಯ ಮೇಲಿರುವ ಎಲ್ಲಾ ಯಂತ್ರೋ ಪಕರಣ ಹಾಗೂ ತಂತ್ರ ಜ್ಞಾನಗಳಿಗಿಂತ ಮನುಷ್ಯನ ದೇಹ ಮತ್ತು ಮನಸ್ಸಿನ ತಂತ್ರಜ್ಞಾನವೇ ಅತ್ಯಂತ ಶ್ರೇಷ್ಠ ಹಾಗೂ ಅತ್ಯುನ್ನತವಾದುದಾಗಿದೆ. ಆದರೆ, ಇದರ ಸರಿಯಾದ ಬಳಕೆಯ ವಿಧಾನ ತಿಳಿಯದೆ ನಾವಿಂದು ಬದುಕಿಸುದ್ದಕ್ಕೂ ಹೆಣಗಾಡುತ್ತಿದ್ದೇವೆ.**
> ■ ಶ್ರೀಸದ್ಗುರು ಜಗ್ಗಿ ವಾಸುದೇವ್ ಸ್ವಾಮೀಜಿ

ಜಿಲ್ಲಾ ಚುನಾವಣಾಧಿಕಾರಿ ಟಿ. ವೆಂಕಟೇಶ್ ಮಾಹಿತಿ

32,797 ಗಣತಿ ನಮೂನೆ ವಿತರಣೆ

• **ಚಿತ್ರದುರ್ಗ:** ಜಿಲ್ಲೆಯಲ್ಲಿ ಮಂಗಳವಾರದಿಂದ ಆರಂಭವಾಗಿರುವ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)-2026 ಮನೆ-ಮನೆ ಭೇಟಿ ಅಭಿಯಾನದ ಮೊದಲ ದಿನವೇ ಜಿಲ್ಲೆಯಾದ್ಯಂತ 32,797 ಗಣತಿ ನಮೂನೆಗಳನ್ನು ವಿತರಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಟಿ. ವೆಂಕಟೇಶ್ ತಿಳಿಸಿದ್ದಾರೆ.



ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ -2026ರ ಅಂಗವಾಗಿ ಮನೆ ಮನೆ ಭೇಟಿ ಕಾರ್ಯವು 2026ರ ಜೂನ್ 30 ರಿಂದ ಆರಂಭವಾಗಿದೆ. ಜುಲೈ 29ರವರೆಗೆ ನಡೆಯಲಿದೆ. ಜಿಲ್ಲೆಯ ಎಲ್ಲಾ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆಗೆ ತೆರಳಿ ಗಣತಿ ನಮೂನೆಗಳನ್ನು ವಿತರಿಸುವ ಕಾರ್ಯ ಪ್ರಾರಂಭಿಸಿದ್ದಾರೆ.

2026ರ ಜೂನ್ 16ರಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 14,40,534 ಮತದಾರರಿದ್ದಾರೆ. ಒಟ್ಟು 1,661 ಮತಗಟ್ಟೆ ಭಾಗಗಳಿವೆ. ಅಭಿಯಾನದ ಮೊದಲ ದಿನವಾದ ಜೂನ್ 30ರಂದು ಜಿಲ್ಲೆಯಾದ್ಯಂತ ಒಟ್ಟು 32,797 ಗಣತಿ ನಮೂನೆಗಳನ್ನು ವಿತರಿಸಲಾಗಿದೆ. ಈ ಪೈಕಿ 2,525 ನಮೂನೆಗಳನ್ನು ಈಗಾಗಲೇ ಗಣಕೀಕರಣ ಮಾಡಲಾಗಿದೆ ಎಂದರು.

ವಿಧಾನಸಭಾ ಕ್ಷೇತ್ರವಾರು ಗಣತಿ ನಮೂನೆಗಳ ವಿತರಣೆ: ಮೊಳಕಾಲ್ಮೂರು ಕ್ಷೇತ್ರದಲ್ಲಿ 285 ಮತಗಟ್ಟೆ ಭಾಗಗಳಿದೆ. 2,51,685 ಮತದಾರರಿದ್ದಾರೆ. ಇಲ್ಲಿ ಮೊದಲ ದಿನ 17,558 ನಮೂನೆಗಳನ್ನು ವಿತರಿಸಿ, 716 ನಮೂನೆಗಳನ್ನು ಗಣಕೀಕರಣ ಗೊಳಿಸಲಾಗಿದೆ. ಕ್ಷೇತ್ರದಲ್ಲಿ 260 ಭಾಗಗಳು ಹಾಗೂ 2,25,619 ಮತದಾ ರರಿದ್ದು, 1,645 ನಮೂನೆಗಳನ್ನು ವಿತರಿಸಲಾಗಿದೆ. 182 ನಮೂನೆಗಳು ಗಣಕೀಕರಣ ಗೊಂಡಿವೆ. ಚಿತ್ರದುರ್ಗ ಕ್ಷೇತ್ರದಲ್ಲಿ 288 ಭಾಗಗಳು ಮತ್ತು 2,69,332 ಮತದಾರರಿದ್ದು, 2,223 ನಮೂನೆಗಳನ್ನು ವಿತರಿಸಿ, 350 ನಮೂನೆಗಳನ್ನು ಗಣಕೀಕರಣ ಮಾಡಲಾಗಿದೆ.

ಹಿರಿಯೂರು ಕ್ಷೇತ್ರದಲ್ಲಿ 287 ಭಾಗಗಳು ಹಾಗೂ 2,51,482 ಮತದಾರರಿದ್ದು, 3,579 ನಮೂನೆ ಗಳನ್ನು ವಿತರಿಸಲಾಗಿದೆ. 671 ನಮೂನೆಗಳು ಗಣಕೀಕರಣ ಗೊಂಡಿವೆ. ಹೊಸದುರ್ಗ ಕ್ಷೇತ್ರದಲ್ಲಿ 242 ಭಾಗಗಳು ಮತ್ತು 2,03,481 ಮತದಾರರಿದ್ದು, 3,882 ನಮೂನೆಗಳನ್ನು ವಿತರಿಸಿ, 379 ನಮೂನೆಗಳನ್ನು ಗಣಕೀಕರಣ ಮಾಡಲಾಗಿದೆ. ಕೊನೆಯದಾಗಿ ಹೊಳಲ್ಕೆರೆ ಕ್ಷೇತ್ರದಲ್ಲಿ 299 ಭಾಗಗಳು ಹಾಗೂ 2,38,935 ಮತದಾರರಿದ್ದು, 3,910 ನಮೂನೆಗಳನ್ನು ವಿತರಿಸಲಾಗಿದೆ. 227 ನಮೂನೆಗಳನ್ನು ಗಣಕೀಕರಣ ಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಹುದ್ದೆಗೆ ಅರ್ಜಿ

• **ದಾವಣಗೆರೆ:** ಪ್ರಸಕ್ತ ಸಾಲಿನ ಬಾಕಿ ಉಳಿದಿರುವ ಅವಧಿಗೆ ಆತ್ಮ ಯೋಜನೆಯಡಿ ನೇರ ಗುತ್ತಿಗೆ ಆಧಾರದ ಮೇಲೆ ಸಹಾಯಕ ತಾಂತ್ರಿಕ ವ್ಯವಸ್ಥಾಪಕರನ್ನು ನೇಮಕಾತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಹರಿಹರ ತಾಲ್ಲೂಕು ಹೊರತುಪಡಿಸಿ ದಾವಣಗೆರೆ, ಜಗಳೂರು, ಹೊನ್ನಾಳಿ, ನ್ಯಾಮತಿ ಮತ್ತು ಚನ್ನಗಿರಿ ತಾಲೂಕು ಹಾಗೂ ಕಾಡಜ್ಜಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿರುವ ತಲಾ ಒಂದರಂತೆ ಒಟ್ಟು 6 ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಕನಿಷ್ಠ ಕೃಷಿ ಸಂಬಂಧಿತ ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಅರ್ಜಿ ಯನ್ನು ಜಂಟಿ ಕೃಷಿ ನಿರ್ದೇಶಕರು, ದಾವಣಗೆರೆ ಇವರಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ಜುಲೈ 9ರೊಳಗಾಗಿ ಸಲ್ಲಿಸಬೇಕು.

ಎಸ್‌ಐಆರ್‌ನಲ್ಲಿ ಗ್ಯಾರಂಟಿ ಸಮಿತಿ ಭಾಗವಹಿಸಿ: ಶಿವಣ್ಣ

• **ಚಿತ್ರದುರ್ಗ:** ಜಿಲ್ಲೆಯಾದ್ಯಂತ ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದ ಜೊತೆಗೆ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್ ಐಆರ್) ಪ್ರಕ್ರಿಯೆಯಲ್ಲೂ ಗ್ಯಾರಂಟಿ ಸಮಿತಿಯ ಎಲ್ಲಾ ಪದಾಧಿಕಾರಿಗಳು ಜವಾಬ್ದಾರಿಯುತವಾಗಿ ಮತ್ತು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಆರ್. ಶಿವಣ್ಣ ಗಂಜಿಗಟ್ಟೆ ಮನವಿ ಮಾಡಿದ್ದಾರೆ.



ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಸಮಿತಿಯ ಎಲ್ಲಾ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ತಮ್ಮ ತಮ್ಮ ವ್ಯಾಪ್ತಿಯಲ್ಲಿ ನಿಯೋಜಿತವಾಗಿರುವ ಗ್ರಾಮ ಪಂಚಾಯಿತಿ ಹಾಗೂ ವಾರ್ಡ್‌ಗಳ ಬಿ.ಎಲ್.ಒ-2 ಅವರೊಂದಿಗೆ ಸಮನ್ವಯ ಸಾಧಿಸಿ, ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ (ಎಸ್ ಐಆರ್)-2026 ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಹೇಳಿದ್ದಾರೆ.

ಅರ್ಹರಾಗಿರುವ ಪ್ರತಿಯೊಬ್ಬ ಹೊಸ ಮತದಾರರನ್ನು ಮತಪಟ್ಟಿಯಲ್ಲಿ ಸೇರ್ಪಡೆ ಮಾಡಲು ಮೊದಲ ಆದ್ಯತೆ ನೀಡಬೇಕು ಹಾಗೂ ಈ ನಿಟ್ಟಿನಲ್ಲಿ ತಮ್ಮ ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ತಕ್ಷಣವೇ ಕೆಲಸ ನಿರ್ವಹಿಸಲು ಆರಂಭಿಸಬೇಕು ಎಂದು ತಿಳಿಸಿದ್ದಾರೆ.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಜಿಲ್ಲೆಯ ಶಾಸಕರ ಕಟ್ಟುನಿಟ್ಟಿನ ಸೂಚನೆಯಂತೆ, ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಜವಾಬ್ದಾರಿಯ ಜೊತೆಗೆ ಪ್ರತಿಯೊಬ್ಬ ಬಿ.ಎಲ್.ಒಗಳ ಜೊತೆಯಲ್ಲಿ ಮತ್ತು ಸ್ಥಳೀಯ ಮುಖಂಡರುಗಳೊಂದಿಗೆ ನಿರಂತರ ಸಂಪರ್ಕ ಹಾಗೂ ಸಮನ್ವಯ ಸಾಧಿಸಿಕೊಂಡು ನಿಖರವಾಗಿ ಕೆಲಸ ನಿರ್ವಹಿಸಬೇಕು ಎಂದು ತಿಳಿಸಿದ್ದಾರೆ.

ಗ್ಯಾರಂಟಿ ಯೋಜನೆಯ ಫಲಾನುಭವಿಗಳಿಗೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾವಣೆ ಮಾಡದಿದ್ದರೆ ಗ್ಯಾರಂಟಿ ಯೋಜನೆಗಳು ಹಾಗೂ ಸರ್ಕಾರದ ಇತರೆ ಯಾವುದೇ ಸೌಲಭ್ಯಗಳು ಪಡೆಯಲಾಗುವುದಿಲ್ಲ ಎಂಬ ಬಗ್ಗೆ ಮತದಾರರಿಗೆ ತಿಳಿಯಪಡಿಸಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಆರ್. ಶಿವಣ್ಣ ಗಂಜಿಗಟ್ಟೆ ಕೋರಿದ್ದಾರೆ.

ಸಮಾಜವಾದಿ ಪಾರ್ಟಿಯಿಂದ ಅಖಿಲೇಶ್ ಯಾದವ್ ಹುಟ್ಟುಹಬ್ಬ ಆಚರಣೆ

• **ಚಿತ್ರದುರ್ಗ:** ಉತ್ತರ ಪ್ರದೇಶದ ಮಾಜಿ ಮುಖ್ಯ ಮಂತ್ರಿ, ಸಂಸದ ಹಾಗೂ ಸಮಾಜವಾದಿ ಪಾರ್ಟಿಯ ರಾಷ್ಟ್ರೀಯ ಅಧ್ಯಕ್ಷರಾದ ಅಖಿಲೇಶ್ ಯಾದವ್ ಅವರ ಹುಟ್ಟುಹಬ್ಬವನ್ನು ಒನಕೆ ಓಬವ್ವ ವೃತ್ತದಲ್ಲಿ ಬುಧವಾರ ಪಟಾಕಿ ಸಿಡಿಸಿ ಕೇಕ್ ಕತ್ತರಿಸುವ ಮೂಲಕ ಸಮಾಜವಾದಿ ಪಾರ್ಟಿ ವತಿಯಿಂದ ಆಚರಿಸಲಾಯಿತು.

ಸಮಾಜವಾದಿ ಪಾರ್ಟಿ ರಾಜ್ಯಾಧ್ಯಕ್ಷ ಎನ್.ಮಂಜಪ್ಪ ಮಾತನಾಡಿ, ಅಖಿಲೇಶ್ ಯಾದವ್‌ರವರ ಹುಟ್ಟುಹಬ್ಬವನ್ನು ದೇಶಾದ್ಯಂತ ಆಚರಿಸಲಾಗುತ್ತಿದೆ. 2029 ರಲ್ಲಿ ನಡೆಯುವ ಚುನಾವಣೆಯಲ್ಲಿ ಸಮಾಜ ವಾದಿ ಪಾರ್ಟಿ 300 ಕ್ಕೂ ಹೆಚ್ಚು ಸೀಟುಗಳನ್ನು ಪಡೆಯಲಿದ್ದು, ಅಖಿಲೇಶ್‌ಯಾದವ್‌ರವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಲಿದ್ದಾರೆ. ಭಗವಂತ ಅವರಿಗೆ ಅಂತಹ ಶಕ್ತಿ ನೀಡಲಿ ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ತಾಜ್‌ಪೀರ್ ಮಾತನಾಡಿ, ಇಂಡಿಯಾ ಒಕ್ಕೂಟದ ಭವಿಷ್ಯದಲ್ಲಿ ಅಖಿಲೇಶ್ ಯಾದವ್ ಮುಂದೆ ದೊಡ್ಡ ಶಕ್ತಿಯಾಗಿ ಬೆಳೆಯಲಿ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಮುಲಾಯಂಸಿಂಗ್ ಯಾದವ್‌ರವರ ಪುತ್ರ ಅಖಿಲೇಶ್ ಯಾದವ್ ರಾಹುಲ್ ಗಾಂಧಿ, ತೇಜಸ್ವಿ ಯಾದವ್, ಉದ್ಧವ್ ಠಾಕ್ರೆ ಹಾಗೂ ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರ ಜೊತೆ ಉತ್ತಮ ಒಡನಾಟ ಇಟ್ಟುಕೊಂಡಿದ್ದು, ರಾಜಕೀಯದಲ್ಲಿ ಉತ್ತುಂಗಕ್ಕೇರಲಿ ಎಂದು ಶುಭ ಕೋರಿದರು.



ನ್ಯಾಯವಾದಿ ಸಿ.ಶಿವು ಯಾದವ್ , ಲೇಖಕ ಹೆಚ್. ಆನಂದಕುಮಾರ್, ಸಮಾಜವಾದಿ ಪಾರ್ಟಿಯ ಜಿಲ್ಲಾಧ್ಯಕ್ಷ ಲಕ್ಷ್ಮಿಕಾಂತ್ ಎಸ್. ಮಾತನಾಡಿದರು. ಸಮಾಜವಾದಿ ಪಾರ್ಟಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಡಿ.ಗುರುಮೂರ್ತಿ, ಎಸ್ಸಿ ಘಟಕದ ಅಧ್ಯಕ್ಷ ಟಿ.ರವಿ, ಎಸ್ಟಿ ಘಟಕದ ಅಧ್ಯಕ್ಷ ಡಾ.ಶಿವಣ್ಣ, ಅಲ್ಪಸಂಖ್ಯಾತ ಘಟಕದ ಮೆಹಬೂಬ್‌ಭಾಷ, ಶಿವಣ್ಣ ಹೊಳಲ್ಕೆರೆ, ಎ.ಪಿ.ಎಂ.ಸಿ. ಮಾಜಿ ಅಧ್ಯಕ್ಷ ಟಿ.ತಿಪ್ಪೇಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಹೇಮಣ್ಣ, ಓಬಣ್ಣ, ಪಿಡಿಎ. ಘಟಕದ ಅಧ್ಯಕ್ಷ ಗೋವಿಂದರಾಜು ಸೇರಿದಂತೆ ಅಪಾರ ಅಭಿಮಾನಿಗಳು ಜನ್ಮದಿನಾಚರಣೆಯಲ್ಲಿ ಭಾಗವಹಿಸಿದ್ದರು.



» ಸತ್ಯಮೂರ್ತಿ

ಎಲ್ಲರ ಲೈಫಲ್ಲೂ ನಡೆಯುವ ಕಥೆಯಿದು, ರಾಮು ಎಂಬ ಮಿಡಲ್‌ಕ್ಲಾಸ್ ಯುವಕನಾಗಿ ಕಾಣಿಸಿಕೊಂಡಿದ್ದೇನೆ, ಜೀವನದಲ್ಲಿ ಎಲ್ಲರೂ ಫೇಸ್ ಮಾಡಿರಬಹುದಾದಂಥ ಸಂದರ್ಭಗಳನ್ನು ನಾನೂ ಸಹ ಎದುರಿಸಬೇಕಾಗುತ್ತದೆ ಎಂದು ಲವ್ ಸೀಸನ್ಸ್ ಚಿತ್ರದ ನಾಯಕನಟ ಮುಕುಂದ್ ರಾಮಸ್ವಾಮಿ ಹೊಸ ದಿಗಂತದೊಂದಿಗೆ ಮಾತನಾಡುತ್ತ ಹೇಳಿದರು.

ಜುಲೈ 3ರಂದು ತೆರೆಕಾಣುತ್ತಿರುವ ಈ ಚಿತ್ರದ ಕುರಿತಂತೆ ಸಾಕಷ್ಟು ಮಾಹಿತಿಗಳನ್ನವರು ಹಂಚಿಕೊಂಡಿದ್ದಾರೆ, ತಾನೊಬ್ಬ ನಿರ್ದೇಶಕನಾಗಬೇಕು ಎನ್ನುವುದು ರಾಮನ ಕನಸು, ಆತ ಅಂದುಕೊಂಡಿದ್ದು ಆಗದಿದ್ದಾಗ ಏನೆಲ್ಲ ಸ್ಟ್ರಗಲ್ ಮಾಡುತ್ತಾನೆ, ಅಲ್ಲದೆ ಆತ ಕನಸನ್ನು ಈಡೇರಿಸಿಕೊಳ್ಳುವ ಜತೆಗೆ ತನ್ನ ಫ್ಯಾಮಿಲಿಗೂ ಆಸರೆಯಾಗಿರಬೇಕಾಗಿರುತ್ತದೆ, ಹಾಗಾಗಿ ಫುಡ್ ಡಿಲವರಿ ಕೂಡ ಮಾಡುತ್ತಾನೆ, ಅಂಥವನ ಜೀವನದಲ್ಲಿ ಆಕಸ್ಮಿಕವಾಗಿ ಮೂವರು ಯುವತಿಯರು ಎಂಟ್ರಿ ಕೊಡುತ್ತಾರೆ, ಅವರೆಲ್ಲ ಹೇಗೆ ಬಂದರು, ಏನು ಮಾಡುತ್ತಾರೆ ಎನ್ನುವುದೇ ಚಿತ್ರದ ಕುತೂಹಲ. ಚಿತ್ರದಲ್ಲಿ ಹೈಮೋರಲ್ ವ್ಯಾಲ್ಯೂಸ್ ಇದೆ, ಇದು ಬೆಂಗಳೂರಿನಲ್ಲೇ ನಡೆಯುವ ಕಥೆಯಾದ್ದರಿಂದ ರಿಯಲಿಸ್ಟಿಕ್ ಆಗಿರಬೇಕೆಂದು ಮೆಜೆಸ್ಟಿಕ್, ಹೆಬ್ಬಾಳ, ರಾಮನಗರ ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ, ಇತ್ತೀಚೆಗೆ ಒಂದಷ್ಟು ಫ್ಯಾಮಿಲಿ, ಕೆಲ ಆಟೋ ಚಾಲಕರು, ಕಾಲೇಜು ವಿದ್ಯಾರ್ಥಿಗಳು ಸೇರಿ 50ಕ್ಕೂ ಹೆಚ್ಚು ಸಾಮಾನ್ಯ ಜನರಿಗೆ ನಮ್ಮ ಚಿತ್ರವನ್ನು ತೋರಿಸಿದೆವು. ಕೆಲವರು ಚಿತ್ರ ತುಂಬಾ ಚೆನ್ನಾಗಿದೆ, ಹೆಚ್ಚು ಪ್ರಚಾರ ಮಾಡಿ ಎಂದರೆ, ಕೆಲವರು ಹಾರ್ಟ್‌ಟಚ್ ಆಯ್ತು, ನನ್ನ ಲೈಫಲ್ಲೂ ಇಂಥ ಸಿಚುಯೇಶನ್ ಎದುರಿಸಿದ್ದೇನೆ ಎಂದೂ ಹೇಳಿದರು, ಮತ್ತೆ ಕೆಲವರು ಏನೋ ಸಾಮಾನ್ಯ ಚಿತ್ರವಿರಬೇಕು ಎಂದುಕೊಂಡು ಬಂದೆವು. ಆದರೆ ಚಿತ್ರ ನೋಡುವಾಗ ಕಥೆ ನಮ್ಮ ಪಕ್ಕದಲ್ಲೇ ನಡೆಯುತ್ತಿರುವಂತೆ ಅನಿಸಿತು. ಎಲ್ಲೂ ಕೃತಕತೆ ಕಾಣಲಿಲ್ಲ, ನಾವೂ ಚಿತ್ರದ ಒಂದು ಪಾತ್ರದಂತೆ ಭಾಸವಾಯಿತು ಎಂದು ಪ್ರತಿಕ್ರಿಯೆ ನೀಡಿದ್ದಾರೆ, ಅಲ್ಲೇ ನಮ್ಮ ಚಿತ್ರ ಅರ್ಧ ಗೆಲುವು ಸಾಧಿಸಿದ ತೃಪ್ತಿ ನಮಗಾಯಿತು ಎಂದು ಹೇಳಿದರು,





ಎಸ್.ಆರ್.ಸ್ಟುಡಿಯೋಸ್ ಬ್ಯಾನರ್ ಅಡಿ ಎಸ್.ಆರ್. ಮಂಜುನಾಥ (ನೀಲೇರಿ) ಅವರು ನಿರ್ಮಿಸಿರುವ, ಕೃತಿಕ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚಿತ್ರವಿದು, ಮೂರು ಸೀಸನ್‌ಗಳಲ್ಲಿ ನಡೆಯೋ ಮೂರು ಪ್ರೇಮಕಥೆಗಳನ್ನು ಹೇಳುವ ಲವ್ ಸೀಸನ್ಸ್ ಚಿತ್ರವು ಟ್ರೈಲರ್, ಸುಂದರ ಹಾಡುಗಳಿಂದ ಪ್ರೇಕ್ಷಕರಲ್ಲಿ ದೊಡ್ಡಮಟ್ಟದ ನಿರೀಕ್ಷೆ ಹುಟ್ಟುಹಾಕಿದೆ, ಈ ಚಿತ್ರದ ಮೂಲಕ ಯುವನಟ ಮುಕುಂದ ರಾಮಸ್ವಾಮಿ ನಾಯಕನಾಗಿ ಚಿತ್ರರಂಗಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಚಿತ್ರದಲ್ಲಿ ಹಿರಿಯನಟ ಮಂಡ್ಯ ರಮೇಶ್ ನಾಯಕನ ಗುರುಗಳಾಗಿ ಕಾಣಿಸಿಕೊಂಡಿದ್ದಾರೆ. ಜುಲೈ 3ರಂದು ತೆರೆಕಾಣಲಿರುವ ಈ ಚಿತ್ರವನ್ನು ಎಂ.ಪಿ.ಫಿಲಂಸ್ ಅಡಿ ಕೆ.ಮುನೀಂದ್ರ ರಿಲೀಸ್ ಮಾಡುತ್ತಿದ್ದಾರೆ.

ಚಿತ್ರದ 5 ಹಾಡುಗಳಿಗೆ ವೀರ್ ಸಮರ್ಥ್ ಸಂಗೀತ ಸಂಯೋಜನೆ ಮಾಡಿದ್ದು, ಕೆ.ಕಲ್ಯಾಣ್, ಪ್ರಮೋದ್ ಮರವಂತೆ ಸಾಹಿತ್ಯ ರಚಿಸಿದ್ದಾರೆ. ಅವಿನಾಶ್‌ಶಾಸ್ತ್ರಿ ಅವರ ಛಾಯಾಗ್ರಹಣವಿದೆ. ದಿಯಾಕೀರ್ತಿ, ಚಂದನಾಗೌಡ ಮತ್ತು ಶ್ವೇತಾ ಕೊಗ್ಗೂರು ನಾಯಕಿಯರಾದ್ದು, ರಾಜೇಶ್ ನಟರಂಗ, ಸಂಗೀತಾ, ಜಯತೀರ್ಥ, ಚೇತನ್‌ದುರ್ಗ, ಸದಾನಂದ, ಹುಲಿ ಕಾರ್ತಿಕ್, ಬೇಬಿ ರಿತುಸಿಂಗ್ ಉಳಿದ ತಾರಾಗಣದಲ್ಲಿದ್ದಾರೆ.

ರಕ್ಷಿ ಕ್ರೈಂ ಥ್ರಿಲ್ಲರ್ ಫ್ಯಾಮಿಲಿ ಎಂಟರ್‌ಟೈನರ್

ಕ್ರೈಂ ಥ್ರಿಲ್ಲರ್ ಜತೆಗೆ ಫ್ಯಾಮಿಲಿ ಎಂಟರ್‌ಟೈನರ್ ಕಥೆಯನ್ನು ನಿರ್ದೇಶಕ ವೆಂಕಟ್‌ಭಾರದ್ವಾಜ್ ಅವರ ತಮ್ಮ ನಿರ್ದೇಶನದ ರಕ್ಷಿ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಎಸ್.ಎನ್.ಆರ್. ಪ್ರೊಡಕ್ಷನ್ಸ್ ಅಡಿ ಸಾಲಿಗ್ರಾಮ ಸುರೇಶ್ ಅವರ ನಿರ್ಮಾಣದ ಈ ಚಿತ್ರದಲ್ಲಿ ಅವರ ಪುತ್ರ ರಕ್ಷಿ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ರಕ್ಷಿ ಚಿತ್ರದ ಟ್ರೇಲರನ್ನು ಅಶ್ವಿನಿ ಪುನೀತ್ ರಾಜಕುಮಾರ್ ಅವರು ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಕೋರಿದರು.

ಈವೇಳೆ ನಿರ್ದೇಶಕ ವೆಂಕಟ್ ಭಾರದ್ವಾಜ್ ಮಾತನಾಡಿ ಜರ್ಮನಿಯಲ್ಲಿರುವ ಸಾಲಿಗ್ರಾಮ ಸುರೇಶ್ ನನ್ನ ಇಪ್ಪತ್ತು ವರ್ಷಗಳ ಸ್ನೇಹಿತರು. ನಾನು ಸುರೇಶ್ ಬಳಿ ಎರಡು ಕಥೆ ಹೇಳಿದ್ದೆ, ಅವರು ಅಶ್ವಿನಿ ಮೇಡಂ ಒಪ್ಪಿದ ಕಥೆಯನ್ನ ಮಾಡೋಣ ಅಂದರು, ಅಶ್ವಿನಿ ಮೇಡಂ ಈ ಕಥೆ ಇಷ್ಟಪಟ್ಟರು. ಅವತ್ತು ಮುಹೂರ್ತಕ್ಕೆ ಬಂದಿದ್ದ ಅಶ್ವಿನಿ ಮೇಡಂ ಇಂದು ಟ್ರೈಲರನ್ನೂ ರಿಲೀಸ್ ಮಾಡಿದ್ದಾರೆ, ಸೆನ್ಸಾರ್‌ನಿಂದಲೂ ಯು/ಎ ಪಡೆದಿರುವ ರಕ್ಷಿ ಜುಲೈ 10ರಂದು ಬಿಡುಗಡೆಯಾಗುತ್ತಿದೆ ಎಂದರು.

» ಅಶ್ವಿನಿ ಪುನೀತ್ ರಾಜಕುಮಾರ್ ಟ್ರೈಲರ್ ಬಿಡುಗಡೆ



ನಾಯಕ ರಕ್ಷಿ ಮಾತನಾಡುತ್ತ ನನ್ನ ಹೆಸರು ಹಾಗೂ ಚಿತ್ರದ ಹೆಸರು ಎರಡೂ ಒಂದೇ ಆಗಿರುವುದು ವಿಶೇಷ. ಇದೊಂದು ಕ್ರೈಮ್ ಥ್ರಿಲ್ಲರ್ ಚಿತ್ರ. ನಾನೊಬ್ಬ ಸ್ಟೈಲಿಷ್ ಗ್ಯಾಂಗ್‌ಸ್ಟರ್ ಆಗಿ ಅಭಿನಯಿಸಿದ್ದೇನೆ. ಅದೇ ಚಿತ್ರದ ವಿಶೇಷ,ಚಿತ್ರವನ್ನು ಕಾನ್ಫಿಡೆಂಟಾಗಿ ಮಾಡಲು ಎಲ್ಲರೂ ಸಹಕರಿಸಿದ್ದಾರೆ, ವಯಸ್ಸಿನ ಮಿತಿಇಲ್ಲದೆ ಎಲ್ಲರೂ ನೋಡಬಹುದಾದ ಚಿತ್ರವಿದು. ಜರ್ಮನಿಯಲ್ಲಿ ಚಿತ್ರಕ್ಕೆ ಬೇಕಾದ ತಯಾರಿ ಮಾಡಿಕೊಂಡು ಬಂದು ಇಲ್ಲಿ ಪರೀಕ್ಷೆ ಬರೆದಿದ್ದೇನೆ. ಜುಲೈ 10 ರಂದು ರಿಸಲ್ಟ್ ಬರಲಿದೆ ಎಂದರು.

ನಿರ್ಮಾಪಕ ಸಾಲಿಗ್ರಾಮ ಸುರೇಶ್ ಮಾತನಾಡುತ್ತ ನಾನು ಮೂಲತಃ ಸಾಲಿಗ್ರಾಮದವನಾದರೂ ಬಹಳ ವರ್ಷಗಳಿಂದ ಜರ್ಮನಿಯಲ್ಲೇ ನೆಲೆಸಿದ್ದೇನೆ. ನನ್ನ ತಂದೆ ರಾಜಶೇಖರ್, ಡಾ॥ರಾಜಕುಮಾರ್ ಅವರಜತೆ ಹೊಸಬೆಳಕು ಚಿತ್ರ ನಿರ್ಮಿಸಿದ್ದರು. ನಾನೂ ನಿರ್ಮಾಪಕನಾಗಿ ಒಂದು ಸಿನಿಮಾ ಮಾಡಬೇಕೆಂಬ ಆಸೆಯಿತ್ತು, ಅದು ಈ ಚಿತ್ರದಲ್ಲಿ ಈಡೇರಿದೆ. ನನ್ನ ಮಗನೇ ನಾಯಕನಾಗಿ ನಟಿಸಿದ್ದಾನೆ. ನಮ್ಮ ಕುಟುಂಬ ಸ್ನೇಹಿತರಾದ ಅಶ್ವಿನಿ ಪುನೀತ್ ರಾಜಕುಮಾರ್ ಅವರ ಸಹಕಾರ ಈ ಚಿತ್ರಕ್ಕೆ ತುಂಬಾ ಇದೆ. ಸದ್ಯ ಕನ್ನಡ ಸಿನಿಮಾ ಇಂಡಸ್ಟ್ರಿ ಸ್ಥಿತಿ ಹೇಗಿದೆ ಅಂತ ಗೊತ್ತು, ನಮ್ಮ ಸಿನಿಮಾದಿಂದಲೇ ಅದು ಮತ್ತೆ ಮೇಲಕ್ಕೆ ಏರಬಹುದು, ಮುಂದೆಯೂ ನಮ್ಮ ಸಂಸ್ಥೆಯಿಂದ ಹೊಸಬರಿಗೆ ಅವಕಾಶ ಕೊಡುವ ಉದ್ದೇಶವಿದೆ ಎಂದರು.

ಈ ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಡ್ಯಾನಿ. ಭೂಗತಲೋಕದ ದೊರೆಯಾಗಿ ನಾನು ಕಾಣಿಸಿಕೊಂಡಿದ್ದೇನೆ ಎಂದು ತಮ್ಮ ಪಾತ್ರದ ಕುರಿತು ಹಿರಿಯನಟ ಬಿ.ಸುರೇಶ್ ತಿಳಿಸಿದರು. ಚಿತ್ರದ ಇಬ್ಬರು ನಾಯಕಿಯರಾದ ಆಶಿಕಾ ಸೋಮಶೇಖರ್, ಪಲ್ಲವಿ ಮಂಜುನಾಥ್ ತಮ್ಮ ಪಾತ್ರಗಳ ಬಗ್ಗೆ ಮಾತನಾಡಿದರು. ಚಿತ್ರದ ಹಾಡುಗಳ ಕುರಿತು ಸಂಗೀತ ನಿರ್ದೇಶಕ ಲೋಕಿ ತವಸ್ಯ ಮಾಹಿತಿ ನೀಡಿದರು. ಛಾಯಾಗ್ರಾಹಕ ಬಸಾಕ್ ಪ್ರಭಾಕರ್, ಕಲಾನಿರ್ದೇಶಕ ದೀಪಕ್ ಕಾಮತ್, ಕಾರ್ಯಕಾರಿ ನಿರ್ಮಾಪಕ ವಜ್ರೇಶ್ವರಿ ಸ್ವಾಮಿ ಪತ್ರಿಕಾಗೋಷ್ಠಿಯಲ್ಲಿದ್ದರು.



ರಕ್ಷಿ ಸುರೇಶ್, ಪಲ್ಲವಿ ಮಂಜುನಾಥ್, ಆಶಿಕಾ ಸೋಮಶೇಖರ್, ಸಂಪತ್ ಮೈತ್ರೇಯ, ರಮೇಶ್ ಪಂಡಿತ್, ಬಲ ರಾಜವಾಡಿ, ಜಿ ಜಿ, ಹರಿಣಿ ಶ್ರೀಕಾಂತ್ ಹೀಗೆ ಕಲಾವಿದರ ದೊಡ್ಡ ಬಳಗವೇ ಈ ಚಿತ್ರದಲ್ಲಿದೆ.

ಇಂದು ಟಾಕ್ಸಿಕ್ ಸುಂದರಿಯರ ಟೀಸರ್!

ರಾಕಿಂಗ್ ಸ್ಟಾರ್ ಯಶ್ ನಟನೆಯ 'ಟಾಕ್ಸಿಕ್' ಚಿತ್ರದ ಬಿಡುಗಡೆಗೆ ಇನ್ನು ಕೇವಲ 58 ದಿನಗಳಷ್ಟೇ ಬಾಕಿಯಿದೆ. ದಿನಗಳೆದಂತೆ ಚಿತ್ರದ ಕುತೂಹಲವೂ ಹೆಚ್ಚಾಗುತ್ತಿದೆ, ಇಂದು ಬೆಳಗ್ಗೆ 11-33ಕ್ಕೆ ಚಿತ್ರದ ಐವರು ಸುರ ಸುಂದರಿಯರ ಪಾತ್ರಗಳನ್ನು ಪರಿಚಯಿಸುವ ವಿಶೇಷ ಟೀಸರ್ ರಿಲೀಸ್ ಆಗುತ್ತಿದೆ. ಕೇವಲ ಮಹಿಳಾ ಪಾತ್ರಗಳನ್ನಷ್ಟೇ ಇಂಟ್ರಡ್ಯೂಸ್ ಮಾಡುವ ಟೀಸರ್ ಇದಾಗಿದೆ. ಟಾಕ್ಸಿಕ್ ಚಿತ್ರದಲ್ಲಿ ನಯನತಾರಾ(ಗಂಗಾ), ಹುಮಾ ಖುರೇಶಿ(ಎಲಿಜಬೆತ್), ಕಿಯಾರಾ ಅಡ್ವಾಣಿ (ನಡಿಯಾ), ರುಕ್ಮಿಣಿ ವಸಂತ್(ಮೆಲ್ಲಿಸ್ಸಾ) ಹಾಗೂ ತಾರಾ ಸುತಾರಿಯಾ(ರೆಬೆಕಾ) ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈಗಾಗಲೇ ಅವರ ಲುಕ್ ಕೂಡ ರಿವೀಲ್ ಆಗಿದೆ. ಆದರೆ ಅವರ ಪಾತ್ರಗಳು ಹೇಗಿರುತ್ತವೆ ? ಕಥೆಯಲ್ಲಿ ಅವರ ಮಹತ್ವ ಏನು ಎನ್ನುವ ಕುತೂಹಲಕ್ಕೆ ಉತ್ತರ ದೊರಕಲಿದೆ. ಕೇವಲ ಮಹಿಳಾ ಪಾತ್ರಗಳನ್ನು ಹೈಲೈಟಾಗಿಸಿ ಒಂದು ಟೀಸರ್ ಮಾಡಿರುವುದೇ ಇಲ್ಲಿ ವಿಶೇಷ.



ಗೀತು ಮೋಹನ್‌ದಾಸ್ ಅವರ ನಿರ್ದೇಶನವಿರುವ ಈ ಚಿತ್ರವನ್ನು ಕೆವಿಎನ್ ಪ್ರೊಡಕ್ಷನ್ಸ್ ಜೊತೆ ಸೇರಿ ಯಶ್ ತಮ್ಮ ಮಾನ್ಸ್ಟರ್ ಮೈಂಡ್ ಕ್ರಿಯೇಷನ್ಸ್ ಬ್ಯಾನರ್ ಅಡಿ ನಿರ್ಮಿಸಿದ್ದಾರೆ. ಸದ್ಯ ಚಿತ್ರದ ಡಬ್ಬಿಂಗ್ ಕೆಲಸಗಳು ನಡೀತಿದೆ. ಅಂದಹಾಗೆ ಹಾಲಿವುಡ್ ಪ್ರೇಕ್ಷಕರನ್ನು ಸಹ ಗಮನದಲ್ಲಿಟ್ಟುಕೊಂಡು ಈ ಚಿತ್ರವನ್ನು ಕಟ್ಟಿಕೊಡಲಾಗ್ತಿದೆ. ಒಂದಷ್ಟು ಹಾಲಿವುಡ್ ತಂತ್ರಜ್ಞರೂ ಚಿತ್ರದಲ್ಲಿ ಕೆಲಸ ಮಾಡಿದ್ದಾರೆ. ಈಗಾಗಲೇ ಎರಡು ಟೀಸರ್, ಒಂದು ಸಾಂಗ್ ರಿಲೀಸಾಗಿದೆ. 'ತಬಾಹಿ' ವೀಡಿಯೋ ಸಾಂಗ್ ಬರೋ ನಿರೀಕ್ಷೆಯಿತ್ತು. ಆದರೀಗ ಮಹಿಳಾಮಣಿಗಳ ಟೀಸರ್ ಬಿಡುಗಡೆಯಾಗಲಿದೆ. ಚಿತ್ರದಲ್ಲಿ ಯಶ್ ಸಹೋದರಿಯಾಗಿ ನಯನತಾರಾ ನಟಿಸಿದ್ದು, ನಾಯಕಿಯಾಗಿ ಕಿಯಾರಾ ಅಡ್ವಾನಿ ಸಾಥ್ ಕೊಟ್ಟಿದ್ದಾರೆ. ಆಕೆ ಚಿತ್ರದಲ್ಲಿ ಕಣ್ಣಿಲ್ಲದ ವಿಶೇಷಚೇತನ ಯುವತಿಯ ಪಾತ್ರದಲ್ಲಿ ನಟಿಸಿದ್ದಾರೆ. ಉಳಿದಂತೆ ಹುಮಾ ಖುರೇಶಿ ಹಾಗೂ ತಾರಾ ಸುತಾರಿಯಾ ನೆಗೆಟಿವ್ ರೋಲ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ನಾಯಕ ಯಶ್ ತಂದೆ, ಮಗನಾಗಿ ದ್ವಿಪಾತ್ರದಲ್ಲಿ ನಟಿಸಿರುವುದು ವಿಶೇಷ. ರಾಯ ಎಂಬ ಖಡಕ್ ಗ್ಯಾಂಗ್ಸ್ಟರ್ ಹಾಗೂ ತಂದೆಗೆ ಸವಾಲು ಹಾಕುವ ಕಿಲಾಡಿಮಗ ಟಿಕೆಟ್ ಪಾತ್ರದಲ್ಲೂ, ರಾಕಿಂಗ್‌ಸ್ಟಾರ್ ಮಿಂಚಿದ್ದಾರೆ. ಇಲ್ಲಿ ತಮ್ಮ ಗಡ್ಡಕ್ಕೆ ಕತ್ತರಿ ಹಾಕಿ ಕ್ಲೀನ್ ಶೇವ್ ಫೇಸ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಕಿರುಸುದ್ದಿ

ಜಿಲ್ಲಾಸ್ಪತ್ರೆ ಸಮಸ್ಯೆಗೆ ಉಸ್ತುವಾರಿ ಸಚಿವರು ಕ್ರಮಕೈಗೊಳ್ಳಿ: ಆನಂದ್

• ಕಡೂರು : ಜಿಲ್ಲೆಯಲ್ಲಿ ಅವ್ಯವಸ್ಥೆಯಿಂದ ಕೂಡಿರುವ ಮೆಡಿಕಲ್ ಕಾಲೇಜು ಮತ್ತು ಜಿಲ್ಲಾಸ್ಪತ್ರೆಯನ್ನು ಸರಿಪಡಿಸಲು ಉಸ್ತುವಾರಿ ಸಚಿವರು ಸೂಕ್ತ ಕ್ರಮ ವಹಿಸಿ ಜಿಲ್ಲಾಮಟ್ಟದ ಶಾಸಕರ ಸಮಿತಿ ರಚಿಸುವಂತೆ ಶಾಸಕ ಆನಂದ್ ಒತ್ತಾಯಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಜಿಲ್ಲಾಸ್ಪತ್ರೆಯ ಬಗ್ಗೆ ಗಂಭೀರ ಆರೋಪ ಮಾಡುತ್ತಿದ್ದು, ಜೊತೆಗೆ ಮೆಡಿಕಲ್ ಕಾಲೇಜಿನ ಅವ್ಯವಸ್ಥೆ ಸರಿಪಡಿಸಲು ಕಳೆದ ದಿನಗಳಲ್ಲಿ ವಿಧಾನಸಭೆಯ ಅರ್ಜಿ ಸಮಿತಿಯ 14 ಶಾಸಕರು ಸಹ ಮೆಡಿಕಲ್ ಕಾಲೇಜಿಗೆ ಭೇಟಿ ನೀಡಿ ಅಲ್ಲಿನ ಕೆಲವು ನ್ಯೂನ್ಯತೆಗಳನ್ನು ಸರಿಪಡಿಸುವಂತೆ ಸಮಿತಿಯ ಅಧ್ಯಕ್ಷರು ಆದೇಶ ಮಾಡಿದ್ದರು. ಇಲ್ಲಿನ ನ್ಯೂನ್ಯತೆಗಳು ಇಂದಿಗೂ ಬಗೆಹರಿದಿಲ್ಲ ಎಂದರು.

ಮೆಡಿಕಲ್ ಕಾಲೇಜಿನ ಕಟ್ಟಡ ಕಾಮಗಾರಿಯು ಆಮೆಗತಿ ಕಾಣುತ್ತಿದ್ದು, ಕುಡಿಯುವ ನೀರಿನ ಸಮಸ್ಯೆ, ಶೀತೋಪಕರಣ ವೈದ್ಯಕೀಯ ಪರಿಕರಗಳು ಇಲ್ಲದ ಬಗ್ಗೆ ವಿಧಾನಸಭೆ ಅರ್ಜಿ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಿದ್ಯಾರ್ಥಿಗಳು ಅಳಲನ್ನು ತೋಡಿಕೊಂಡಿದ್ದರು. ಕಾಲೇಜು ಮತ್ತು ಚಿಕ್ಕಮಗಳೂರು ಜಿಲ್ಲಾಸ್ಪತ್ರೆ ಯಾರಿಗೂ ಸೀಮಿತವಲ್ಲ, ಜಿಲ್ಲಾಸ್ಪತ್ರೆ ನಿರ್ವಹಣೆಯ ಹಾಳಾಗಲು ಕಾಲೇಜಿನ ಡೀನ್ ಹರೀಶ್ ಮುಖ್ಯ ಕಾರಣರಾಗಿದ್ದಾರೆ ಎಂದು ಆರೋಪಿಸಿದರು.

ಹಿಂದಿನ ಬಿಜೆಪಿ ಸರಕಾರದಲ್ಲಿ ನೇಮಕವಾಗಿದ್ದರೂ ಸಹ ಇದು ಸಿ.ಟಿ. ರವಿ ಅವರ ಪಾಪದ ಕೂಸೆ, ಹರೀಶ್ ಇಷ್ಟು ವರ್ಷವಾದರೂ ವರ್ಗಾವಣೆ ಮಾಡದೆ ಇಂದಿಗೂ ಉಳಿಸಿಕೊಂಡಿದ್ದು ವೈದ್ಯಕೀಯ ಶಿಕ್ಷಣ ಸಚಿವರು ವರ್ಗಾವಣೆ ಮಾಡಲು ಮೀನಮೇಷ ಎಣಿಸುತ್ತಿದ್ದಾರೆ. ಉಸ್ತುವಾರಿ ಸಚಿವರಿಗೆ ಹಾಗೂ ಸರಕಾರಕ್ಕೆ ಕೂಡಲೇ ಡೀನ್ ವರ್ಗಾವಣೆಗೊಳಿಸಿದರೆ ಮಾತ್ರ ಮೆಡಿಕಲ್ ಕಾಲೇಜು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂದರು.

ಅರ್ಹ ಫಲಾನುಭವಿಗಳಿಗೆ ಮಾತ್ರ ಸೌಲಭ್ಯ: ಜಾರ್ಜ್

• ಚಿಕ್ಕಮಗಳೂರು : ಸರ್ಕಾರ ಗೃಹಜ್ಯೋತಿ ಯೋಜನೆಯನ್ನು ಸಾರಾಸಗಟಾಗಿ ಪರಿಷ್ಕರಣೆ ಮಾಡಲು ಮುಂದಾಗಿಲ್ಲ, ಬದಲಿಗೆ ಕೇವಲ ಅರ್ಹ ಫಲಾನುಭವಿಗಳಿಗೆ ಮಾತ್ರ ಈ ಸೌಲಭ್ಯ ತಲುಪಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟಪಡಿಸಿದರು.

ಯೋಜನೆಯ ಪರಿಷ್ಕರಣೆ ಕುರಿತಾಗಿ ಎದ್ದಿರುವ ಗೊಂದಲಗಳ ಕುರಿತು ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ಇದಕ್ಕಾಗಿ ಶೀಘ್ರದಲ್ಲೇ ಮನೆಮನೆಗೆ ಅರ್ಜಿ ಫಾರಂಗಳನ್ನು ವಿತರಿಸಲಾಗುವುದು. ಆ ಫಾರಂ ನೀಡಿದಾಗ ಜನರಿಗೆ ಯೋಜನೆಯ ಮಾನದಂಡಗಳ ಬಗ್ಗೆ ಸಂಪೂರ್ಣ ಮಾಹಿತಿ ತಿಳಿಯಲಿದೆ ಎಂದು ಅವರು ಹೇಳಿದರು.

ಇದು ಯೋಜನೆಯ ಕಡಿತ ಅಥವಾ ಹೊಸ ಪರಿಷ್ಕರಣೆಯಲ್ಲ, ಬದಲಿಗೆ ಅರ್ಹರಿದ್ದವರಿಗೆಲ್ಲಾ ಸೌಲಭ್ಯ ಸಿಗುವಂತೆ ಮಾಡುವುದು ಮತ್ತು ಅನರ್ಹರಿಗೆ ಇದು ಸಿಗದಂತೆ ತಡೆಯುವ ಪ್ರಕ್ರಿಯೆಯಾಗಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಡಾ. ಧನಂಜಯ ಸರ್ಜಿ ಆಗ್ರಹ

ಗೃಹಲಕ್ಷ್ಮೀ ಅಕ್ರಮ: ಎಸ್ಐಟಿ ತನಿಖೆ ನಡೆಸಿ

• ಶಿವಮೊಗ್ಗ: ಗೃಹಲಕ್ಷ್ಮಿ ಯೋಜನೆ ಕುರಿತು ಸಿಎಜಿ ವರದಿಯಲ್ಲಿ ಉಲ್ಲೇಖವಾಗಿರುವ ಅಕ್ರಮಗಳ ಕುರಿತು ಎಸ್ಐಟಿ ತನಿಖೆ ನಡೆಸುವಂತೆ ವಿಧಾನ ಪರಿಷತ್ ಸದಸ್ಯ ಡಾ. ಧನಂಜಯ ಸರ್ಜಿ ಆಗ್ರಹಿಸಿದರು.

ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಗೃಹಲಕ್ಷ್ಮಿ ಯೋಜನೆ ಆರಂಭದಲ್ಲಿ ತಾಂತ್ರಿಕ ಸಮಸ್ಯೆಗಳು ಇರಬಹುದು ಎಂದು ಒಪ್ಪಿಕೊಳ್ಳಬಹುದಾದರೂ, ನಂತರ ಬಹುಕೋಟಿ ಅಕ್ರಮಗಳು ನಡೆದಿರುವುದಾಗಿ ಸಿಎಜಿ ವರದಿ ಹೇಳಿದೆ. ಸಿಎಜಿ ವರದಿ ಪ್ರಕಾರ, 19,020 ಫಲಾನುಭವಿಗಳ ಹೆಸರಿನಲ್ಲಿ ಸುಮಾರು 60.70 ಕೋಟಿ ಪಾವತಿಸಲಾಗಿದೆ. ಒಟ್ಟು 3,03,000 ಕಂತುಗಳು ಒಂದೇ ಬ್ಯಾಂಕ್ ಖಾತೆಗೆ ಜಮೆಯಾಗಿವೆ. ಒಂದೇ ತಿಂಗಳಲ್ಲಿ 8,995 ಕಂತುಗಳು ಪುನರಾವರ್ತನೆಯಾಗಿ ಜಮೆಯಾಗಿರುವ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದರು.

ಮೃತರ ಖಾತೆಗೆ 116 ಕೋಟಿ: ಸುಮಾರು 1.08 ಲಕ್ಷ ಮೃತಪಟ್ಟ ವ್ಯಕ್ತಿಗಳ ಖಾತೆಗಳಿಗೆ 5.79 ಲಕ್ಷ ಕಂತುಗಳ ಮೂಲಕ ಸುಮಾರು 116 ಕೋಟಿ ಹಣ ವರ್ಗಾವಣೆಯಾಗಿದೆ. ಸತ್ತವರ ಖಾತೆಗೆ ಹಣ ಹೋಗಿದ್ದರೆ ಅದು ಯಾರಿಗೆ ತಲುಪಿತು? ಆ ಹಣವನ್ನು ಸರ್ಕಾರ ಹೇಗೆ ವಾಪಸ್ ಪಡೆಯಲಿದೆ ಎಂದು ಪ್ರಶ್ನಿಸಿದರು.



ಮುಖ್ಯಮಂತ್ರಿಗಳಿಗೆ ಮೂರು ನೇರ ಪ್ರಶ್ನೆಗಳು

- ಸಿಎಜಿ ವರದಿಯಲ್ಲಿ ಉಲ್ಲೇಖಿಸಿರುವ ಹಣ ಯಾರ ಜೇಬಿಗೆ ಹೋಗಿದೆ ?
- 2025ರ ಫೆಬ್ರವರಿ-ಮಾರ್ಚ್ ತಿಂಗಳ ಗೃಹಲಕ್ಷ್ಮಿಯ 5,000 ಕೋಟಿ ಹಣ ಎಲ್ಲಿದೆ?
- ಯಾವಾಗ ಬಿಡುಗಡೆ ಮಾಡಲಾಗುತ್ತದೆ ಮತ್ತು ರಾಜ್ಯದಲ್ಲಿರುವ ಗ್ಯಾರಂಟಿ ವೀಕ್ಷಣಾ ಸಮಿತಿ ಅಗತ್ಯವೇ?

23,262 ಪಾವತಿಗಳ ಮೂಲಕ 46.52 ಕೋಟಿ ಹಣವನ್ನು ಬ್ಯಾಂಕ್ ಖಾತೆ ವಿವರಗಳೇ ಇಲ್ಲದವರಿಗೆ ಪಾವತಿಸಲಾಗಿದೆ. ಬ್ಯಾಂಕ್ ಖಾತೆಯೇ ಇಲ್ಲದಿದ್ದರೆ ಡಿಬಿಟಿ ಮೂಲಕ ಹಣ ಹೇಗೆ ವರ್ಗಾವಣೆಯಾಯಿತು ಎಂಬುದರ ಬಗ್ಗೆ ಸರ್ಕಾರ ಉತ್ತರಿಸಬೇಕು. ಗೃಹಲಕ್ಷ್ಮಿ ಯೋಜನೆಯಲ್ಲಿ 10 ಲಕ್ಷಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳ ವಿವರಗಳನ್ನು ಬದಲಾಯಿಸಿರುವ ದಾಖಲೆಗಳು ತನಿಖೆಯಲ್ಲಿವೆ. ಸರ್ಕಾರವೇ ಗ್ಯಾರಂಟಿ ಹಣವನ್ನು ಬ್ಯಾಂಕ್ ಸಾಲಕ್ಕೆ ಹೊಂದಾಣಿಕೆ ಮಾಡಬಾರದು ಎಂದು ಆದೇಶ ಹೊರಡಿಸಿದ್ದರೂ ಇಷ್ಟೊಂದು ಖಾತೆ ಬದಲಾವಣೆ ಏಕೆ ನಡೆದಿದೆ ಎಂದು ಪ್ರಶ್ನಿಸಿದರು.

ಎಸ್ ಐಆರ್ ಬಗ್ಗೆ ಕಾಂಗ್ರೆಸ್ ದ್ವಂದ್ವ...

ಪ್ರಕ್ರಿಯೆಗೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸುತ್ತಿದೆ. ಆದರೆ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ವಿದ್ಯಾರ್ಥಿವೇತನ ಸೇರಿದಂತೆ ಪ್ರತಿಯೊಂದು ಯೋಜನೆಗೂ ಪರಿಷ್ಕರಣೆ ಬೇಕು ಎನ್ನುತ್ತಾರೆ. ಒಂದು ಕಡೆ ಪರಿಷ್ಕರಣೆ ಬೇಡ, ಮತ್ತೊಂದು ಕಡೆ ಬೇಕು ಎಂಬ ದ್ವಂದ್ವ ಕಾಂಗ್ರೆಸ್‌ಗೆ ಇದೆ. ಒಬ್ಬ ವ್ಯಕ್ತಿ ಹಲವು ಕಡೆ ಮತದಾರನಾಗಿರುವುದು, ಹೊರರಾಜ್ಯಗಳಿಂದ ಬಂದು ನಕಲಿ ಮತದಾರರಾಗಿರುವವರನ್ನು ಗುರುತಿಸುವ ಕಾರ್ಯಕ್ಕೂ ಕಾಂಗ್ರೆಸ್ ವಿರೋಧಿಸುತ್ತಿದೆ ಎಂದು ಟೀಕಿಸಿದರು.

5,000 ಕೋಟಿ ಎಲ್ಲಿದೆ?: 2025ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಗೃಹಲಕ್ಷ್ಮಿ ಕಂತುಗಳನ್ನು ಸರ್ಕಾರ ಬಿಡುಗಡೆ ಮಾಡಲಿಲ್ಲ, ಸುಮಾರು 5,000 ಕೋಟಿ ಹಣ ತಾಯಂದಿರಿಗೆ ತಲುಪಬೇಕಾಗಿತ್ತು. ಆ ಹಣ ಎಲ್ಲಿಗೆ ಹೋಯಿತು ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಆಡಳಿತ ಎಂದರೆ ಕಲೆಕ್ಷನ್, ಕಮಿಷನ್, ಕರಪ್ಷನ್, ಕೊಲ್ಯಾಪ್ಸ್, ಕ್ರೈಸಿಸ್ ಎಂದು ಹೆಸರಾಗಿದೆ. ಸರ್ಕಾರದ ಸಾವಿರ ದಿನಗಳ ಆಡಳಿತದಲ್ಲಿ ಸಾವಿರ ಹಗರಣಗಳು ನಡೆದಿವೆ ಎಂದು ಆರೋಪಿಸಿದ ಅವರು, ಭ್ರಷ್ಟಾಚಾರ ಕಾಂಗ್ರೆಸ್ ಆಡಳಿತದ ಗುರುತಾಗಿದೆ. ಬಿಜೆಪಿ ಸರ್ಕಾರದ ವಿರುದ್ಧ ಹಿಂದೆ ಶೇ.40 ಕಮಿಷನ್ ಆರೋಪ ಮಾಡಿದ್ದ ಕಾಂಗ್ರೆಸ್, ಇಂದು ಅಧಿಕಾರಿಗಳೇ ಶೇ.63 ಕಮಿಷನ್ ಬಗ್ಗೆ ಮಾತನಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

ಸಾಲದ ಭಾರ ಹೆಚ್ಚಿಸಿದ ಸರ್ಕಾರ: ರಾಜ್ಯದ ಪ್ರತಿಯೊಬ್ಬ ನವಜಾತ ಶಿಶುವಿನ ತಲೆಯ ಮೇಲೂ ಸುಮಾರು ಒಂದೂವರೆ ಲಕ್ಷ ರೂಪಾಯಿ ಸಾಲದ ಹೊರೆ ಹಾಕಲಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಒಟ್ಟು 21 ಮುಖ್ಯಮಂತ್ರಿಗಳ ಪೈಕಿ ಸಿದ್ದರಾಮಯ್ಯ ಅವರ ಅವಧಿಯಲ್ಲೇ ರಾಜ್ಯದ ಒಟ್ಟು ಸಾಲದ ಶೇ.54ರಷ್ಟು ಸಾಲ ಮಾಡಲಾಗಿದೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಜಗದೀಶ್, ಸುರೇಖಾ ಮುರುಳೀಧರ್, ರಶ್ಮಿ ಶ್ರೀನಿವಾಸ್, ಚಂದ್ರಶೇಖರ್, ಮಂಜುನಾಥ್ ಉಪಸ್ಥಿತರಿದ್ದರು.

ಎಸ್‌ಪಿಗೆ ಕ್ರಮ ಕೈಗೊಳ್ಳುವಂತೆ ಶಾಸಕ ಆನಂದ್‌ರಿಂದ ದೂರು

ಪೊಲೀಸರಿಂದ ಕಾಂಗ್ರೆಸ್ಸಿಗರಿಗೆ ತೊಂದರೆ

• ಚಿಕ್ಕಮಗಳೂರು: ಕ್ಷೇತ್ರದ ಕೆಲವು ಪೊಲೀಸರು ಕಾಂಗ್ರೆಸ್ ಕಾರ್ಯಕರ್ತರಿಗೆ ವಿನಾ ಕಾರಣ ತೊಂದರೆ ಕೊಡುತ್ತಿದ್ದಾರೆ ಎಂದು ಕಡೂರು ಶಾಸಕ ಕೆ.ಎಸ್.ಆನಂದ್ ಅವರು ಬುಧವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಅವರನ್ನು ಭೇಟಿ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರು ನೀಡಿದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಅಜ್ಜಂಪುರ ಪೊಲೀಸ್ ಠಾಣೆಯ ಸಿಬ್ಬಂದಿ ಕಾರ್ಯಕರ್ತರಿಗೆ ಕಿರುಕುಳ ನೀಡುತ್ತಿದ್ದಾರೆ. ಜೊತೆಗೆ ಇತರೆ ಕಡೆಗಳಲ್ಲಿ ಕೆಲವು ವ್ಯತ್ಯಾಸಗಳಿವೆ. ಅವೆಲ್ಲವನ್ನೂ ಸರಿಪಡಿಸಿ ಎಂದು ಎಸ್ಪಿ ಅವರಿಗೆ ತಿಳಿಸಿದ್ದೇವೆ ಎಂದರು.



ಸುಮಾರು 5 ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮುಖಂಡರು, ಕಾರ್ಯಕರ್ತರು ಎಸ್ಪಿ ಅವರನ್ನು ಭೇಟಿ ಮಾಡಿ ತಮಗಾಗುತ್ತಿರುವ ತೊಂದರೆ ಹೇಳಿಕೊಳ್ಳಬೇಕು ಎನ್ನುವ ಕಾರಣಕ್ಕೆ ಆಗಮಿಸಿದ್ದಾರೆ. ಇದರಲ್ಲಿ ಯಾವುದೇ ರೀತಿಯ ಪ್ರತಿಭಟನೆ ಅಥವಾ ಸತ್ಯಾಗ್ರಹ ಎನ್ನುವುದು ಇಲ್ಲ ಎಂದರು.

ಈ ವಿಚಾರದಲ್ಲಿ ಬಿಜೆಪಿ ಎನ್ನುವ ಪ್ರಶ್ನೆ ಬಂದಿಲ್ಲ, ನಾವು ಹೇಳಿದಂತ ಕೆಲಸಗಳು ಹಾಗೂ ಸಣ್ಣಪುಟ್ಟ ಲೋಪದೋಷಗಳಿವೆ. ಅವನ್ನು ಸರಿಪಡಿಸಿ ಎನ್ನುವುದಷ್ಟೇ ನಮ್ಮ ಒತ್ತಾಯ ಎಂದು ಹೇಳಿದರು.

ಪೊಲೀಸರ ವರ್ಗಾವಣೆ ವಿಚಾರವನ್ನು ನಾವು ಇಟ್ಟುಕೊಂಡು ನಾವು ಬಂದಿಲ್ಲ, ಎಸ್ಪಿ, ಡಿವೈಎಸ್ಪಿ ಅಂತಹವರ ವರ್ಗಾವಣೆ ವಿಚಾರದಲ್ಲಿ ಸರ್ಕಾರದ ಮಟ್ಟದಲ್ಲಿ ಪ್ರಯತ್ನ ಮಾಡಬಹುದು. ಆದರೆ ಪೊಲೀಸ್ ಸಿಬ್ಬಂದಿಗಳೆಲ್ಲರೂ ನಮ್ಮವರೇ ಇರುತ್ತಾರೆ. ಅವರ ವಿಚಾರಕ್ಕೆ ಶಾಸಕರು ಇಲ್ಲಿಯ ವರೆಗೆ ಬರುವ ಅಗತ್ಯವಿಲ್ಲ ಎಂದರು.

ಅಜ್ಜಂಪುರ ಪೊಲೀಸ್ ಠಾಣೆ ವ್ಯಾಪ್ತಿಗೆ ಕಡೂರು ಕ್ಷೇತ್ರದ ಭಾಗವೂ ಬರುತ್ತದೆ. ಅಲ್ಲಿನ ಸಿಬ್ಬಂದಿಗಳು ನಮ್ಮ ಮಾತು ಕೇಳುತ್ತಿಲ್ಲ, ಕಿರುಕುಳ ಕೊಡುತ್ತಿದ್ದಾರೆ ಎಂದು ಕಾರ್ಯಕರ್ತರು ಆರೋಪಿಸುತ್ತಿದ್ದಾರೆ. ಇದರ ಬಗ್ಗೆ ಕೂಲಂಕುಷ ತನಿಖೆ ಮಾಡಬೇಕು. ಕಾರ್ಯಕರ್ತರಿಂದ ಯಾಕೆ ಈ ರೀತಿ ದೂರು ಬರುತ್ತಿದೆ. ಅಲ್ಲಿ ಆಗುತ್ತಿರುವ ವ್ಯತ್ಯಾಸಗಳೇನು ಎನ್ನುವುದನ್ನು ಪರಿಶೀಲನೆ ಮಾಡಿ ಎಂದು ಒತ್ತಾಯಿಸಿದ್ದೇವೆ. ಎಸ್ಪಿ ಅವರು ಇನ್ನೆರಡು ದಿನಗಳಲ್ಲಿ ಈ ಬಗ್ಗೆ ತನಿಖೆ ಮಾಡುತ್ತೇವೆ ಎಂದಿದ್ದಾರೆ ಎಂದರು.

ಇಲ್ಲಿ ಬಹಳಷ್ಟು ವಿಚಾರಗಳಿವೆ. ಇತ್ತೀಚೆಗೆ ಪೊಲೀಸರೇ ಶಾಮೀಲಾಗಿ ರಾಗಿ ಖರೀದಿ ಕೇಂದ್ರದಲ್ಲಿ ದಲ್ಲಾಳಿಗಳ ವಾಹನಗಳನ್ನು ಬೇಗ ಬಿಡುವಂತಹದ್ದು, ರೈತರನ್ನು ದಿನವಿಡೀ ಕಾಯಿಸುವಂತಹ ಸಾರ್ವಜನಿಕರಿಗೆ ತೊಂದರೆ ಆದ ವಿಚಾರಗಳೂ ಇವೆ. ಇದೆಲ್ಲವನ್ನೂ ಎಸ್ಪಿ ಗಮನಕ್ಕೆ ತಂದಿದ್ದೇವೆ ಎಂದು ಹೇಳಿದರು.

ಎಸ್ಪಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಶಾಸಕರು ಭೇಟಿ ಮಾಡಿದ ಕೂಡಲೇ ಅವರು ಶಾಸಕರ ಮಾತು ಕೇಳುತ್ತಿಲ್ಲ ಎಂದು ಹೇಳುವುದು ಸರಿಯಲ್ಲ, ಕಿರುಕುಳ ನೀಡಿರುವ ಅಧಿಕಾರಿಗಳ ಪಟ್ಟಿಯನ್ನು ಎಸ್ಪಿ ಅವರಿಗೆ ನೀಡಿದ್ದೇವೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಎರಡು ದಿನದಲ್ಲಿ ವರದಿ ನೀಡುವಂತೆ ಅವರು ಡಿವೈಎಸ್ಪಿ ಅವರಿಗೆ ಸೂಚಿಸಿದ್ದಾರೆ ಎಂದರು.

ಆರ್‌ಎಸ್‌ಎಸ್ ದಕ್ಷಿಣ ಪ್ರಾಂತ ಸಹ ವ್ಯವಸ್ಥಾ ಪ್ರಮುಖ್ ಉಮೇಶ್

ಹಿಂದೂ ಸಮಾಜ ಸಂಘಟಿಸುವ ಕಾರ್ಯದಲ್ಲಿ ಆರ್‌ಎಸ್‌ಎಸ್

• ಭದ್ರಾವತಿ: ಪವಿತ್ರವಾದ ಹಿಂದೂ ಸಮಾಜವನ್ನು ಸಂಘಟಿಸುವ ಕಾರ್ಯವನ್ನು ಆರ್‌ಎಸ್‌ಎಸ್ ನಿರಂತರವಾಗಿ ಮಾಡುತ್ತಿದೆ. ಈ ಕಾರ್ಯದಲ್ಲಿ ಒಂದು ಶತಮಾನ ಸಂದಿರುವುದು ಹೆಮ್ಮೆಯ ಸಂಗತಿ ಎಂದು ಆರ್‌ಎಸ್‌ಎಸ್ ಕರ್ನಾಟಕ ದಕ್ಷಿಣ ಪ್ರಾಂತ ಸಹ ವ್ಯವಸ್ಥಾ ಪ್ರಮುಖ್ ಉಮೇಶ್ ತಿಳಿಸಿದರು.



ನ್ಯೂಟೌನ್ ರೋಟರಿ ಕ್ಲಬ್ ಸಭಾಂಗಣದಲ್ಲಿ ಆರ್‌ಎಸ್‌ಎಸ್ ವತಿಯಿಂದ ಏರ್ಪಡಿಸಿದ್ದ ಪ್ರಮುಖ ನಾಗರೀಕರ ಗೋಷ್ಠಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಈ ಕಾರ್ಯದಲ್ಲಿ ಸಮಾಜವನ್ನು ಹೊರತುಪಡಿಸಿ ಸಂಘ ಹಾಗೂ ಸಂಘದ ಕಾರ್ಯ ಚಟುವಟಿಕೆಗಳು ಇಲ್ಲ, ಇದರಲ್ಲಿ ಸಮಾಜದ ಎಲ್ಲರನ್ನೂ ಒಳಗೊಳ್ಳುವಂತೆ ಮಾಡುತ್ತಿದೆ. ಸ್ವಾತಂತ್ರ್ಯದ ಹೋರಾಟದ ಸಮಯದಲ್ಲಿ ಒಂದು ಕಡೆ ಬಲಿಷ್ಠ ಭಾರತ ಸಮಾಜವನ್ನು ನಿರ್ಮಿಸುವ ಹಿಂದೂಗಳ ಸಂಘಟನೆಯನ್ನು ಮಾಡುವ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವಿಕೆಯ ಯೋಜನೆ ರೂಪಿಸಿತು ಎಂದರು.

ಬ್ರಿಟೀಷರು ನಿರಂತರವಾಗಿ ದೇಶದ ಇತಿಹಾಸವನ್ನು ತಿರುಚುವ ಜನರನ್ನು ಒಡೆಯುವ ಕಾರ್ಯವನ್ನು ಮಾಡಿತು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದರೆ ಬ್ರಿಟೀಷರು ಅದನ್ನು ಸಿಪಾಯಿ ದಂಗೆ ಎಂದರು. ಇನ್ನೊಂದು ಕಡೆ ಲಾರ್ಡ್ ಮೆಕಾಲೆ ದೇಶದ ಶಿಕ್ಷಣ ವ್ಯವಸ್ಥೆಯನ್ನು ಹಾಳುಗೆಡುವ ಸಂಚನ್ನು ಮಾಡಿದ. ಸ್ವಾತಂತ್ರ್ಯದ ದಿಕ್ಕನ್ನು ತಪ್ಪಿಸುವ ಕಾರ್ಯವನ್ನು ಮಾಡಿದರು. ಈ ಸಂಚನ್ನು ದೇಶದ ಜನರಿಗೆ ತಿಳಿಸುವ ನೈಜ ಇತಿಹಾಸವನ್ನು ತಿಳಿಸುವ ಕಾರ್ಯ ಚಟುವಟಿಕೆಯಲ್ಲಿ ತೊಡಗಿಕೊಂಡಿದೆ ಎಂದರು.

ಲಾಲ್, ಪಾಲ್, ಬಾಲ್‌ರವರುಗಳು ಬ್ರಿಟೀಷರ ಸಾಮ್ರಾಜ್ಯವನ್ನು ನಡುಗಿಸಿದ ಕ್ರಾಂತಿಕಾರಿ ಹೋರಾಟಗಾರರು. ಬಾಲಗಂಗಾಧರ ತಿಲಕ್ ಶಿವಾಜಿ ಜಯಂತಿ ಹಾಗೂ ಗಣಪತಿ ಉತ್ಸವವನ್ನು ಸಾರ್ವಜನಿಕ ಉತ್ಸವವನ್ನಾಗಿಸುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಶಕ್ತಿಯನ್ನು ತುಂಬಿದರು. ಇದರ ಪರಿಣಾಮ ದೇಶದಾದ್ಯಂತ ಸಾರ್ವಜನಿಕರು ಈ ಉತ್ಸವದಲ್ಲಿ ಭಾಗಿಗಳಾದರು. ಇದು ಬ್ರಿಟೀಷರಿಗೆ ಹೊಸ ತಲೆ ನೋವು ತಂದಿತು ಎಂದರು.

ಇಷ್ಟಾದರೂ ಇಂದಿಗೂ ಬ್ರಿಟೀಷರು ನೀಡಿದ ಪೆಟ್ಟು ಒಡೆದು ಆಳುವ ನೀತಿಯನ್ನು ಫಲವನ್ನು ಅನುಭವಿಸಬೇಕಿದೆ. ಜನರ ಮನಸ್ಸನ್ನು ಹಾಳು ಮಾಡಿದರೆ ಸಂಸ್ಕೃತಿಯನ್ನು ಹಾಳುಗೆಡವಿದರು. ಇನ್ನಾದರೂ ನಾವು ನಮ್ಮ ಇತಿಹಾಸವನ್ನು ನಮ್ಮ ಆಚಾರ ವಿಚಾರ ಸಾಂಸ್ಕೃತಿಕ ಸಂಗತಿಗಳನ್ನು ಅರಿಯುವ ಪ್ರಯತ್ನ ಮಾಡದಿದ್ದರೆ ಮುಂದೊಂದು ದಿನ ಇದಕ್ಕೆ ಭಾರಿ ಬೆಲೆ ತೆತ್ತು ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ನಮ್ಮ ರಾಷ್ಟ್ರ ಧರ್ಮ ಪ್ರಣೀತ ರಾಷ್ಟ್ರವಾಗಿರುವ ಕಾರಣ ಧರ್ಮವನ್ನು ಉಳಿಸಲೇಬೇಕಿದೆ. ಅದು ಮಾನವ ಧರ್ಮವಾಗಿದೆ. ಯಾರಿಗೂ ನೋವನ್ನು ಉಂಟು ಮಾಡಬಾರದು, ಒಳ್ಳೆಯದನ್ನು ಮಾಡಬೇಕು ಎಂಬ ಭಾವನೆಯೆ ಧರ್ಮ. ಧರ್ಮ ಎಂಬುದು ಪೂಜಾ ಪದ್ಧತಿಯಲ್ಲ, ಅದೊಂದು ಸಾಮಾಜಿಕ ನಡಾವಳಿಕೆ ಆಗಿದೆ ಎಂದರು.

ಸ್ವಾತಂತ್ರ್ಯ ಹೋರಾಟ ಹತ್ತಿಕ್ಕುವ ಪ್ರಯತ್ನ

ಟರ್ಕಿ ದೇಶದ ಖಿಲಾಫತ್‌ನ್ನು ಪದಚ್ಯುತಗೊಳಿಸಿದ್ದಕ್ಕೆ ಇಲ್ಲಿ ಖಿಲಾಫತ್ ಹೋರಾಟ ಮಾಡುವ ಪರಿಸ್ಥಿತಿ ಉಂಟಾಯಿತು. ಆ ಮೂಲಕ ಮುಸ್ಲಿಮರಿಗೆ ವಿಶೇಷ ಔದಾರ್ಯ ಗೌರವಿಸುವ ವಾತಾವರಣ ನಿರ್ಮಾಣವಾಯಿತು. ಇದರ ಪರಿಣಾಮ ಮುಸ್ಲೀಂ ಲೀಗ್ ಕಾಂಗ್ರೆಸ್‌ನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡಿತು. ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡಿದರು. ಆಂಧ್ರ ಪ್ರದೇಶದ ಕಾಕಿನಾಡ ಅಧಿವೇಶನದಲ್ಲಿ ವಂದೇ ಮಾತರಂ ಹಾಡಿದ್ದಕ್ಕೆ ಸಭೆಯಿಂದ ಬಹಿಷ್ಕರಿಸಿದರು. ಭಗವಾಧ್ವಜ ರಾಷ್ಟ್ರಧ್ವಜವಾಗುವುದರ ಬದಲಿಗೆ ತ್ರಿವರ್ಣಧ್ವಜ ರಾಷ್ಟ್ರಧ್ವಜವಾಯಿತು. ಹಿಂದೂಗಳ ನರಮೇಧ ನಡೆದ ಮೂಪ್ಲಾ ಹತ್ಯಾಕಾಂಡದ ನೈಜ ಇತಿಹಾಸವನ್ನು ಮರೆಮಾಚಲಾಯಿತು. ಇಂತಹ ಹಲವಾರು ಸಂಗತಿಗಳನ್ನು ದೇಶದ ಜನರಿಗೆ ತಿಳಿಸುವ ಕಾರ್ಯವನ್ನು ಮಾಡುತ್ತಿದೆ ಎಂದರು.



ಸಂಘವು ಪ್ರಾರಂಭವಾಗಿ ಒಂದು ಶತಮಾನ ಸಂಭವಿಸುತ್ತಿರುವ ಈ ಸಂದರ್ಭಧಲ್ಲಿ, ದೇಶದಲ್ಲಿ ಮಹತ್ತರವಾದ ಬದಲಾವಣೆಗಳನ್ನು ಮಾಡಿದೆ. ಅದರ ಪರಿಣಾಮಗಳನ್ನು ಕಾಣುತ್ತಿದ್ದೇವೆ ಎಂದರು.

ಕಾರ್ಯಕ್ರಮದ ನಂತರ ಸಭಿಕರಿಂದ ಸಂವಾದ ಕಾರ್ಯಕ್ರಮ ನಡೆಯಿತು. ಮಧುಕರ್ ಮತ್ತು ಡಿ.ಎ.ರಂಗನಾಥ್ ಉಪಸ್ಥಿತರಿದ್ದರು.

ದೇಶವ್ಯಾಪಿ ವಿದ್ಯಾರ್ಥಿ ಆಂದೋಲನಕ್ಕೆ ಬೆಂಬಲ

• ಚಿಕ್ಕಮಗಳೂರು: ರಾಹುಲ್ ಗಾಂಧಿ ನೇತೃತ್ವದಲ್ಲಿ ಎಐಸಿಸಿ ಹಮ್ಮಿಕೊಂಡಿರುವ ಛಾತ್ರೋನ್ ಕಿ ಗೊಂಜ್ ದೇಶವ್ಯಾಪಿ ವಿದ್ಯಾರ್ಥಿ ಆಂದೋಲನಕ್ಕೆ ಜಿಲ್ಲಾ ಕಾಂಗ್ರೆಸ್ ಸಂಪೂರ್ಣ ತಯಾರಿ ನಡೆಸಿದ್ದು, ವಿದ್ಯಾರ್ಥಿಗಳ ದನಿಯಾಗಿ ಅವರಿಗೆ ಆತ್ಮ ವಿಶ್ವಾಸ ತುಂಬುವ ನಿಟ್ಟಿನಲ್ಲಿ ಆಂದೋಲನ ಯಶಸ್ವಿಗೊಳಿಸುತ್ತೇವೆ ಎಂದು ಜಿಲ್ಲಾಕಾಂಗ್ರೆಸ್ ಅಧ್ಯಕ್ಷ ಡಾ.ಕೆ.ಪಿ.ಅಂಶುಮಂತ್ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಆಂದೋಲನವು ದೇಶದ ಪ್ರಮುಖ ನಗರಗಳಲ್ಲಿ ನಡೆಯಲಿದ್ದು, ರಾಹುಲ್‌ಗಾಂಧಿ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಕೇಂದ್ರ ಸರ್ಕಾರದ ಪರೀಕ್ಷಾ ವೈಫಲ್ಯತೆಯನ್ನು ಖಂಡಿಸಿ ಹಮ್ಮಿಕೊಂಡಿರುವ ಈ ಆಂದೋಲನ ಭವಿಷ್ಯದ ಆಸರೆಯನ್ನು ಕಳೆದುಕೊಂಡಿರುವ ಯುವ ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯಾಗಿದೆ ಎಂದರು.



ಈ ಬಾರಿ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಭಾರತದ ಪರೀಕ್ಷಾ ವ್ಯವಸ್ಥೆಯ ವೈಫಲ್ಯವಾಗಿದೆ. ಶಿಕ್ಷಣ ಸಚಿವಾಲಯ ಮತ್ತು ಎನ್‌ಟಿಎ ವಿದ್ಯಾರ್ಥಿಗಳಿಗೆ ದ್ರೋಹ ಬಗೆಯುತ್ತಿದೆ ಎಂದು ಆರೋಪಿಸಿದರು.

ಎನ್‌ಟಿಎ ಪರವಾಗಿ ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದ ವ್ಯಕ್ತಿಗೆ ಪ್ರಶ್ನೆ ಪತ್ರಿಕೆ ಸಿಕ್ಕಿದ್ದರೆ ಅದು ಕೇವಲ ಸೋರಿಕೆಯಲ್ಲ, ಸಾಂಸ್ಥಿಕ ಭದ್ರತಾ ವೈಫಲ್ಯ. ಪರೀಕ್ಷೆಯನ್ನು ರಕ್ಷಿಸಬೇಕಾಗಿದ್ದ ಎನ್‌ಟಿಎ ಇಂದು ಸ್ವತಃ ಪ್ರಶ್ನೆಗೊಳಗಾಗಿದೆ. ಕೇಂದ್ರ ಶಿಕ್ಷಣ ಸಚಿವರು ಎನ್‌ಟಿಎ ಹಿಂದೆ ಅಡಗಿಕೊಳ್ಳಲು ಸಾಧ್ಯವಿಲ್ಲ, ಮಾಧ್ಯಮವೊಂದರ ವರದಿ ಪ್ರಕಾರ ಕಳೆದ 10 ವರ್ಷದಲ್ಲಿ 89 ಶಂಕಿತ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳು ನಡೆದಿವೆ. ಇದರಿಂದ ಕನಿಷ್ಠ 6.5 ಕೋಟಿ ಅಭ್ಯರ್ಥಿಗಳು ಬಾಧಿತರಾಗಿದ್ದಾರೆ ಎಂದರು.

ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ನೈತಿಕ ಹೊಣೆ ಹೊತ್ತು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ಪರೀಕ್ಷಾ ವ್ಯವಸ್ಥೆಯನ್ನು ಸಂಪೂರ್ಣ ಸುಧಾರಿಸಬೇಕು. ನಿರ್ದಿಷ್ಟ ವಾರ್ಷಿಕ ಪರೀಕ್ಷೆ ಮತ್ತು ನೇಮಕಾತಿ ಕ್ಯಾಲೆಂಡರ್ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಗ್ಯಾರಂಟಿ ಪ್ರಾಕಾರದ ಜಿಲ್ಲಾಧ್ಯಕ್ಷ ಎಂ.ಸಿ. ಶಿವಾನಂದಸ್ವಾಮಿ, ತಾಲೂಕು ಅಧ್ಯಕ್ಷ ಮಲ್ಲೇಶಸ್ವಾಮಿ, ಎನ್‌ಎಸ್‌ಯುಐ ಅಧ್ಯಕ್ಷ ಶ್ರೀಕಾಂತ್, ಮುಖಂಡರಾದ ನಯಾಜ್, ತನೋಜ್ ನಾಯ್ಡು, ರೂಬಿನ್ ಮೊಸೆಸ್, ಹೇಮಣ್ಣ, ಶಬಾನ ಸುಲ್ತಾನ್, ಶಿವು ಹಿರೇಗೌಜ ಮತ್ತಿತರರಿದ್ದರು.

ಜು.5ರಂದು ರನ್ ಮಲೆನಾಡು-2026

• ಶಿವಮೊಗ್ಗ : ರನ್ ಮಲೆನಾಡು-2026 ಎಂಬ ಬೃಹತ್ ಮ್ಯಾರಥಾನ್ ಕಾರ್ಯಕ್ರಮ ಜು.5ರಂದು ಹಮ್ಮಿಕೊಳ್ಳಲಾಗಿದೆ ಎಂದು ಫೌಂಡೇಷನ್ ಸಂಸ್ಥಾಪಕ ಡಾ.ಶರತ್ ಮರಿಯಪ್ಪ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಶರತ್ ಮರಿಯಪ್ಪ ಫೌಂಡೇಷನ್ ವತಿಯಿಂದ ಆಯೋಜನೆ ಮಾಡಿದ್ದು, ಅಂದು ಬೆಳಗ್ಗೆ 6 ಗಂಟೆಗೆ ನೆಹರೂ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ಆರಂಭವಾಗಲಿದೆ. ಮಾಜಿ ಸಚಿವರಾದ ಮಧುಬಂಗಾರಪ್ಪ, ಸಂತೋಷ್‌ಲಾಡ್, ಮುಖಂಡ ಆರ್.ಎಂ. ಮಂಜುನಾಥ್ ಗೌಡ, ಡಿಸಿಸಿ ಅಧ್ಯಕ್ಷ ಆರ್.ಪ್ರಸನ್ನಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಓಟದಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ಸುಮಾರು 2000 ಸಸಿಗಳನ್ನು ಉಚಿತವಾಗಿ ನೀಡಲಾಗುವುದು. ಇದಕ್ಕೆ ನೋಂದಣಿ ಅಗತ್ಯವಿದ್ದು, ಮೊದಲ 2000 ನೋಂದಾಯಿತರಿಗೆ ಉಚಿತ ಟೀಶರ್ಟ್, ಪ್ರಮಾಣಪತ್ರ ನೀಡಲಾಗುವುದು ಎಂದರು.

ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್ನಿನ ಉದಯಕುಮಾರ್ ಮಾತನಾಡಿ, ಈ ಸ್ಪರ್ಧೆಗಳು ಐದು ವಿಭಾಗಗಳಲ್ಲಿ ನಡೆಯಲಿವೆ. 16 ವರ್ಷದೊಳಗಿನ ಬಾಲಕ-ಬಾಲಕಿಯರಿಗೆ 20 ವರ್ಷದ ಬಾಲಕ-ಬಾಲಕಿಯರಿಗೆ ಕ್ರಮವಾಗಿ 3 ಕಿ.ಮೀ. ಹಾಗೂ 5 ಕಿ.ಮೀ. ಓಟದ ಸ್ಪರ್ಧೆಯಿದ್ದು, ಎರಡೂ ವಿಭಾಗಗಳಲ್ಲಿ ತಲಾ 3 ಬಹುಮಾನಗಳನ್ನು ನೀಡಲಾಗುತ್ತದೆ. ಪುರುಷ ಮತ್ತು ಮಹಿಳಾ ವೃತ್ತಿಪರರಿಗೆ 10 ಕಿ.ಮೀ. ಓಟದ ಸ್ಪರ್ಧೆ ಇದ್ದು, ಪ್ರಥಮ 10,000, ದ್ವಿತೀಯ 7,000 ಹಾಗೂ ತೃತೀಯ 5000 ರೂ. ಬಹುಮಾನ ನೀಡಲಾಗುತ್ತದೆ. ಪುರುಷ ಮತ್ತು ಮಹಿಳಾ ಸಾರ್ವಜನಿಕ ವಿಭಾಗದಲ್ಲಿ 5 ಕಿ.ಮೀ. ಸ್ಪರ್ಧೆ ಏರ್ಪಡಿಸಿದ್ದು ಇದರಲ್ಲಿಯೂ ಕೂಡ 5,000, 3,000, 2,000 ರೂ. ನಗದು ಬಹುಮಾನ ನೀಡಲಾಗುವುದು. ಈ ವರ್ಷ ವಿಶೇಷವಾಗಿ ದಂಪತಿಗಳಿಗಾಗಿ 3 ಕಿ.ಮೀ. ಓಟದ ಸ್ಪರ್ಧೆ ಏರ್ಪಡಿಸಿದ್ದು, ವಿಜೇತರಿಗೆ ಟ್ರೋಫಿ ಹಾಗೂ ವಿಶೇಷ ಉಡುಗೊರೆ ನೀಡಲಾಗುವುದು. ನೋಂದಣಿಗೆ ಹಾಗೂ ಹೆಚ್ಚಿನ ವಿವರಗಳಿಗೆ ಮೊ. 8971397714, 8892325558, 8660461910ರಲ್ಲಿ ಸಂಪರ್ಕಿಸುವಂತೆ ಕೋರಿದರು.

ಕೆಲಸ ಪಡೆಯುವ ಸಂಸ್ಥೆಗಳಿಗೆ ಡಿಸಿ ಪ್ರಭುಲಿಂಗ ಕವಳಿಕಟ್ಟಿ ಸೂಚನೆ

ಸ್ವಚ್ಛತಾ ಕಾರ್ಮಿಕರಿಗೆ ಗುರುತಿನ ಚೀಟಿ ನೀಡಿ

• ಶಿವಮೊಗ್ಗ : ಸ್ವಚ್ಛತಾ ಕಾರ್ಮಿಕರಿಗೆ ಕೆಲಸ ಪಡೆಯುತ್ತಿರುವ ಸಂಸ್ಥೆಗಳು ಗುರುತಿನ ಚೀಟಿ ಕಡ್ಡಾಯ ನೀಡಬೇಕು ಎಂದು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಸಫಾಯಿ ಕರ್ಮಚಾರಿಗಳ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನಗರಸಭೆ, ಪಾಲಿಕೆ ಹೊರತುಪಡಿಸಿ ಸ್ವಚ್ಛತಾಗಾರರಿಗೆ ಬೇರೆಡೆ ಗುರುತಿನ ಚೀಟಿ ನೀಡುತ್ತಿಲ್ಲವೆಂಬ ದೂರುಗಳಿವೆ. ಜಿಲ್ಲೆಯ ವಿವಿಧ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ವಚ್ಛತಾಗಾರರಿಗೆ ಆಯಾ ಸಂಸ್ಥೆಯ ಮುಖ್ಯಸ್ಥರೇ ಗುರುತಿನ ಚೀಟಿ ನೀಡಬೇಕು. ಇದರಿಂದ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಹಾಗೂ ಸರ್ಕಾರದ ವಿವಿಧ ಸೌಲಭ್ಯ ಪಡೆಯಲು ಅನುಕೂಲವಾಗುತ್ತದೆ ಎಂದರು.

ಜಿಲ್ಲೆಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಪೌರ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಶಿಕ್ಷಣ, ಶಾಲಾ ದಾಖಲಾತಿ, ಉದ್ಯೋಗ ಮತ್ತು ಇತರೆ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಕೌಶಲ್ಯಾಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಸಮಾಜ ಕಲ್ಯಾಣ ಇಲಾಖೆಯು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳಿಗೆ ಮಾಹಿತಿ ನೀಡಬೇಕು. ಈ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಮುಖ್ಯಸ್ಥರು ತಮ್ಮ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಬೇಕು. ಇಂತಹ ಜಾಗೃತಿ ಕಾರ್ಯಕ್ರಮಕ್ಕೆ ಗೈರಾದ ಅಧಿಕಾರಿ-ನೌಕರರಿಗೆ ನೋಟಿಸ್ ನೀಡುವಂತೆ ಸೂಚನೆ ನೀಡಿದರು.



ಪೌರ ಕಾರ್ಮಿಕರ ಆರೋಗ್ಯದ ಬಗ್ಗೆ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಬೇಕು. ವೇತನ ಖಾತೆಗಳಿಗೆ ಅಪಘಾತ ವಿಮೆ ಸಿಗುವ ಪಿಎಂಜೆಜೆಬಿವೈ ಮತ್ತು ಪಿಎಂಎಸ್‌ಬಿವೈ ಪಾಲಿಸಿಗಳನ್ನು ಕಡ್ಡಾಯವಾಗಿ ಮಾಡಿಸಬೇಕು. ಹೊರ ಗುತ್ತಿಗೆ ನೌಕರರಿಗೆ ರೂ.20 ಲಕ್ಷದವರೆಗೆ ಅಪಘಾತ ವಿಮೆ ಮೊತ್ತ ಬರುವಂತಹ, ವಾರ್ಷಿಕವಾಗಿ 1000 ರೂ. ಪಾವತಿಸುವ ವಿಮೆ ಮಾಡಿಸುವಂತೆ ತಿಳಿಸಿದರು.

ಖಾಸಗಿ ಬಸ್ ನಿಲ್ದಾಣ ಸೇರಿದಂತೆ ಹಲವೆಡೆ ಗುತ್ತಿಗೆದಾರರು ಹೆಚ್ಚಿನ ಕಾರ್ಮಿಕರನ್ನು ನೇಮಿಸಿಕೊಂಡು ಕಡಿಮೆ ಕಾರ್ಮಿಕರಿಂದ ಹೆಚ್ಚಿನ ಕೆಲಸವನ್ನು ತೆಗೆದುಕೊಳ್ಳುತ್ತಿರುವ ಬಗ್ಗೆ ನಾಮ ನಿರ್ದೇಶಿತ ಸದಸ್ಯರು ಗಮನಕ್ಕೆ ತಂದಿದ್ದಾರೆ. ಈ ರೀತಿ ಆಗದಂತೆ ಕ್ರಮ ವಹಿಸಬೇಕು. ಇಲ್ಲವಾದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಈ ಬಗ್ಗೆ ಪರಿಶೀಲಿಸುವಂತೆ ತಿಳಿಸಿದರು.

ಮೆಗ್ಗಾನ್ ಆಸ್ಪತ್ರೆಯಲ್ಲಿ ಆರೋಗ್ಯ ಸಮಸ್ಯೆ ಕಾರಣಕ್ಕೆ ದೀರ್ಘ ರಜೆ ತೆಗೆದುಕೊಂಡವರು ಮತ್ತಿತರೆ ಕಾರಣಕ್ಕೆ ಕಾರ್ಮಿಕರನ್ನು ಕೆಲಸಕ್ಕೆ ತೆಗೆದು ಬೇರೆಯವರನ್ನು ನೇಮಿಸುವ ಬಗ್ಗೆ ಸದಸ್ಯರು ಗಮನಕ್ಕೆ ತಂದಿದ್ದಾರೆ. ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಖುದ್ದು ಮೆಗ್ಗಾನ್ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿ ಕೆಲಸದಿಂದ ತೆಗೆದುಹಾಕಿದವರ ವರದಿ ನೀಡುವಂತೆ ಸೂಚಿಸಿದರು.

8 ಗಂಟೆ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ಪಾವತಿಯನ್ನು ಮಾಡುವಂತೆ ಹಾಗೂ ಪರಿಷ್ಕೃತ ವೇತನವನ್ನು ಕಾರ್ಮಿಕರಿಗೆ ನೀಡುವಂತೆ ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್, ಅಪರ ಜಿಲ್ಲಾಧಿಕಾರಿ ಅಭಿಷೇಕ್ ವಿ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಡಿ.ಮಲ್ಲೇಶಪ್ಪ, ನಾಮನಿರ್ದೇಶಿತ ಸದಸ್ಯರಾದ ಚಿನ್ನಯ್ಯ, ಭಾನುಪ್ರಕಾಶ್ ಹಾಜರಿದ್ದರು.

ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ವ್ಯಂಗ್ಯ ಚಿತ್ರಕಾರ ಡಾ.ಹೆಚ್.ಬಿ. ಮಂಜುನಾಥ ಅಭಿಪ್ರಾಯ

ಮಾಧ್ಯಮಗಳು ರಚನಾತ್ಮಕ ವರದಿಗಳಿಗೆ ಮಹತ್ವ ಕೊಡಬೇಕು

• **ದಾವಣಗೆರೆ:** ಮಾಧ್ಯಮಗಳು ರೋಚಕ ವರದಿಗಳಿಗಿಂತಲೂ ರಚನಾತ್ಮಕ ವರದಿಗಳಿಗೆ ಮಹತ್ವ ಕೊಡಬೇಕು ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ವ್ಯಂಗ್ಯ ಚಿತ್ರಕಾರ ಡಾ.ಹೆಚ್.ಬಿ.ಮಂಜುನಾಥ ಅಭಿಪ್ರಾಯ ಪಟ್ಟರು.

ನಗರದ ಲಕ್ಷ್ಮೀ ವೃತ್ತದಲ್ಲಿರುವ ಹರ್ಡೇಕರ್ ಮಂಜಪ್ಪ ಪ್ರತಿಮೆ ಬಳಿ ಬುಧವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಕರ್ನಾಟಕ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಮಾಧ್ಯಮ ವರದಿಗಳು ಓದುಗರನ್ನು, ನೋಡುಗರನ್ನು, ಕೇಳುಗರನ್ನು ಕೆರಳಿಸುವಂತೆ ಇರಬಾರದು. ಬದಲಿಗೆ ಮನಸ್ಸು ಅರಳಿಸುವಂತೆ ಇರಬೇಕು. ಮುದ್ರಣ ಮಾಧ್ಯಮಗಳಾಗಲಿ ದೃಶ್ಯ ಮಾಧ್ಯಮಗಳಾಗಲಿ ಸಮಾಜ ಮತ್ತು ಸರ್ಕಾರದ ನಡುವೆ ಸಂಪರ್ಕ ಸೇತುವೆ ಇದ್ದಂತೆ. ಜನರ ನಿರೀಕ್ಷೆ ಮತ್ತು ಅಭಿಪ್ರಾಯಗಳನ್ನು ಸರ್ಕಾರಕ್ಕೆ ಮುಟ್ಟಿಸುವಲ್ಲಿ, ಸರ್ಕಾರದ ನಿರ್ಧಾರಗಳನ್ನು ಜನತೆಗೆ ತಿಳಿಸುವಲ್ಲಿ ಪಕ್ಷಪಾತ ಮಾಡಬಾರದು ಎಂದು ಅವರು ಸಲಹೆ ನೀಡಿದರು.



1843ರಂದು ಜುಲೈ 7ರಂದು ಮಂಗಳೂರು ಸಮಾಚಾರ ಎಂಬ ಕರ್ನಾಟಕದ ಮೊಟ್ಟಮೊದಲ ಪಾಕ್ಷಿಕ ಪತ್ರಿಕೆಯು ಮತ ಪ್ರಚಾರಕ್ಕಾಗಿ ಹರ್ಮನ್ ಮೋಗ್ಲಿಂಗ್ ಎಂಬುವರಿಂದ ಆರಂಭವಾಯಿತು. ಕನ್ನಡದ ಮೊಟ್ಟ ಮೊದಲ ದಿನಪತ್ರಿಕೆಯಾಗಿ ನಿಜವಾದ ಪತ್ರಿಕೋದ್ಯಮ ಆರಂಭವಾಗಿದ್ದು 1888ರಲ್ಲಿ ಮಂಗಳೂರಿನ ನರಸಿಂಗರಾಯರ ಸೂರ್ಯೋದಯ ಪ್ರಕಾಶಿಕ ಎಂಬ ಪತ್ರಿಕೆಯಿಂದ. ದಾವಣಗೆರೆಯಲ್ಲಿ 1906ರಲ್ಲಿ ಧನುರ್ಧಾರಿ ಎಂಬ ಪತ್ರಿಕೆಯ ಮೂಲಕ ಪತ್ರಿಕೋದ್ಯಮ ಆರಂಭ ಮಾಡಿದವರು ಹರ್ಡೇಕರ್ ಮಂಜಪ್ಪನವರು. ಭಾರತದಲ್ಲಿ ಮೊಟ್ಟಮೊದಲ ಪತ್ರಿಕೆ 1780ರಲ್ಲಿ ಕೊಲ್ಕತ್ತಾದ ಜೇಮ್ಸ್ ಆಗಸ್ಟಸ್ ಹಿಕ್ಕಿ ಎಂಬುವರಿಂದ ಬೆಂಗಾಲ್ ಗೆಜೆಟ್ ಎಂಬುದಾಗಿ ಆರಂಭವಾದರೂ, 1907ರಲ್ಲಿ ಮಾಡ್ರನ್ ರಿವ್ಯೂ ಪತ್ರಿಕೆ ಆರಂಭಿಸಿದ ರಮಾನಂದ ಚಟರ್ಜಿಯವರು ಭಾರತದ ಪತ್ರಿಕಾ ರಂಗದ ಪಿತಾಮಹರಾಗಿದ್ದಾರೆ ಎಂದು ಅವರು ವಿವರಿಸಿದರು.

ನಮ್ಮ ರಾಜ್ಯದಲ್ಲಿ ಬ್ರಿಟಿಷರು 1908ರಲ್ಲಿ ಕರಾಳ ಪತ್ರಿಕಾ ಶಾಸನ ತಂದು ಪತ್ರಿಕೆಗಳೆಲ್ಲ ಸ್ತಬ್ಧವಾಗುವಂತೆ ಮಾಡಿದ್ದರು. 1918ರಲ್ಲಿ ಮೈಸೂರಿನ ದಿವಾನರಾಗಿ ಸರ್ ಎಂ.ವಿಶ್ವೇಶ್ವರಾಯರು ಪತ್ರಿಕೆಗಳ ಪುನರಾರಂಭಕ್ಕೆ ಕಾರಣವಾಗಿದ್ದು ಸ್ಮರಣೀಯರಾಗಿದ್ದಾರೆ. ಪ್ರತಿಯೊಬ್ಬ ಪತ್ರಕರ್ತರು ಹಾಗೂ ದೃಶ್ಯ ಮಾಧ್ಯಮದವರು ತಮ್ಮ ಆತ್ಮಾವಲೋಕನ ಮಾಡಿಕೊಳ್ಳಲು ಪತ್ರಿಕಾ ದಿನಾಚರಣೆಯು ವೇದಿಕೆಯಾಗಬೇಕು ಎಂದು ಅವರು ನುಡಿದರು.

ಮಹಾನಗರ ಪಾಲಿಕೆ ಆಯುಕ್ತ ಡಾ.ಎಂ.ಮಹಾಂತೇಶ್ ಮಾತನಾಡಿ, ಆಡಳಿತ ವ್ಯವಸ್ಥೆಗೆ ಜನಾಭಿಪ್ರಾಯ ತಿಳಿಸಲು ಪತ್ರಿಕಾ ಮಾಧ್ಯಮಗಳು ಸೂಕ್ತ ಸಾಧನಗಳಾಗಿವೆ. ಬಹುತೇಕ ಜನರಿಗೆ ಬೆಳಗಾಗುತ್ತಲೇ ಪತ್ರಿಕೆ ಓದದಿದ್ದರೆ ಸಮಾಧಾನವೇ ಇರುವುದಿಲ್ಲ ಎಂದರು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಪತ್ರಿಕೆಗಳು ದೈನಂದಿನ ವಿದ್ಯಮಾನಗಳ ಅಂಕು-ಡೊಂಕುಗಳ ಕನ್ನಡಿ ಇದ್ದಂತೆ. ಯುವಜನತೆ ಪತ್ರಿಕಾ ರಂಗದಲ್ಲಿ ತೊಡಗಿಸಿಕೊಳ್ಳಬೇಕು. ಪತ್ರಕರ್ತರಿಗೆ ಸರ್ಕಾರದಿಂದ ಸೂಕ್ತ ಸವಲತ್ತುಗಳು ದೊರೆಯಬೇಕು ಎಂದು ಆಶಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಎನ್.ವಿ.ಬದರಿನಾಥ್ ಸ್ವಾಗತಿಸಿದರು. ವೇದಮೂರ್ತಿ ವಂದನಾರ್ಪಣೆ ಮಾಡಿದರು. ಹಿರಿಯ ಪತ್ರಕರ್ತರಾದ ಬಕ್ಕೇಶ ನಾಗನೂರು, ವೀರೇಶ್, ಜೈಮುನಿ, ಚನ್ನಬಸವ ಶೀಲವಂತ್, ಕೆ.ಜಿ.ಶಿವಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹಲವರಿಂದ ಲಕ್ಷಾಂತರ ರೂ. ವಸೂಲಿ | ಐವರ ವಿರುದ್ಧ ಪ್ರಕರಣ ದಾಖಲು

ಸರ್ಕಾರಿ ಇಲಾಖೆಗಳಲ್ಲಿ ಉದ್ಯೋಗ ಕೊಡಿಸುವುದಾಗಿ ವಂಚನೆ

• **ಶಿವಮೊಗ್ಗ:** ಸರ್ಕಾರಿ ಇಲಾಖೆಗಳಲ್ಲಿ ನೇರ ನೇಮಕಾತಿ ಮೂಲಕ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಹಲವರಿಂದ ಲಕ್ಷಾಂತರ ರೂ. ಹಣ ಪಡೆದು, ನಕಲಿ ನೇಮಕಾತಿ ಆದೇಶಗಳನ್ನು ನೀಡಿ ವಂಚಿಸಿರುವ ಆರೋಪದಡಿ ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ಐವರ ವಿರುದ್ಧ ಪ್ರಕರಣ ದಾಖಲಾಗಿದೆ.

ಭದ್ರಾವತಿಯ ಹೊಸಮನೆ, ಕುವೆಂಪುನಗರ ನಿವಾಸಿ ರೂಪಾ ರವೀಂದ್ರ ರಾವ್ ನೀಡಿದ ದೂರಿನ ಮೇರೆಗೆ, ಸಚಿನ್, ಸ್ವಪ್ನಾ, ಸುಜಾತಾ, ಕೇಶವ ಹಾಗೂ ಶಾಲಿನಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

2025ರ ಸೆಪ್ಟೆಂಬರ್ ತಿಂಗಳಲ್ಲಿ ತನ್ನ ಸ್ನೇಹಿತೆ ಮೂಲಕ ಶಿವಮೊಗ್ಗದ ದುರ್ಗಿಗುಡಿ 3ನೇ ಕ್ರಾಸ್‌ನಲ್ಲಿರುವ ಸಚಿನ್ ಅವರ ಕಚೇರಿ ಪರಿಚಯವಾಯಿತು. ಸರ್ಕಾರಿ ಉದ್ಯೋಗಗಳಿಗೆ ತರಬೇತಿ ನೀಡಿ ಉದ್ಯೋಗ ಕೊಡಿಸುವುದಾಗಿ ಭರವಸೆ ನೀಡಲಾಗಿದೆ. ಒಬ್ಬರಿಗೆ 5.50 ಲಕ್ಷ ಹಣ ನೀಡಬೇಕೆಂದು ತಿಳಿಸಿದ್ದು, ತನ್ನ ಮಗನಿಗೆ ಎಸ್‌ಡಿಎ ಹುದ್ದೆ ಕೊಡಿಸುವುದಾಗಿ ನಂಬಿಸಲಾಗಿತ್ತು ಎಂದು ತಿಳಿಸಿದ್ದಾರೆ.

12-09-2025ರಂದು ತಮ್ಮ ಕೆನರಾ ಬ್ಯಾಂಕ್ ಖಾತೆಯಿಂದ ಸಚಿನ್ ಅವರ ಖಾತೆಗೆ 1.50 ಲಕ್ಷ ಜಮಾ ಮಾಡಿದ್ದೇವೆ. ಮತ್ತೊಮ್ಮೆ 1.50 ಲಕ್ಷದ ಚೆಕ್ ನೀಡಿದ್ದು, ಬಳಿಕ 90 ಸಾವಿರ ರೂ. ಮತ್ತೊಂದು ಕೆನರಾ ಬ್ಯಾಂಕ್ ಖಾತೆಗೆ ವರ್ಗಾಯಿಸಿದ್ದಾರೆ. ಜೊತೆಗೆ ಫೋನ್ ಪೇ ಹಾಗೂ ನಗದು ರೂಪದಲ್ಲೂ ಹಣ ಪಾವತಿಸಿದ್ದು, ಒಟ್ಟಾರೆ 8,50,330 ರೂ. ನೀಡಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ನಂತರ ಸುಜಾತಾ ಮತ್ತು ಸ್ವಪ್ನಾ ಎಂಬವರು ತರಬೇತಿ ನೀಡುತ್ತಿದ್ದು, ಅಭ್ಯರ್ಥಿಗಳ ಹಾಜರಾತಿ ಪಡೆದು ಹಣ ಸಂಗ್ರಹಿಸುತ್ತಿದ್ದರು. ಕೇಶವ ಎಂಬಾತ ಎಫ್‌ಡಿಎ ಹುದ್ದೆಯ ಪರೀಕ್ಷೆ ಹೇಗೆ ಬರೆಯಬೇಕು ಎಂಬುದರ ಕುರಿತು ಮಾಹಿತಿ ನೀಡುತ್ತಿದ್ದ. ಶಾಲಿನಿ ಅವರು ಡಿಸಿ ಕಚೇರಿಯಲ್ಲಿ ಆರ್‌ಐ ಹುದ್ದೆ ಕೊಡಿಸುವುದಾಗಿ ಹೇಳಿದ್ದರು ಎಂದು ಆರೋಪಿಸಲಾಗಿದೆ.

ಇದಾದ ಬಳಿಕ ದೂರುದಾರರ ಮಗನಿಗೆ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಉದ್ಯೋಗ ದೊರೆತಿದೆ ಎಂದು ತೋರಿಸಿ, ಸರ್ಕಾರಿ ಲೋಗೋ ಹೊಂದಿರುವ ನಕಲಿ ನೇಮಕಾತಿ ಆದೇಶವನ್ನು 24-04-2026ರಂದು ನೀಡಲಾಗಿದೆ. ನಂತರ ಜಿಲ್ಲಾಧಿಕಾರಿ ಕಚೇರಿಗೆ ಕರೆಸಿದರೂ ಕೆಲಸಕ್ಕೆ ಸೇರಿಸದೇ ವಿವಿಧ ಕಾರಣಗಳನ್ನು ಹೇಳಿ ಕಾಲಹರಣ ಮಾಡಲಾಗಿದೆ ಎಂದು ದೂರಲಾಗಿದೆ.

ಸಚಿನ್ ಅವರ ದುರ್ಗಿಗುಡಿ ಕಚೇರಿಗೆ ತೆರಳಿದಾಗ, ತಮ್ಮಂತೆಯೇ ಅನೇಕ ಮಂದಿ ಉದ್ಯೋಗದ ನಿರೀಕ್ಷೆಯಲ್ಲಿ ಹಣ ನೀಡಿ ವಂಚನೆಗೊಳಗಾಗಿರುವುದು ಗೊತ್ತಾಗಿದೆ. ಬಳಿಕ ಪರಸ್ಪರ ಮಾಹಿತಿ ಹಂಚಿಕೊಂಡಾಗ ಹಲವರಿಂದ ಉದ್ಯೋಗದ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಹಣ ಪಡೆದಿರುವುದು ಬೆಳಕಿಗೆ ಬಂದಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಹಣ ನೀಡಿ ವಂಚನೆಗೊಳಗಾದವರ ವಿವರ

ವಂಚನೆಗೊಳಗಾದವರಲ್ಲಿ ಮಲ್ಲಾ ಎಸ್.ಎಸ್. (3.30 ಲಕ್ಷ), ವಿಜಯನಾಥ ಎಲ್.ಎಸ್. (1.27 ಲಕ್ಷ), ವರುಣ್ ಆರ್. (3.50 ಲಕ್ಷ), ಸೋಮು (2.50 ಲಕ್ಷ), ಗಾಯತ್ರಿ ಎಸ್. (2.45 ಲಕ್ಷ), ಅಭಿನಯ (3 ಲಕ್ಷ), ವರುಣ್ ಎಸ್. (2.25 ಲಕ್ಷ), ಮೋಹನ್ (2.50 ಲಕ್ಷ), ಭಾಗ್ಯಶ್ರೀ (3.50 ಲಕ್ಷ), ಸುದೀಪ್ (1.50 ಲಕ್ಷ), ಪವಿತ್ರಾ (2.20 ಲಕ್ಷ), ಎಂ.ಜಿ. ಮಂಜುನಾಥ್ (4.50 ಲಕ್ಷ), ಕುಶಾಲ್ ಆರ್.ವಿ. (3.10 ಲಕ್ಷ), ನಯನ್ ಕುಮಾರ್ (3.80 ಲಕ್ಷ), ಕಿರಣ್ ಜಿ.ವೈ. (1.80 ಲಕ್ಷ), ಹರೀಶ್ ಡಿ. (3 ಲಕ್ಷ), ತೇಜಸ್ (5.45 ಲಕ್ಷ), ಹೇಮಂತ್ ಕುಮಾರ್ ಡಿ. (2 ಲಕ್ಷ), ಅಂಬುಳ (3.03 ಲಕ್ಷ), ಸುರೇಶ್ ಆರ್. (2 ಲಕ್ಷ), ಹರ್ಷ ಪಿ. (1.50 ಲಕ್ಷ), ಜೀವಿತಾ (3 ಲಕ್ಷ), ಗಣೇಶ್ ಕೆ.ಎಸ್. (2.95 ಲಕ್ಷ), ಚೈತ್ರಾ (2.40 ಲಕ್ಷ), ಪ್ರೇಮಾ ಬಿ. (2.50 ಲಕ್ಷ), ಸಚಿನ್ ಬಿ.ಎಸ್. (2.50 ಲಕ್ಷ), ಪ್ರಶಾಂತ್ ಕೆ. (3.35 ಲಕ್ಷ), ಪಲ್ಲವಿ (3.50 ಲಕ್ಷ), ಅಭಿಷೇಕ್ (3.20 ಲಕ್ಷ), ಕಾವ್ಯಶ್ರೀ(1.70 ಲಕ್ಷ), ಸತೀಶ್ (1.50 ಲಕ್ಷ), ಸತ್ಯಮೂರ್ತಿ (3.50 ಲಕ್ಷ), ಚಂದನ್ ಪಾಂಡೆ (2,18,700), ಗುರುಪುತ್ರ ಚಂದನ್ ವಾರ್ (1.95 ಲಕ್ಷ), ಶ್ರೀಶ (3.25 ಲಕ್ಷ), ಕಾರ್ತಿಕ್ ಡಿ.ಕೆ. (3.80 ಲಕ್ಷ), ಹೇಮಂತ್ ಎಂ. (3.50 ಲಕ್ಷ), ಚಂದ್ರ (1.20 ಲಕ್ಷ), ಹೇಮಂತ್ (3 ಲಕ್ಷ), ವಿಶಾಲ್ (2.90 ಲಕ್ಷ), ಸಂಜನಾ (2.80 ಲಕ್ಷ), ಸುರೇಶ್ (1.65 ಲಕ್ಷ), ಗಾಯತ್ರಿ (2 ಲಕ್ಷ), ಸಿಂಧು (4.90 ಲಕ್ಷ), ಅಜಯ್ ಕುಮಾರ್ (1.20 ಲಕ್ಷ), ಸೌಮ್ಯ ಸುರೇಶ್ (3 ಲಕ್ಷ), ಸತ್ಯವೇಲು (1.95 ಲಕ್ಷ) ಹಾಗೂ ಮುರುಗನ್ (1.95 ಲಕ್ಷ) ಸೇರಿ ಹಲವರಿಂದ ಹಣ ಪಡೆದು ಉದ್ಯೋಗ ಕೊಡಿಸುವುದಾಗಿ ನಂಬಿಸಿ ವಂಚಿಸಿರುವುದಾಗಿ ಆರೋಪಿಸಲಾಗಿದೆ.

ಶಶಿ ಹುಲಿಕುಂಟೆಮಠ ಅವರನ್ನು ಗೆಲ್ಲಿಸಲು ಕಾಂಗ್ರೆಸ್ ಸಂಕಲ್ಪ

• **ದಾವಣಗೆರೆ:** ಜಿಲ್ಲೆಯ ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲ್ಲೂಕು ಒಳಗೊಳ್ಳುವ ಐದು ಜಿಲ್ಲೆಗಳ ವ್ಯಾಪ್ತಿಯ ಆಗ್ನೇಯ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶಶಿ ಹುಲಿಕುಂಟೆಮಠ ಅವರನ್ನು ಗೆಲ್ಲಿಸಲು ಜಿಲ್ಲಾ ಕಾಂಗ್ರೆಸ್ ಸಂಕಲ್ಪಿಸಿದೆ.

ನಗರದ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಇತ್ತೀಚೆಗೆ ನಡೆದ ಚುನಾವಣಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಪಕ್ಷದ ಮುಖಂಡರು ಆಗ್ನೇಯ ಪದವೀಧರರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲುವಿಗೆ ಒಟ್ಟಾಗಿ ಕಾರ್ಯ ನಿರ್ವಹಿಸೋಣ. ಅದೇ ರೀತಿ ದಾವಣಗೆರೆ ಜಿಲ್ಲಾದ್ಯಂತ ಪ್ರಾರಂಭವಾಗಿರುವ ಮತದಾರರ ವಿಶೇಷ ಪಟ್ಟಿ ಪರಿಷ್ಕರಣೆಯಲ್ಲಿ ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸೋಣ ಎಂದರು.



ಆಗ್ನೇಯ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆಮಠ ಮಾತನಾಡಿ, ಐದು ಜಿಲ್ಲೆಗಳನ್ನೊಳಗೊಂಡ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂದೂ ಸಹ ಗೆಲುವು ಸಾಧಿಸಿಲ್ಲ, ಆದರೆ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸುವುದು ಶತಸಿದ್ಧ. ಈಗಾಗಲೇ 1.70 ಲಕ್ಷ ಪದವೀಧರರು ನೋಂದಣಿಯಾಗಿದ್ದು, ಇನ್ನೂ 20 ಸಾವಿರದಷ್ಟು ಪದವೀಧರರು ನೋಂದಣಿ ಆಗಲಿದ್ದಾರೆ. ದಾವಣಗೆರೆ ತಾಲ್ಲೂಕೊಂದರಲ್ಲೇ 22 ಸಾವಿರ ಪದವೀಧರ ಮತದಾರರಿದ್ದು, ಅವರೆಲ್ಲರ ಮತ ಕಾಂಗ್ರೆಸ್ ಪಕ್ಷಕ್ಕೆ ದಕ್ಕಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾಬಾಯಿ ಮಾಲತೇಶ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಮುಖಂಡರಾದ ಎಸ್.ಮಲ್ಲಿಕಾರ್ಜುನ್, ಎ.ನಾಗರಾಜ್, ಅಯೂಬ್ ಪೈಲ್ವಾನ್, ಜೆ.ಸಿ.ನಿಂಗಪ್ಪ, ಕೆ.ಜಿ.ಶಿವಕುಮಾರ್, ಅನೀಸ್ ಪಾಷಾ, ಶಿರಮಗೊಂಡನಹಳ್ಳಿ ರುದ್ರೇಶ್, ನಂಜಾನಾಯ್ಕ, ಟಿ.ರಮೇಶ್ ಮತ್ತಿತರರು ಸಭೆಯಲ್ಲಿ ಹಾಜರಿದ್ದರು.

ಎಂ.ಪಿ. ಮಾಲತೇಶ್ ನೇಮಕ್ಕೆ ಒತ್ತಾಯ

• **ಶಿವಮೊಗ್ಗ :** ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರ ಅಧಿಕಾರ ಅವಧಿ ಮುಗಿಯುತ್ತಿದ್ದು, ತೆರವಾಗುವ ಆ ಸ್ಥಾನಕ್ಕೆ ನೂತನ ಅಧ್ಯಕ್ಷರನ್ನಾಗಿ ಹಾಲಿ ನಿರ್ದೇಶಕ ಎಂ.ಪಿ. ಮಾಲತೇಶ್ ಅವರನ್ನು ನೇಮಿಸುವಂತೆ ವಿಪ್ರ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ವೆಂಕಟೇಶ್‌ರಾವ್ ಒತ್ತಾಯಿಸಿದರು.

ಶ್ರೀಯುತರು ಮಂಡಳಿಯಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದು, ಆರ್ಥಿಕವಾಗಿ ಹಿಂದುಳಿದ ವಿಪ್ರರಿಗೆ ಮತ್ತು ವಿದ್ಯಾರ್ಥಿಗಳಿಗೆ ವಿವಿಧ ರೀತಿಯಲ್ಲಿ ನೆರವಾಗಿದ್ದಾರೆ. ಮಂಡಳಿ ಸೇರಿದಂತೆ ಇತರೆ ಸಂಘಟನೆಗಳಿಂದ ಲಭ್ಯವಾಗುವ ನೆರವು ಕೊಡಿಸಿದ್ದಾರೆ. ಕಾರ್ಯಾಗಾರಗಳನ್ನು ನಡೆಸಿ ಮಾಹಿತಿ ನೀಡಿದ್ದಾರೆ ಎಂದರು.

ಬ್ರಾಹ್ಮಣ ಸಮುದಾಯದ ನಾಡಿ ಮಿಡಿತವನ್ನು ಬಲ್ಲವರಾಗಿರುವ ಮಾಲತೇಶ್, ಮುಂದಿನ ದಿನಗಳಲ್ಲಿ ಇನ್ನಷ್ಟು ಕೆಲಸ ಮಾಡುವ ವಿಶ್ವಾಸವಿದೆ. ವಿಪ್ರರ ಹಿತಾಸಕ್ತಿ ಕಾಯ್ದುಕೊಳ್ಳುವಲ್ಲಿ ನೆರವಾಗಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರವಾಸ ಮಾಡಿ ಸಂಘಟನೆಯಲ್ಲಿ ಸಕ್ರಿಯರಾಗಿದ್ದಾರೆ. ಹೀಗಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇವರಿಗೆ ಅಧ್ಯಕ್ಷತೆ ನೀಡುವಂತೆ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಿಪ್ರ ಸಮಾಜದ ಪ್ರಮುಖರಾದ ಎಂ.ಎಸ್. ಸುಂದರರಾಜ್, ಸುಮಿತ್ರಮ್ಮ, ನಟರಾಜಶಾಸ್ತ್ರಿ, ಉಮಾಶಂಕರ ಉಪಾಧ್ಯಾಯ, ನಾಗೇಶ್, ರಘುರಾಮ್, ಅಕ್ಷಯ್, ಗೋಪಾಲ್ ಎಸ್.ಜಿ., ಸುರೇಶ್ ರಾವ್ ನಾಡಿಗ್, ಚಂದ್ರಶೇಖರ್, ಸುಬ್ರಹ್ಮಣ್ಯ, ಕೋಟಿ ರಾಜು, ಸಂತೋಷ್ ಇದ್ದರು.

ಛತ್ರಪತಿ ಶಿವಾಜಿ ಪುತ್ಥಳಿ ನಿರ್ಮಾಣದ ಶಿಲಾನ್ಯಾಸ ನೆರವೇರಿಸಿದ ಶಾಸಕ ಬಿವೈವಿ

ಬಹುಸಂಖ್ಯಾತ ಹಿಂದೂಗಳನ್ನು ಒಗ್ಗೂಡಿಸಿದ ಶಿವಾಜಿ

• **ಶಿಕಾರಿಪುರ :** ಛತ್ರಪತಿ ಶಿವಾಜಿ ಮಹಾರಾಜರು ದೇಶದಲ್ಲಿನ ಬಹು ಸಂಖ್ಯಾತ ಹಿಂದೂಗಳನ್ನು ಒಗ್ಗೂಡಿಸುವ ಜತೆಗೆ ಯುವಪೀಳಿಗೆಯಲ್ಲಿ ಹೋರಾಟದ ಕಿಚ್ಚನ್ನು ಜಾಗೃತಗೊಳಿಸಿದ್ದು ಇದೇ ಮಾದರಿಯಲ್ಲಿ ಪ್ರಧಾನಿ ಮೋದಿ ಹಿಂದೂ ಗಳನ್ನು ಒಗ್ಗೂಡಿಸಿ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಛತ್ರಪತಿ ಶಿವಾಜಿ ಮಹಾ ರಾಜರಿಂದ ಪ್ರೇರಣೆಯಾಗಿದ್ದಾರೆ ಎಂದು ಶಾಸಕ ಬಿ.ವೈ. ವಿಜಯೇಂದ್ರ ತಿಳಿಸಿದರು.

ಪಟ್ಟಣದ ಶಿವಗಿರಿ ಮಹಾ ಸಂಸ್ಥಾನ ಮಠ ಹಾಗೂ ಶ್ರೀ ಶಿವಗಿರಿ ಮರಾಠ ಸಮಾಜ, ಶ್ರೀ ಶಿವಗಿರಿ ಚಾರಿಟೇಬಲ್ ಟ್ರಸ್ಟ್ ಮತ್ತು ತಾಲೂಕು ಮರಾಠ ಸಮಾಜ ವತಿಯಿಂದ ಶಿವಗಿರಿ ಪೆಟ್ರೋಲ್ ಬಂಕ್ ಮುಂಭಾಗ ಸೋಮವಾರ ನಡೆದ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿ ನಿರ್ಮಾಣದ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

ಶಿವಾಜಿ ಮಹಾರಾಜರು ದೇಶದ ಕೋಟ್ಯಂತರ ಹಿಂದೂಗಳ ಹೃದಯದಲ್ಲಿ ಬಲಿಷ್ಠ ರಾಷ್ಟ್ರ ನಿರ್ಮಾಣದ ಕನಸು ಬಿತ್ತಿ ಯುವ ಪೀಳಿಗೆಯಲ್ಲಿ ಹೋರಾಟದ ಕಿಚ್ಚನ್ನು ಜಾಗೃತಗೊಳಿಸಿದ್ದಾರೆ. ಬಲಿಷ್ಠ ನೌಕಾಪಡೆಗೆ ಛತ್ರಪತಿ ಶಿವಾಜಿ ಮಹಾರಾಜರ ಲಾಂಛನ ಅಳವಡಿಸಿ ಪ್ರಧಾನಿ ಮೋದಿ ಗೌರವ ಸಲ್ಲಿಸಿದ್ದಾರೆ ಎಂದು ತಿಳಿಸಿದರು.



ತಾಲೂಕಿನಲ್ಲಿ ಯಡಿಯೂರಪ್ಪನವರು 9 ಬಾರಿ ಶಾಸಕರಾಗಿದ್ದು ಈ ದಿಸೆಯಲ್ಲಿ ಮರಾಠ ಸಮಾಜದ ಬೆಂಬಲ ಪ್ರಮುಖ ವಾಗಿದೆ. ಅದೇ ರೀತಿ ಶ್ರೀಗಳು ಪ್ರತಿಯೊಬ್ಬರನ್ನು ಒಗ್ಗೂಡಿಸುವ ಕೆಲಸವಾಗಬೇಕಾಗಿದೆ. ಸಮಾಜದ ಮಧ್ಯೆ ವಿಷಬೀಜ ಬಿತ್ತುವ ಕೆಲಸವಾಗಬಾರದು. ಮರಾಠ ಸಮಾಜ ಒಗ್ಗೂಡಬೇಕು. ಬಾಂಧವ್ಯ ಬೆಳೆಸಬೇಕಾಗಿದೆ. ಯಡಿಯೂರಪ್ಪ ಮುಖ್ಯ ಮಂತ್ರಿಯಾದ ಅವಧಿಯಲ್ಲಿ ಚನ್ನಗಿರಿ ತಾಲೂಕಿನ ಹೊದಿಗೆರೆಯಲ್ಲಿ ಷಹಾಜಿ ಮಹಾರಾಜರ ಸಮಾಧಿ ಸ್ಥಳವನ್ನು 2 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ತಾಲೂಕಿನಲ್ಲಿ ಏತ ನೀರಾವರಿ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ, ಬಸ್ ನಿಲ್ದಾಣ, ಶಿಕ್ಷಣ ಕ್ಷೇತ್ರ, ಆರೋಗ್ಯ ಕ್ಷೇತ್ರ, ನೀರಾವರಿ ಕ್ಷೇತ್ರದ ಸಹಿತ ಸರ್ವಾಂಗೀಣ ಅಭಿವೃದ್ಧಿಗೊಳಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮರಾಠ ಜಗದ್ಗುರು ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತಿ ಸ್ವಾಮೀಜಿ, ಶ್ರೀ ದಯಾನಂದಗಿರಿ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಇದೇ ವೇಳೆ ಶಾಸಕರನ್ನು ಸನ್ಮಾನಿಸಲಾಯಿತು. ಎಂಎಡಿಬಿ ಮಾಜಿ ಅಧ್ಯಕ್ಷ ಗುರುಮೂರ್ತಿ, ತಾ.ಶಿವಗಿರಿ ಮರಾಠ ಸಮಾಜದ ಗೌರವಾಧ್ಯಕ್ಷ ಗುರುರಾಜ್ ಜಗತಾಪ್, ಜಿಲ್ಲಾ ಮರಾಠ ಒಕ್ಕೂಟದ ಅಧ್ಯಕ್ಷ ದೇವರಾಜ್ ಸಿಂಧೆ, ತಾ.ಮರಾಠ ಸಮಾಜದ ಅಧ್ಯಕ್ಷ ಗಣೇಶ್ ರಾವ್ ಕರಾಡೆ, ಶಿವಗಿರಿ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಚಂದ್ರೋಜಿರಾವ್ ಉಪಸ್ಥಿತರಿದ್ದರು.

ಹಾಲು ಪರೀಕ್ಷಕರಿಗೆ ತರಬೇತಿ ಕಾರ್ಯಾಗಾರ

• **ಶಿವಮೊಗ್ಗ :** ಕುಡಿಯುವ ನೀರಿಗೆ ಗ್ಲಾಸ್ ಒಂದಕ್ಕೆ 100 ರೂ. ಕೊಡಲು ಸಿದ್ಧರಿದ್ದಾರೆ. ಪೆಟ್ರೋಲ್-ಡೀಸೆಲ್‌ಗೂ ಕೊಡುತ್ತಾರೆ. ಆದರೆ ಪೌಷ್ಠಿಕಾಂಶ ನೀಡುವ ಹಾಲಿಗೆ 2 ರೂ. ಜಾಸ್ತಿ ಮಾಡಿದರೆ ಕೋಲಾಹಲ ಉಂಟಾಗುತ್ತದೆ ಎಂದು ಮಲೆನಾಡು ಅಭಿವೃದ್ಧಿ ಮಂಡಳಿ ನಿಗಮದ ಅಧ್ಯಕ್ಷ ಆರ್.ಎಂ. ಮಂಜುನಾಥ್ ಗೌಡ ಬೇಸರ ವ್ಯಕ್ತಪಡಿಸಿದರು.

ಶಿಮೂಲ್‌ನ ಸಭಾಂಗಣದಲ್ಲಿ ಸಹಕಾರ ಸಪ್ತಾಹ ಆಚರಣೆಯಲ್ಲಿ ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯದರ್ಶಿ, ಹಾಲು ಪರೀಕ್ಷಕರು ಹಾಗೂ ಕೃತಕ ಗರ್ಭಧಾರಣ ಕಾರ್ಯಕರ್ತರಿಗೆ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ರೈತರ ಅಭಿವೃದ್ಧಿಯಾಗ ಬೇಕಾದರೆ ಹಾಲಿನ ದರ ಹೆಚ್ಚಳ ಮಾಡಲೇಬೇಕು. ಉತ್ಪಾದಕ ಸಂಘಗಳು ಹಾಲು ಉತ್ಪಾದಕರಿಗೆ 30 ರಿಂದ 40 ಸಾವಿರ ವರ್ಷಕ್ಕೆ ಬೋನಸ್ ನೀಡಬೇಕು ಎಂಬುದು ನನ್ನ ಕನಸಾಗಿದೆ. ರೈತರ ಹಾಲಿಗೆ ಹೆಚ್ಚಿನ ದರ ಲಭಿಸಿದಾಗ ಮಾತ್ರ ರೈತರು ಹೈನುಗಾರಿಕೆಗೆ ಮನಸ್ಸು ಮಾಡುತ್ತಾರೆ. ಶಿಮೂಲ್‌ನಲ್ಲಿಯೇ ಪ್ರತಿನಿತ್ಯ 9.50ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಇದು ಬಹಳ ದೊಡ್ಡ ಆರ್ಥಿಕ ನೆರವು ನೀಡಿದ ಹಾಗೆ. ಹೈನುಗಾರಿಕೆ ರೈತರಿಗೆ ವರದಾನ. ರೈತರ ಆರ್ಥಿಕ ಸ್ಥಿತಿ ಭದ್ರಗೊಳಿಸಬೇಕು ಎಂದರು.



ಕೊಟ್ಟಿಗೆ ಗೊಬ್ಬರ ಬಳಸಿ: ರೈತರು ಮಣ್ಣಿನ ಫಲವತ್ತತೆ ಉಳಿಸಬೇಕಾದರೆ ಕೊಟ್ಟಿಗೆ ಗೊಬ್ಬರವನ್ನೇ ಹೆಚ್ಚಾಗಿ ಬಳಸಬೇಕು. ಹಾಲಿನಂತೆ ಕೊಟ್ಟಿಗೆ ಗೊಬ್ಬರ ಕೂಡ ಲಾಭದಾಯಕ. ಇಂದು ರಾಸಾಯನಿಕ ಗೊಬ್ಬರ ಇಲ್ಲದೇ ಬೆಳೆ ಬೆಳೆಯುವುದೇ ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಬಂದಿದೆ. ಅತಿಯಾದ ಬಳಕೆಯಿಂದ ಮಣ್ಣಿನ ಫಲವತ್ತತೆ ನಾಶವಾಗಿ ಅನೇಕ ಅಡಿಕೆ ತೋಟ ಮತ್ತು ಇತರ ಬೆಳೆಗಳು ನಷ್ಟವಾಗುತ್ತಿದೆ. ಬೇರು ಕೂಡ ನಿಧಾನವಾಗಿ ಹಾಳಾಗುತ್ತಿದೆ. ಹೊಸ ಹೊಸ ಖಾಯಿಲೆಗಳು ಬರುತ್ತಿದೆ. ನಾನು ವೈಯಕ್ತಿಕವಾಗಿ ರಾಸಾಯನಿಕ ಬಳಕೆಯಿಂದ ಹಾಳಾದ ನನ್ನ ತೋಟಕ್ಕೆ ಕೊಟ್ಟಿಗೆ ಗೊಬ್ಬರ ಬಳಸಲು ಪ್ರಾರಂಭಿಸಿದ ಮೇಲೆ ಈಗ ಒಳ್ಳೆಯ ಬೆಳೆ ಬರುತ್ತಿದೆ ಎಂದರು.

ಸಹಕಾರಿ ಯೂನಿಯನ್‌ನ ಅಧ್ಯಕ್ಷ ಹನುಮಂತಪ್ಪ ಸಿ. ಸಹಕಾರ ಸಂಘಗಳ ಉಪನಿಬಂಧಕರಾದ ನಾಗಭೂಷಣ ಸಿ.ಕಲ್ಮನೆ, ಮಾಜಿ ಅಧ್ಯಕ್ಷ ಕೆ.ಎಲ್.ಜಗದೀಶ್ವರ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಎಸ್.ಕೆ.ಮರಿಯಪ್ಪ, ಶಿಮೂಲ್ ಉಪಾಧ್ಯಕ್ಷ ಚೇತನ್ ಎಸ್. ನಾಡಿಗರ, ಮಾಜಿ ಅಧ್ಯಕ್ಷ ಡಿ.ಆನಂದ್, ನಿರ್ದೇಶಕರಾದ ಎಸ್.ವೈ.ಪುಷ್ಪಾ, ಶಿಮೂಲ್ ಎಂ.ಡಿ. ಡಾ.ಮಂಜೇಶ್ ಪಿ.ಆರ್, ಲೆಕ್ಕಪರಿಶೋಧನಾ ಉಪ ನಿರ್ದೇಶಕರಾದ ತೇಜೋಮೂರ್ತಿ ಆರ್., ಯಶವಂತ್‌ಕುಮಾರ್ ಹೆಚ್., ಅಮೃತೇಶ್ವರ್ ಇದ್ದರು.

ಸಹ್ಯಾದ್ರಿ ಕಾಲೇಜಿನಲ್ಲಿ ಎಂಎಸ್ಸಿ ಹಾಗೂ ಎಂಎ ತರಗತಿಗೆ ಪ್ರವೇಶಾತಿ ನೀಡಲು ಒತ್ತಾಯ

• **ಶಿವಮೊಗ್ಗ :** ನಗರದ ಸಹ್ಯಾದ್ರಿ ವಿಜ್ಞಾನ ಹಾಗೂ ಸಹ್ಯಾದ್ರಿ ಕಲಾ ಕಾಲೇಜುಗಳಲ್ಲಿ ಎಂಎಸ್ಸಿ ಹಾಗೂ ಎಂಎ ತರಗತಿಗಳಿಗೆ ಪ್ರವೇಶಾತಿ ನೀಡುವಂತೆ ಒತ್ತಾಯಿಸಿ ಎಬಿವಿಪಿ ವತಿಯಿಂದ ಕುವೆಂಪು ವಿವಿ ಕುಲಸಚಿವ (ಆಡಳಿತ) ಹೇಮಂತ್ ಎನ್. ಅವರಿಗೆ ಮನವಿ ಸಲ್ಲಿಸಲಾಯಿತು.



ಈ ಕಾಲೇಜಿಗೆ ಆರ್ಥಿಕವಾಗಿ ಹಿಂದುಳಿದವರು, ಗ್ರಾಮೀಣ ವಿದ್ಯಾರ್ಥಿಗಳು ಬಂದು ಶಿಕ್ಷಣ ಪಡೆಯುತ್ತಿದ್ದಾರೆ. ಅದರಲ್ಲೂ ಉನ್ನತ ಶಿಕ್ಷಣ ಪಡೆಯಲು ಬಡ ವಿದ್ಯಾರ್ಥಿಗಳಿಗೆ ಪ್ರಾಶಸ್ತ್ಯ ಇರುವ ಕಾಲೇಜಾಗಿದೆ. ಹೀಗಿದ್ದರೂ ಸ್ನಾತಕೋತ್ತರ ತರಗತಿಗಳಿಗೆ ಪ್ರವೇಶ ನೀಡದೆ ಇರುವುದರಿಂದ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುವಂತಾಗಿದೆ ಎಂದರು ಮನವಿಯಲ್ಲಿ ತಿಳಿಸಲಾಗಿದೆ.

ತಕ್ಷಣದಿಂದಲೇ ಈ ಕಾಲೇಜಿನ ಎಲ್ಲಾ ವಿಭಾಗಗಳಿಗೆ ಎಂಎಸ್ಸಿ ಹಾಗೂ ಎಂಎ ಪದವಿಗಳಿಗೆ ಪ್ರವೇಶ ನೀಡಬೇಕು. ಸೀಟುಗಳ ಸಂಖ್ಯೆ ಕಡಿತ ಮಾಡದೆ ಯಥಾಸ್ಥಿತಿ ಕಾಪಾಡಬೇಕು. ಬಿಸಿಎ ಶುಲ್ಕ ಪರಿಷ್ಕರಣೆ ಮಾಡಬೇಕು. ಯುಯುಸಿಎಂ ತಂತ್ರಾಂಶ ಸರಿಪಡಿಸಬೇಕು. ಸಕಾಲಕ್ಕೆ ಆಡಳಿತ ಮಂಡಳಿ ಸ್ಪಂದಿಸದಿದ್ದರೆ ಹೋರಾಟ ನಡೆಸುವುದಾಗಿ ಎಚ್ಚರಿಸಲಾಗಿದೆ.

ಈ ಸಂದರ್ಭದಲ್ಲಿ ವಿಭಾಗ ಸಂಚಾಲಕ ರವಿ ಇರೋಜಿ, ವಿಭಾಗ ಸಂಘಟನಾ ಕಾರ್ಯದರ್ಶಿ ಆದಿತ್ಯ ಶೆಟ್ಟಿ, ಜಿಲ್ಲಾ ಸಂಚಾಲಕ ನಂದನ್, ನಗರ ಕಾರ್ಯದರ್ಶಿ ವಿನಯ್ ಹಿರೇಮಳಲಿ ಇದ್ದರು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಅಂ/ಪಂ.ರಾ.ಇಂ.ವಿ/ಬ/ಎಇ-1 /ವಿ.ಟಿ.ಸಿ /ಟೆಂಡರು /2026-27/489
ದಿನಾಂಕ 30-06-2026

ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025-26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ (ವಿವಿಧ ಸಮುದಾಯಗಳ ಅಭಿವೃದ್ಧಿ) ಯೋಜನೆ, 2024-25 ನೇ ಸಾಲಿನ ಅಲ್ಪಸಂಖ್ಯಾಂತರ ಭವನ ನಿರ್ಮಾಣ ಮತ್ತು ಸಿ.ಐ.ಡಿ.ಎಮ್.ಪಿ ಯೋಜನೆ ಒಟ್ಟು 07 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ-
1.RDPR/2026-27/BD/WORK_INDENT27584
2.RDPR/2026-27/BD/WORK_INDENT27583
3.RDPR/2026-27/BD/WORK_INDENT27119
4.RDPR/2026-27/BD/WORK_INDENT27424
5.RDPR/2026-27/BD/WORK_INDENT27614
6.RDPR/2026-27/BD/WORK_INDENT27453
7.RDPR/2026-27/BD/WORK_INDENT27613

ಟೆಂಡರ್ ನಮೂನೆಗಳನ್ನು https://kppp.karnataka.gov.in ಅಂತರ್ಜಾಲದಲ್ಲಿ ದಿನಾಂಕ 30-06-2026 ರಿಂದ ದಿನಾಂಕ 14-07-2026 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 14-07-2026 ರ ಸಂಜೆ 4.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 15-07-2026 ರಂದು ಸಂಜೆ 5.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (https://kppp.karnataka.gov.in) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/292

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಶಿವಮೊಗ್ಗ

Ph: 08182-223900 ಇ-ಮೇಲ್: acfsfshimoga@gmail.com
ಸಂಖ್ಯೆ: ಸಅಸಂ.ಸಾಅಉವಿಶಿ.ಟೆಂಡರ್.ಸಿ.ಆರ್-01/2025-26 ದಿ: 30.06.2026

ಸಂಕ್ಷಿಪ್ತ ಮರು-ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

2026-27 ನೇ ಸಾಲಿಗೆ ಶಿವಮೊಗ್ಗ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ರಾಷ್ಟ್ರೀಯ ಕೃಷಿ ವಿಕಾಸ (ಆರ್‌ಕೆವಿವೈ) ಯೋಜನೆಯಡಿ ಸಸಿ ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಅರಣ್ಯ ಇಲಾಖೆಯಲ್ಲಿ ನೊಂದಾಯಿಸಿಕೊಂಡಿರುವ ಹಾಗೂ ಮರು- ಟೆಂಡರ್ ಅಧಿಸೂಚನೆಯಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಇರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಮರು-ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಬಿಡ್‌ಗಳನ್ನು ದಿನಾಂಕ: 08 /07/2026 ರಂದು 4.30 ಗಂಟೆಯೊಳಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮರು-ಟೆಂಡರ್‌ನ ಸಂಪೂರ್ಣ ಮಾಹಿತಿಯನ್ನು ಇ- ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

(ಕಛೇರಿ ದೂರವಾಣಿ ಸಂಖ್ಯೆ: 08182-223900)

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ-ವಿಭಾಗ, ಶಿವಮೊಗ್ಗ
ವಾ.ವಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/26-27/07/07/444

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182-222943 Email ID: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ)

ಐಎಫ್‌ಟಿ ಸಂಖ್ಯೆ 16/2026-27 ದಿನಾಂಕ : 29.06.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು-3&4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿನ ಲೆಕ್ಕ ಶೀರ್ಷಿಕೆ:-2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ಒಟ್ಟು-01 ಕಾಮಗಾರಿಯ ಹೆಸರು ಶಿವಮೊಗ್ಗ ನಗರದ ಸರ್ಕ್ಯೂಟ್ ಹೌಸ್ ಆವರಣದಲ್ಲಿರುವ ಅತೀಗಣ್ಯರ, ಗಣ್ಯರ ಮತ್ತು ಸಾಮಾನ್ಯ ವಸತಿ ಗೃಹಗಳು ಹೆಲಿಪ್ಯಾಡ್ ಹಾಗೂ ಗಾರ್ಡನ್ ಮತ್ತು ರಸ್ತೆಗಳ 2026-27ನೇ ಸಾಲಿನ ವಾರ್ಷಿಕ ನಿರ್ವಹಣೆ ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.60.95 ಲಕ್ಷ ಹಾಗೂ ಇ.ಎಂ.ಡಿ.ಗರಿಷ್ಠ ಮೊತ್ತ ರೂ.1.22 ಲಕ್ಷ, ಕಾಲಾವಧಿ ಮಳೆಗಾಲ ಸೇರಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನಮೂದಿಸಿದಂತೆ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು, ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 29-06-2026 ರಿಂದ 07-07-2026ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ:07-07-2026ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ದಿನಾಂಕ:08-07-2026 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ:09-07-2026 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/-
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ಸಂ.129/ ಡೋಂಆರ್/2026-27

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
ಸಹಕಾರ ಸಂಘಗಳ ಜಂಟಿ ನಿಬಂಧಕರು., (ಡಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ "ಸೌಹಾರ್ದ ಸಹಕಾರ ಸೌಧ" #68, 1ನೇ ಮಹಡಿ, 17 & 18ನೇ ಅಡ್ಡರಸ್ತೆ, ಮಧ್ಯೆ, ಮಾರ್ಗೋಸಾ ರಸ್ತೆ ಮಲ್ಲೇಶ್ವರಂ, ಬೆಂಗಳೂರು -560055.

ದ್ಯಾವ್ಯ ಸಂಖ್ಯೆ : ಡಿಆರ್.ಡಿ/ಕ.ರಾ.ಸೌ.ಸಂ.ಡಿ./15(37ಎ)/2026-26
ವಾದಿ
Karnataka Rajya Souharda Samyukta Sahakari Niyamitha, 'Souharda Sahakari Soudha', No.68, 17 & 18th Cross, Margosa Road, Malleshwaram, Bangalore – 560055. Represented by its Managing Director
ಪ್ರತಿವಾದಿಗಳು
4. Sri Anantha Kumar B V
Aged Major, Director, Unified Souharda Credit Co-operative Ltd., Residing at No. 19, 3rd Floor, 5th Main Road, Sarakki, J.P. Nagara 1nE Stage, Bangalore

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ: 44(1) ರಡಿ ಸ್ವತ್ತುಗಳ ತೀರ್ಪು ಮುಂಚೆ ಜಪ್ತಿ ಆದೇಶದ ಅರ್ಜಿಯ ಸಂಬಂಧ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸು

ಮೇಲಿನ ಪ್ರಕರಣವನ್ನು ವಾದಿ ಸಂಯುಕ್ತ ಸಹಕಾರಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997 ಕಲಂ:-37-ಎ ರಡಿಯಲ್ಲಿ ಪ್ರತಿವಾದಿಗಳ ವಿರುದ್ಧ ದುರುಪಯೋಗದ ಮೊತ್ತದ ವಸೂಲಾತಿಗಾಗಿ ದಾವೆಯನ್ನು ದಾಖಲಿಸಿರುತ್ತದೆ. ಈ ದಾವೆಯಲ್ಲಿ ಪ್ರತಿವಾದಿ-4ರವರಿಗೆ ಸೇರಿದ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ತೀರ್ಪು ಪೂರ್ವ ಜಪ್ತಿಗೆ ಒಳಪಡಿಸಲು ಕೋರಿರುತ್ತದೆ ಅದ್ದರಿಂದ ಈ ಬಗ್ಗೆ ದಿನಾಂಕ:14.07.2026 ಬೆಳಗ್ಗೆ 11:30 ಗಂಟೆಗೆ ವಿಚಾರಣೆಗೆ ನಿಗದಿಯಾಗಿದ್ದು, ಷೆಡ್ಯೂಲ್ ಸ್ವತ್ತುಗಳನ್ನು ತೀರ್ಪು ಪೂರ್ವ ಜಪ್ತಿಗೆ ಒಳಪಡಿಸಲು ಕೋರಿರುವ ಅರ್ಜಿಗೆ ಪ್ರತಿವಾದಿ-4ರವರಾದ ತಮ್ಮ ಆಕ್ಷೇಪಣೆ ಏನಾದರೂ ಇದ್ದಲ್ಲಿ ಸಲ್ಲಿಸತಕ್ಕದ್ದು ತಪ್ಪಿದ್ದಲ್ಲಿ ಪ್ರತಿವಾದಿ-4ರವರಾದ ತಮ್ಮ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಿ ವಾದಿ ಸಂಯುಕ್ತ ಸಹಕಾರಿ ಸಲ್ಲಿಸಿದ ಮಧ್ಯಂತರ ಅರ್ಜಿ-2 ಮಂಜೂರುಸಿ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ಸ್ವೀಕರಿಸಲಾಗುವುದು ಎಂದು ತಿಳಿಯತಕ್ಕದ್ದು.

ಆಸ್ತಿಗಳ ವಿವರಣೆ

PROPERTIES OF RESPONDENTS NO.4
Item-1: All that piece and parcel of the residential Property Site No.19, old site No.15 and 16, formed in Sy No.52/3, 5th Main Road, Sarakki Village, Uttrahalli Hobli, Bangalore South Taluk, ward No.177, PID No.57-248-19, measuring East to West:Northern side 40 feet, Southern side 41 feet and North to South:Eastern side 20 feet and Western side 59 feet, total all measuring 2027 Sq feet along with multi-storied building consisting of Ground Floor, First, Second, Third and amp: Fourth, Fifth Floor, built up area of 7285 Sq feet and bounded on:
East by: 22 Feet Road
West by: Site No.17 & 18
North by: Site No.14 and
South by: Previously Nanjamma's land, presently road.

ಈ ನೋಟೀಸನ್ನು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : 15.06.2026 ರಂದು ಹೊರಡಿಸಲಾಗಿದೆ.

ಸಹಿ/-
ಸಹಕಾರ ಸಂಘಗಳ ಜಂಟಿ ನಿಬಂಧಕರು (ಡಿ.441)
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಬೆಂಗಳೂರು (ನ್ಯಾಯಾಲಯದ ಆದೇಶದ ಮೇರೆಗೆ)

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ದಾವಣಗೆರೆ ಪ್ರಾದೇಶಿಕ ವಿಭಾಗ, ದಾವಣಗೆರೆ – 577 005.

ದೂರವಾಣಿ ಸಂಖ್ಯೆ : 08192-262527 ಇ-ಮೇಲ್: dcfdvg@gmail.com
ಸಂಖ್ಯೆ : ಬಿ4/ಟ್ಯಾಂಡ್/ಮ.ಕ/ಸಿಆರ್-07/2026-27 ದಿನಾಂಕ: 20-06-2026

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ದಾವಣಗೆರೆ ಪ್ರಾದೇಶಿಕ ವಿಭಾಗ, ದಾವಣಗೆರೆ ಇಲ್ಲಿ ಜರುಗುವ

ಇ-ಹರಾಜು ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ:ಅಇ-689-ಫೆಫ್ಟ-12/2023 ದಿನಾಂಕ:04-12-2023
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವದೇನೆಂದರೆ, ದಾವಣಗೆರೆ ಪ್ರಾದೇಶಿಕ ಅರಣ್ಯ ವಿಭಾಗದ ಈ ಕೆಳಗೆ ನಮೂದಿಸಿದ ಹೊನ್ನಾಳಿ ವಲಯ ಕಛೇರಿ ಆವರಣ ಟೆಂಕಿ ಡಿಪೋದಲ್ಲಿ ನೀಲಗಿರಿ ಪೋಲ್ಸ್‌ಗಳನ್ನು ಬಹಿರಂಗ ಇ-ಹರಾಜು ಮಾಡಲು ದಿನಾಂಕ:09-07-2026 ರಂದು ನಿಗಧಿಪಡಿಸಲಾಗಿರುತ್ತದೆ. ಸದರಿ ಹರಾಜನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ಅಥವಾ ಅವರಿಂದ ಅಧಿಕಾರವನ್ನು ಪಡೆದಂತಹ ಅಧಿಕಾರಿಗಳು ನೆರವೇರಿಸುವರು. ಹರಾಜು ಜರುಗುವ ಮರಮುಟ್ಟು ಸಂಗ್ರಹಾಲಯಗಳ ಹೆಸರು ಹರಾಜಿಗೆ ಇಟ್ಟಂತಹ ಉತ್ಪನ್ನಗಳ ಪ್ರಮಾಣ ಹಾಗೂ ಇ-ಹರಾಜಿನ ದಿನಗಳ ವಿವರ ಈ ಕೆಳಗೆ ನಮೂದಿಸಿದ ಪ್ರಕಾರ ಇರುತ್ತದೆ.
ನಾಟಾ ಸಂಗ್ರಹಾಲಯದ ಹೆಸರು:- ಹೊನ್ನಾಳಿ ವಲಯ ಕಛೇರಿ ಆವರಣ ಟೆಂಕಿ ಡಿಪೋ (IV Session)
Honnali Range Office premises, Tenky Depot, Honnali Range, Davanagere Division
ಇ-ಹರಾಜು ದಿನಾಂಕ : 09-07-2026 ಮಧ್ಯಾಹ್ನ 04.00 ರಿಂದ 4.45 ರವರೆಗೆ
Date : 09-07-2026 IV Session from 04.00 p.m. to 04.45 p.m.
ಈ ಮೇಲ್ಕಂಡ ಇ-ಹರಾಜು ಪ್ರಕ್ರಿಯೆಯಲ್ಲಿ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ನಮೂದಿಸಿದವರನ್ನು ಸಂಪರ್ಕಿಸಬಹುದಾಗಿದೆ:
ಉಪ ಅರಣ್ಯ ಸಂರಕ್ಷಣಾಧಿಕಾರಿ, ದಾವಣಗೆರೆ ಪ್ರಾದೇಶಿಕ ವಿಭಾಗ, ದಾವಣಗೆರೆ
Phone No: 08192-262527 Email Id : dcfdvg@gmail.com
ವಲಯ ಅರಣ್ಯಾಧಿಕಾರಿ, ಹೊನ್ನಾಳಿ ವಲಯ, ಹೊನ್ನಾಳಿ
Phone No: 6364085395 Email Id : rfohonnali2020@gmail.com

ವಾಸಾಇ/ದಾವಣಗೆರೆ/187/ಕೆಎಸ್‌ಎಂಸಿಎ/2026-27
ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ ದಾವಣಗೆರೆ ವಿಭಾಗ, ದಾವಣಗೆರೆ

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560 001. ದೂರವಾಣಿ: 080-22133370
ಸಂಖ್ಯೆ: 11/2026-27 ದಿನಾಂಕ: 30.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ದೊಡ್ಡಬಳ್ಳಾಪುರ & ನೆಲಮಂಗಲ ಉಪವಿಭಾಗಕ್ಕೆ** ಸಂಬಂಧಿಸಿದಂತೆ **03** ಸಂಖ್ಯೆಯ (ರೂ. **250.00 to 350.00** ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸೆಸಿಂಗ್ ಶುಲ್ಕವನ್ನು ಕೆಪಿಪಿ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 16.07.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 17.07.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.
ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು.
ವಾಸಾಸಂಇ/ಉಪಿ-ಸಿ.ಪಿ/1421/ಕೆಎಸ್‌ಎಂಸಿಎ/2026-27

ಸಮಗ್ರ ಶಿಕ್ಷಣ ಕರ್ನಾಟಕ
ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಾರ್ಯಾಲಯ, ಕಲಬುರಗಿ

ಸಂಖ್ಯೆ:ಆ1/ಸಶಿಕ/ಕೆಜಿಬಿವಿ/ಆ.ಪೂ./14/2026-27 ದಿನಾಂಕ: 30-06-2026

:: ಟೆಂಡರ್ ಪ್ರಕಟಣೆ ::

ಸಮಗ್ರ ಶಿಕ್ಷಣ ಕರ್ನಾಟಕ, ಜಿಲ್ಲಾ ಯೋಜನಾ ಕಛೇರಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಸೇವೆ ಸರಬರಾಜು ಇ-ಪ್ರೊಕ್ಯೂರಮೆಂಟ್ ಟೆಂಡರಗಳನ್ನು ಆಹ್ವಾನಿಸಲಾಗಿದೆ.
2026-27ನೇ ಸಾಲಿಗೆ ಕಲಬುರಗಿ ಜಿಲ್ಲೆಯ ಕೆ.ಕೆ.ಜಿ.ಬಿ.ವಿ. ವಸತಿ ಶಾಲೆಗಳಿಗೆ ವಸತಿ ಶಾಲೆಯಲ್ಲಿಯೇ ಸಿದ್ಧಪಡಿಸಿದ ಆಹಾರ ಪೂರೈಕೆ ಮಾಡುವ ಮರು ಟೆಂಡರ್ ಅಂದಾಜು ಮೊತ್ತ: ರೂ. **90,00,000/-**, ಇ.ಎಂ.ಡಿ. ಮೊತ್ತ ರೂ. 1,80,000/-.
1) ಟೆಂಡರ್ ಪ್ರಕಟಣೆ ದಿನಾಂಕ: **30-06-2026**, 2) ಟೆಂಡರ ಫಾರಂ ಅಪಲೋಡ ಮಾಡಲು ಕೊನೆಯ ದಿನಾಂಕ ಮತ್ತು ವೇಳೆ : **09-07-2026**, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10-07-2026**, 4) ಹಣಕಾಸಿನ ಬಿಡ್ ತೆರೆಯುವ ದಿನಾಂಕ: **13-07-2026**.
ಮೇಲಿನ ಟೆಂಡರ ಸಂಪೂರ್ಣ ವಿವರಗಳನ್ನು (www.kppp.karnataka.gov.in) ಪೋರ್ಟಲ್‌ನಲ್ಲಿ ದಸ್ತಾವೇಜುಗಳನ್ನು ಗಮನಿಸುವುದು.

ಸಹಿ/- ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/280/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರ್ಕಾರ
ರಾಯಚೂರು ಮಹಾನಗರ ಪಾಲಿಕೆ
E-mail:itstaff_ulb_raichurn@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ.ರಾಮಪಾ/ತಾಂತ್ರಿಕ/ಮ.ನಿ/2026-27 ದಿನಾಂಕ:29-06-2026.

ಮರು ಟೆಂಡರ್ / ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಮರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	ಮಹಾನಗರ ಪಾಲಿಕೆ ಅನುದಾನದಲ್ಲಿ	Repair and Maintenance of UGD in Raichur City **Estimate Cost Rs.1,00,00,000/-**	DMA/2025-26/WS/WORK_INDENT56574/CALL-2
2	ಮಹಾನಗರ ಪಾಲಿಕೆ ನಿಧಿ ಮತ್ತು ಕೆ.ಕೆ.ಆರ್.ಡಿ.ಬಿ ಅನುದಾನದಲ್ಲಿ	Construction of Anganwadi Building in Jawahar Nagar at Gajgarpeth of Ward No -17 in Raichur City. **Estimate Cost Rs. 22,50,000/-**	DMA/2026-27/BD/WORK_INDENT60392
3	ಮಹಾನಗರ ಪಾಲಿಕೆ ಅನುದಾನದಲ್ಲಿ	Animal Birth Control ABC Surgery for Stray Dogs and ARV Vaccination Animal Birth Control Programme In Various Places Raichur City Corporation Limits **Estimate Cost Rs. 27,50,000/-**	DMA/2025-26/SE7607/CALL-4

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ರಾಯಚೂರು.
DIP/RCR/141/KSMCA/143/2026-27

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿನಗರ, ಧಾರವಾಡ-580005.
Fax: +91-836-2441188, Phone : +91-836-2214214
E-mail: estateofficer@rediffmail.com, Epabx: +91-836-2214216, 332, 214

No.EO/DB/TN/e-Proc.T-129/2026-27 Date: 29-06-2026

ಅಲ್ಪಾವಧಿ ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ (ತೃತೀಯ ಕರೆ)

ಕೃಷಿ ವಿಶ್ವವಿದ್ಯಾಲಯ ಧಾರವಾಡದ ವಿವಿಧ ಆವರಣಗಳಲ್ಲಿ ಮಾನವ ಸಂಪನ್ಮೂಲ ಹೊರಗುತ್ತಿಗೆ (ಕೃಷಿ ಕಾರ್ಮಿಕರು ಹಾಗೂ ಸೇವಾ ಸಿಬ್ಬಂದಿ) ಸೇವೆಗಳಿಗಾಗಿ ಅರ್ಹ ಕಂಪನಿಗಳಿಂದ / ಪಾಲುದಾರಿಕೆ ಸಂಸ್ಥೆಗಳಿಂದ / ಪ್ರಾಪ್ರೈಟರ್‌ಗಳಿಂದ ಅಲ್ಪಾವಧಿ ಟೆಂಡರುಗಳನ್ನು ಮರು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳನ್ನು e-procurement portal ಪದ್ಧತಿಯಂತೆ https://kppp.karnataka.gov.in online ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ **0836-2214214/332** ಸಂಪರ್ಕಿಸಬಹುದು. e-procurement ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ **080-23010900**.

ಟೆಂಡರ್ ವೇಳಾ ಪಟ್ಟಿ

1	ವಿಚಾರಣೆಗಳಿಗಾಗಿ ಕೊನೆಯ ದಿನಾಂಕ	07-07-2026	Up to	16.00 Hrs
2	ಟೆಂಡರ್ ಪೂರ್ವಭಾವಿ ಸಭೆ ನಡೆಯುವ ದಿನಾಂಕ ಹಾಗೂ ವೇಳೆ	10-07-2026	At	11.00 Hrs
3	ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ	15-07-2026	Up to	16.00 Hrs
4	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ	16-07-2026	At	16.15 Hrs
5	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ	17-07-2026	At	16.00 Hrs

ಸೂಚನೆ: ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ-ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರಕಟಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.

ಸಹಿ/-
ಆಸ್ತಿ ಅಧಿಕಾರಿಗಳು
ವಾ.ಸಾ.ಇ./ಧಾರವಾಡ/369/2026-27/ಟೆಂಡರಾಂಡಜಪ್ಪ/ಸಿಸಿ

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಸಿ.ಜೆ.ಎಂ. ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ
ಸಿ.ಮಿಸ್.ನಂ :203/2026

ಅರ್ಜಿದಾರರು: 1)ಮೊಹಮ್ಮದ್ ಅತಾವುಲ್ಲಾ ಖಾನ್,ಬಿನ್ ಲೇಟ್ ರಸೂಲ್ ಖಾನ್, ಸುಮಾರು 41 ವರ್ಷ, ವಾಸ: ಓಲ್ಡ್ ಬಾರ್ ಲೈನ್ ರೋಡ್, ಗಾಲೀಬ್ ಸಾಬ್ ಬೀದಿ, 2ನೇ ಅಂತಸ್ತು ಮನೆ, ಲಷ್ಕರ್ ಮೊಹಲ್ಲಾ, ಶಿವಮೊಗ್ಗ. 2)ಶ್ರೀಮತಿ ನಾಜೀಮಾ ಬೀ ಲೇಟ್ ರಸೂಲ್ ಖಾನ್,ಕೋಂ ದಸ್ತಗೀರ್ ದರ್‌ವೇಶ್, ಸುಮಾರು 47 ವರ್ಷ, ವಾಸ: ಓಲ್ಡ್ ಬಾರ್ ಲೈನ್ ರೋಡ್, ಲಷ್ಕರ್ ಮೊಹಲ್ಲಾ, ಶಿವಮೊಗ್ಗ.

ವಿರುದ್ಧ

ಎದುರುದಾರರು : ಮಾನ್ಯ ಆಯುಕ್ತರು, ಮಹಾನಗರ ಪಾಲಿಕೆ, ಶಿವಮೊಗ್ಗ.

ಪತ್ರಿಕಾ ಪ್ರಕಟಣೆಗಾಗಿ

ಈ ಮೇಲ್ಕಂಡ ಅರ್ಜಿದಾರ 1 ಹಾಗೂ 2ನೇಯವರ ತಾಯಿಯಾದ **ಮಹಜಾನ್ ಬೀ ಕೋಂ ಲೇಟ್ ರಸೂಲ್ ಖಾನ್,** ಇವರು **ದಿನಾಂಕ:27-11-2020** ರಂದು ಅರ್ಜಿದಾರ 1ನೆಯವರ ವಾಸದ ಮನೆ ಲಷ್ಕರ್ ಮೊಹಲ್ಲಾ ಶಿವಮೊಗ್ಗ, ಇಲ್ಲಿ ಮರಣ ಹೊಂದಿರುವುದರಿಂದ ಇವರ ಮರಣ ದೃಢೀಕರಣ ಪಡೆಯಲು ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣವು **ದಿನಾಂಕ:04-08-2026** ರಂದು **ಬೆಳಗ್ಗೆ 11 ಗಂಟೆಗೆ** ಸದರಿ ನ್ಯಾಯಾಲಯದಲ್ಲಿ ಇದ್ದು, ಆ ದಿನ ಯಾರದ್ದಾದರೂ ತಂಟೆ ತಕರಾರು ಇದ್ದಲ್ಲಿ, ಅಂತಹವರು ತಪ್ಪದೇ ಖುದ್ದಾಗಿ ಹಾಜೇ ಆಗಲೀ, ಅಥವಾ ವಕೀಲರ ಮೂಲಕವಾಗಲೀ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಘನ ನ್ಯಾಯಾಲಯವು ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯುವುದು.

ಅರ್ಜಿದಾರರ ಪರ ವಕೀಲರು
ರವಿಕುಮಾರ್. ಎಂ.ಹೆಚ್.
ಬಿ.ಎ.ಎಲ್.ಎಲ್.ಬಿ. ವಕೀಲರು, ಶಿವಮೊಗ್ಗ
ಮೊ:9945523862

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/-ಶಿರಸ್ತೇದಾರರು, ಪ್ರಧಾನ ಸಿವಿಲ್ ನ್ಯಾಯಾಧೀಶರ ಹಾಗೂ ಸಿ.ಜೆ.ಎಂ. ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ

ಪುರಸಭೆ ಕಾರ್ಯಾಲಯ, ಸೊರಬ 577429
ಶಿವಮೊಗ್ಗ ಜಿಲ್ಲೆ, ಕರ್ನಾಟಕರಾಜ್ಯ, ದೂರವಾಣಿ ಸಂ: 08184-272232.,
e-mail: itstaff_ulb_sorab@yahoo.com,
Web: www.sorabatown.mrc.gov.in

ಸಂಖ್ಯೆ:ಸೊಪುಸ.ಜೆ.ಇ/ಸಿಆರ್/ಟೆಂಡರ್/07/2025-26 ದಿ: 29.06.2026

"ಟೆಂಡರ್ ಪ್ರಕಟಣೆ"
(ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ)

ಸೊರಬ ಪುರಸಭೆಯ 2025-26 ನೇ ಸಾಲಿಗೆ ಪುರಸಭೆ ಸಾಮಾನ್ಯ ಅನುದಾನದಡಿ ವಿವಿಧ ಕಾಮಗಾರಿಗಳ ಟೆಂಡರ್‌ಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಪ್ರಕಾರ ಪ್ರಸಕ್ತ ಬ್ಲಾಕ್ ಅವಧಿಗೆ ಕರ್ನಾಟಕ ಸ್ಟ್ಯಾಂಡರ್ಡ್‌ಡಾಕ್ಯೂಮೆಂಟ್ಸ್ KC-1, ನಿಯಮದನ್ವಯ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕೆ.ಪಿ.ಪಿ. ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದು ಭಾಗವಹಿಸಬಹುದಾಗಿದೆ.

ಕ್ರ.ಸಂ.1. ಇಂಡೆಂಟ್ ಸಂ.:DMA/2026-27/SE8105 **ಅಂದಾಜು ಮೊತ್ತ** (ರೂ.ಲಕ್ಷಗಳಲ್ಲಿ):49.32 **ಟೆಂಡರ್ ಇ.ಎಂ.ಡಿ:** 123300.00 **ಕಾಲಾವಧಿ:** 12 ತಿಂಗಳು
•) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ: 14.07.2026 ಸಮಯ: ಸಂಜೆ 4.30 ಗಂಟೆಗೆ •) ಟೆಂಡರ್ ಸಲ್ಲಿಸುವ ಕೊನೆಯ ದಿ: 15.07.2026 ಸಮಯ: ಸಂಜೆ 4.30 ಗಂಟೆವರೆಗೆ. •) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17.07.2026 ಸಮಯ :ಸಂಜೆ 4.30 ಗಂಟೆಗೆ •) ಆರ್ಥಿಕ ಬಿಡ್ ತೆರೆಯುವ ದಿನಾಂಕ : 18.07.2026 ಸಮಯ : ಸಂಜೆ 4.30 ಗಂಟೆಗೆ

ಸಹಿ/- ಅಧ್ಯಕ್ಷರು ಪುರಸಭೆ, ಸೊರಬ
ಸಹಿ/- ಮುಖ್ಯಾಧಿಕಾರಿ ಪುರಸಭೆ, ಸೊರಬ
ವಾ.ವಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/08/07/450

ಗೌರವಾನ್ವಿತ ಹೊಳಲ್ಕೆರೆ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ
ಸಿ.ಆರ್.ಮಿಸ್.ನಂ :136/2026

ಅರ್ಜಿದಾರರು: 1)ಭುವನ್ಯ ಕೋಂ ಹೊರಕೇರಪ್ಪ, ವಯಸ್ಸು 64 ವರ್ಷ, ಮನೆಕೆಲಸ, ಪಂಪಾಪುರ ಗ್ರಾಮ, ಹೊಳಲ್ಕೆರೆ ತಾಲ್ಲೂಕು. 2)ಗಿರಿಜಮ್ಮ ಕೋಂ ಲೇಟ್ ಸಿದ್ದಲಿಂಗಪ್ಪ, ವಯಸ್ಸು 67 ವರ್ಷ, 3)ಕರಿಯಪ್ಪ ಬಿನ್ ಲೇಟ್ ಸಿದ್ದಲಿಂಗಪ್ಪ, ವಯಸ್ಸು 46 ವರ್ಷ, 4)ಸೌಭಾಗ್ಯ ಕೋಂ ಜಗದೀಶ್, ವಯಸ್ಸು 39 ವರ್ಷ, ಅರ್ಜಿದಾರ ನಂ.2 ರಿಂದ 4 ರವರ ವಾಸ: ಹಲಕನಾಳ್ ಗ್ರಾಮ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ,

ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು/ಮಾನ್ಯ ತಹಶೀಲ್ದಾರ್ ರವರ ತಾಲ್ಲೂಕು ಕಛೇರಿ ಹೊಳಲ್ಕೆರೆ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಕೇಸಿನ 1ರಿಂದ4ನೇ ಅರ್ಜಿದಾರರ ಅಜ್ಜಿಯಾದ **ಕರಿಯಮ್ಮ ತಂದೆ ಲೇಟ್ ಬೈರಪ್ಪ** ರವರು ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ,ಪಂಪಾಪುರ ಗ್ರಾಮದಲ್ಲಿ **ದಿನಾಂಕ:03-04-1990** ರಂದು ಮರಣ ಹೊಂದಿರುತ್ತಾರೆ ಎಂದು ಮರಣ ಸಮರ್ಥನ ಪತ್ರ ಪಡೆಯಲು ಎದುರುದಾರರ ವಿರುದ್ಧ ಅರ್ಜಿದಾರರು ಮಾನ್ಯ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ **ಕರಿಯಮ್ಮ ತಂದೆ ಲೇಟ್ ಬೈರಪ್ಪ** ರವರ ಮರಣ ಸಮರ್ಥನ ಪತ್ರ ಪಡೆಯುವ ಬಗ್ಗೆ ಬೇರೆ ಯಾರಿಗಾದರೂ ತಂಟೆ ತಕರಾರು ಇದ್ದಲ್ಲಿ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ **ದಿನಾಂಕ:23-07-2026 ರಂದು ಬೆಳಗ್ಗೆ 11 ಗಂಟೆಗೆ** ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ ನನ್ನ ಸಹಿಯೊಂದಿಗೆ 30-06-2026 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
ಶ್ರೀ ಕೆ.ದಿನಕರ
ವಕೀಲರು, ಹೊಳಲ್ಕೆರೆ
ದಿನಾಂಕ:30-06-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು,
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಹೊಳಲ್ಕೆರೆ

ಗೌರವಾನ್ವಿತ ಹೊಳಲ್ಕೆರೆ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ
ಸಿ.ಆರ್.ಮಿಸ್.ನಂ :135/2026

ಅರ್ಜಿದಾರರು: 1)ಭುವನ್ಯ ಕೋಂ ಹೊರಕೇರಪ್ಪ, ವಯಸ್ಸು 64 ವರ್ಷ, ಮನೆಕೆಲಸ, ಪಂಪಾಪುರ ಗ್ರಾಮ, ಹೊಳಲ್ಕೆರೆ ತಾಲ್ಲೂಕು. 2)ಗಿರಿಜಮ್ಮ ಕೋಂ ಲೇಟ್ ಸಿದ್ದಲಿಂಗಪ್ಪ, ವಯಸ್ಸು 67 ವರ್ಷ, 3)ಕರಿಯಪ್ಪ ಬಿನ್ ಲೇಟ್ ಸಿದ್ದಲಿಂಗಪ್ಪ, ವಯಸ್ಸು 46 ವರ್ಷ, 4)ಸೌಭಾಗ್ಯ ಕೋಂ ಜಗದೀಶ್, ವಯಸ್ಸು 39 ವರ್ಷ, ಅರ್ಜಿದಾರ ನಂ.2 ರಿಂದ 4 ರವರ ವಾಸ: ಹಲಕನಾಳ್ ಗ್ರಾಮ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ,

ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು/ಮಾನ್ಯ ತಹಶೀಲ್ದಾರ್ ರವರ ತಾಲ್ಲೂಕು ಕಛೇರಿ ಹೊಳಲ್ಕೆರೆ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಕೇಸಿನ 1ನೇ ಅರ್ಜಿದಾರರ ತಂದೆ 2ನೇ ಅರ್ಜಿದಾರರ ಮಾವ 3 ಮತ್ತು 4ನೇ ಅರ್ಜಿದಾರರ ಅಜ್ಜನಾದ **ಕರಿಯಪ್ಪ ತಾಯಿ ಕರಿಯಮ್ಮ** ರವರು ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ,ಪಂಪಾಪುರ ಗ್ರಾಮದಲ್ಲಿ **ದಿನಾಂಕ:05-02-1995** ರಂದು ಮರಣ ಹೊಂದಿರುತ್ತಾರೆ ಎಂದು ಮರಣ ಸಮರ್ಥನ ಪತ್ರ ಪಡೆಯಲು ಎದುರುದಾರರ ವಿರುದ್ಧ ಅರ್ಜಿದಾರರು ಮಾನ್ಯ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ **ಕರಿಯಪ್ಪ ತಾಯಿ ಕರಿಯಮ್ಮ** ರವರ ಮರಣ ಸಮರ್ಥನ ಪತ್ರ ಪಡೆಯುವ ಬಗ್ಗೆ ಬೇರೆ ಯಾರಿಗಾದರೂ ತಂಟೆ ತಕರಾರು ಇದ್ದಲ್ಲಿ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ **ದಿನಾಂಕ:23-07-2026 ರಂದು ಬೆಳಗ್ಗೆ 11 ಗಂಟೆಗೆ** ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ ನನ್ನ ಸಹಿಯೊಂದಿಗೆ 30-06-2026 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
ಶ್ರೀ ಕೆ.ದಿನಕರ
ವಕೀಲರು, ಹೊಳಲ್ಕೆರೆ
ದಿನಾಂಕ:30-06-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು,
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಹೊಳಲ್ಕೆರೆ

ಹೊಳಲ್ಕೆರೆ ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ
ಸಿ.ಆರ್.ಮಿಸ್.ನಂ :95/2026

ಅರ್ಜಿದಾರರು: 1)ಶ್ರೀಮತಿ ವಿಶಾಲಾಕ್ಷಿ ಕೋಂ ಲೇಟ್ ಧರಣೇಂದ್ರ, @ಧರಣೇಂದ್ರ ಕುಮಾರ ಬಿ.ಎಸ್. ವಯಸ್ಸು ಸುಮಾರು 49 ವರ್ಷ, ಗೃಹಿಣಿ, ಚಿಕ್ಕಜಾಜೂರು ಗ್ರಾಮದ ವಾಸಿ, ಬಿ.ದುರ್ಗ ಹೋಬಳಿ, ಹೊಳಲ್ಕೆರೆ ತಾಲ್ಲೂಕು. 2)ಅರುಣಕುಮಾರ ಡಿ.ಬಿನ್ ಲೇಟ್ ಧರಣೇಂದ್ರ, @ಧರಣೇಂದ್ರ ಕುಮಾರ ಬಿ.ಎಸ್. ವಯಸ್ಸು ಸುಮಾರು 30 ವರ್ಷ, ವ್ಯಾಪಾರ ವೃತ್ತಿ, ಚಿಗನಾರಪ್ಪ ಸರ್ಕಲ್‌ನ ವಾಸಿ ಚಿಕ್ಕಜಾಜೂರು ಗ್ರಾಮ, ಬಿ.ದುರ್ಗ ಹೋಬಳಿ, ಹೊಳಲ್ಕೆರೆ ತಾಲ್ಲೂಕು. 3)ತಿಪ್ಪೇಸ್ವಾಮಿ ಬಿನ್ ಲೇಟ್ ಶಂಕರಪ್ಪ, ವಯಸ್ಸು ಸುಮಾರು 66 ವರ್ಷ, ಜಿರಾಯ್ತಿ ಕೆಲಸ, ಭೀಮಸಮುದ್ರ ಗ್ರಾಮದ ವಾಸಿ, ಭೀಮಸಮುದ್ರ ಹೋಬಳಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ. 4)ಎಸ್.ಜನಾರ್ಧನ ನೀರಗಂಟಿ ಬಿನ್ ಲೇಟ್ ಶಂಕರಪ್ಪ, ವಯಸ್ಸು ಸುಮಾರು 56 ವರ್ಷ, ವ್ಯವಸಾಯ ಸುಮಾರು 56 ವರ್ಷ, ವ್ಯವಸಾಯ ಮತ್ತು ನಿರಗಂಟಿ ಕೆಲಸ, ಗ್ರಾಮ ಪಂಚಾಯಿತಿ, ಭೀಮಸಮುದ್ರ ಗ್ರಾಮದ ವಾಸಿ, ಭೀಮಸಮುದ್ರ ಹೋಬಳಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ.

ವಿರುದ್ಧ

ಎದುರುದಾರರು : 1)ಗ್ರಾಮ ಲೆಕ್ಕಾಧಿಕಾರಿಗಳು, ರಂಗವ್ವನಹಳ್ಳಿ, ಬಿ.ದುರ್ಗ ಹೋಬಳಿ, ಹೊಳಲ್ಕೆರೆ ತಾಲ್ಲೂಕು, 2)ತಹಶೀಲ್ದಾರ್ ಜನನ ಮರಣ ನೋಂದಣಾಧಿಕಾರಿಗಳು, ಹೊಳಲ್ಕೆರೆ ಟೌನ್.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಹೊಳಲ್ಕೆರೆ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ 1ನೇ ಅರ್ಜಿದಾರರ ಗಂಡ, 2ನೇ ಅರ್ಜಿದಾರರ ತಂದೆ, 3 ಮತ್ತು 4ನೇ ಅರ್ಜಿದಾರರ ಸಹೋದರನಾದ **ಧರಣೇಂದ್ರ @ಧರಣೇಂದರ ಕುಮಾರ ಬಿನ್ ಶಂಕರಪ್ಪ** ಇವರು **ದಿನಾಂಕ:26-01-2004** ರಂದು ಹೊಳಲ್ಕೆರೆ ತಾಲ್ಲೂಕು, ಬಿ.ದುರ್ಗ ಹೋಬಳಿ, ರಂಗವ್ವನಹಳ್ಳಿ ಗ್ರಾಮದ ಹೊಲದಲ್ಲಿ ಮರಣ ಹೊಂದಿರುತ್ತಾರೆ ಎಂದು ಮರಣ ಪ್ರಮಾಣ ಪತ್ರ ಪಡೆಯಲು ತಹಶೀಲ್ದಾರ್ ರವರು ಇವರುಗಳ ವಿರುದ್ಧ ದೂರು ಸಲ್ಲಿಸಿರುತ್ತಾರೆ. ಸದರಿಯವರ ಮರಣ ಪತ್ರ ಪಡೆಯುವ ಬಗ್ಗೆ ಬೇರೆ ಯಾರಿಗಾದರೂ ತಂಟೆ ತಕರಾರು ಇದ್ದಲ್ಲಿ ಹೊಳಲ್ಕೆರೆ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ **ದಿನಾಂಕ:31-07-2026 ರಂದು ಬೆಳಗ್ಗೆ 11 ಗಂಟೆಗೆ** ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ ನನ್ನ ಸಹಿಯೊಂದಿಗೆ ದಿನಾಂಕ:15-06-2026 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
ಎಂ.ಎಸ್.ಚಂದ್ರಕಾಂತ್
ವಕೀಲರು, ಹೊಳಲ್ಕೆರೆ

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳಲ್ಕೆರೆ

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

ಗುರುವಾರದ ಪಂದ್ಯ

ಅಮೆರಿಕ-ಬೋಸ್ನಿಯಾ ಮತ್ತು ಹರ್ಜೆಗೋವಿನಾ, (ಬೆಳಗ್ಗೆ 5:30)

ಸ್ಪೇನ್-ಆಸ್ಟ್ರಿಯಾ (ಮಧ್ಯರಾತ್ರಿ 12:30)

ಕಿರುಸುದ್ದಿ

16ರ ಸುತ್ತಿಗೆ ಮೆಕ್ಸಿಕೊ: ವಿಜಯೋತ್ಸವ ವೇಳೆ 2 ಸಾವು

• **ಮೆಕ್ಸಿಕೊ ಸಿಟಿ:** ವಿಶ್ವಕಪ್‌ನಲ್ಲಿ ಮೆಕ್ಸಿಕೊ 16ರ ಸುತ್ತಿಗೆ ಲಗ್ಗೆ ಹಾಕಿದ ನಂತರ ನಡೆದ ಸಂಭ್ರಮಾಚರಣೆಯಲ್ಲಿ ಕನಿಷ್ಠ ಇಬ್ಬರು ಮೃತಪಟ್ಟರೆಂದು ವರದಿಯಾಗಿದೆ.

ಈ ಬಾರಿ ವಿಶ್ವಕಪ್ ಆತಿಥ್ಯ ವಹಿಸಿರುವ ಮೆಕ್ಸಿಕೊ ಈಕ್ವೆಡಾರ್ ವಿರುದ್ಧ ಗೆಲುವು ಸಾಧಿಸಿದ್ದು, ಬಹು ವರ್ಷಗಳ ನಂತರ ಪ್ರಿ-ಕ್ವಾರ್ಟರ್‌ಫೈನಲ್‌ಗೇರಿದೆ. ಈ ಬೆನ್ನಲ್ಲೇ ಮೆಕ್ಸಿಕೊ ಸಿಟಿಯಲ್ಲಿ ಸಂಭ್ರಮಾಚರಣೆಗಳು ನಡೆದವು. ಈ ಸಮಯದಲ್ಲಿ 19 ವರ್ಷದ ಯುವತಿ ಮತ್ತು 44 ವರ್ಷದ ಪುರುಷನೊಬ್ಬ ಸಾವಿಗೀಡಾಗಿದ್ದಾರೆ. ಅಲ್ಲಿನ ಸ್ಥಳೀಯ ಮಾಧ್ಯಮಗಳ ಪ್ರಕಾರ ತೀವ್ರ ನೂಕಾಟದಲ್ಲಿ ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ತನಿಖೆ ನಡೆಯಲಿದೆ.

ಪೋರ್ಚುಗಲ್ ಪಂದ್ಯಕ್ಕೆ ಅಧಿಕ ಬಿಸಿಲಿನ ಎಚ್ಚರಿಕೆ

• **ಟೊರೊಂಟೊ:** ಪೋರ್ಚುಗಲ್ ಮತ್ತು ಕ್ರೊಯೇಷಿಯಾ ನಡುವೆ ನಡೆಯಲಿರುವ ಫಿಫಾ ವಿಶ್ವಕಪ್ 32ರ ಸುತ್ತಿನ ಪಂದ್ಯವನ್ನು ವೀಕ್ಷಿಸಲು ಹೊರಟಿರುವ ಅಭಿಮಾನಿಗಳಿಗೆ ಪರಿಸರ ಕೆನಡಾ ಹೆಚ್ಚು ಬಿಸಿಲಿನ ಎಚ್ಚರಿಕೆ ನೀಡಿದ್ದು, ನೀರಿನ ಅಂಶವನ್ನು ಕಾಪಾಡಿಕೊಳ್ಳಲು ಮತ್ತು ಮದ್ಯ ಸೇವನೆಯನ್ನು ಮಿತಿಗೊಳಿಸಲು ಸೂಚಿಸಿದೆ. ನಿಮಗೆ ಬಾಯಾರಿಕೆಯಾಗುವವರೆಗೂ ಕಾಯಬೇಡಿ, ದಿನವಿಡೀ ನೀರು ಕುಡಿಯುತ್ತಲೇ ಇರಿ, ನಿಮ್ಮ ಮದ್ಯ ಸೇವನೆಯನ್ನು ಮಿತಗೊಳಿಸಲು ಪ್ರಯತ್ನಿಸಿ, ನಿಮಗೆ ತಿಳಿದಿದೆ, ಖಂಡಿತವಾಗಿಯೂ ಆಲ್ಕೋಹಾಲ್ ಹೆಚ್ಚು ನಿರ್ಜಲೀಕರಣಗೊಳಿಸುತ್ತದೆ ಎಂದು ಟೊರೊಂಟೊ ನಗರದ ಆರೋಗ್ಯ ವೈದ್ಯಕೀಯ ಅಧಿಕಾರಿ ಮಿಚೆಲ್ ಮೂರ್ತಿ ಹೇಳಿದರು. ಆರ್ದ್ರತೆಯಿಂದಾಗಿ ಗುರುವಾರ ಟೊರೊಂಟೊದಲ್ಲಿ ತಾಪಮಾನವು 40 ಡಿಗ್ರಿ ಸೆಲ್ಸಿಯಸ್‌ನಂತೆ ಭಾಸವಾಗಬಹುದು ಎಂದು ಮೂರ್ತಿ ಮಂಗಳವಾರ ರಾಯಿಟರ್ಸ್‌ಗೆ ತಿಳಿಸಿದರು.

ವಾರಿಯರ್ಸ್ ತಂಡಕ್ಕೆ ಜಯ

• **ಹುಬ್ಬಳ್ಳಿ:** ರಿತೇಶ ಭಟ್ಕಳ (66 ರನ್,39ಎ) ಅವರ ಅರ್ಧಶತಕ ನೆರವಿನಿಂದ ಮೈಸೂರ ವಾರಿಯರ್ಸ್ ತಂಡವು 2 ವಿಕೆಟ್ ಅಂತರದಿಂದ ಕೋಸ್ಟಲ್ ಕಿಂಗ್ಸ್ ಮಂಗಳೂರ ತಂಡದ ವಿರುದ್ಧ ಜಯಗಳಿಸಿತು. ಇಲ್ಲಿ ನಡೆದ ಮಹರಾಜ ಟ್ರೋಫಿ ಪಂದ್ಯದಲ್ಲಿ 1 ಎಸೆತ ಬಾಕಿ ಇರುವಾಗಲೇ ಮೈಸೂರ ತಂಡವೂ ಮಂಗಳೂರ ತಂಡವನ್ನು ಮಣಿಸಿತು. ಮಳೆಯಿಂದ ಪಂದ್ಯವನ್ನು 19 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಮಂಗಳೂರು ನೀಡಿದ 162 ರನ್ ಗುರಿ ಬೆನ್ನತ್ತಿದ ಮೈಸೂರು ತಂಡ ತನ್ನ ಎಂಟು ವಿಕೆಟ್ ಕಳೆದುಕೊಂಡು 167 ರನ್‌ಗಳಿಸಿ ಈ ಟೂರ್ನಿಯಲ್ಲಿ ಎರಡನೇ ಗೆಲವು ದಾಖಲಿಸಿತು.

ಹಾರ್ದಿಕ್ ಪಾಂಡ್ಯ ಹಿಂದೆ ಬಿದ್ದ 7 ಫ್ರಾಂಚೈಸಿ!

• **ಮುಂಬೈ:** ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರನ್ನು ಟ್ರೇಡ್ ಮಾಡಿಕೊಳ್ಳಲು ಸುಮಾರು 7 ಫ್ರಾಂಚೈಸಿಗಳು ದುಂಬಾಲು ಬಿದ್ದಿವೆ ಎಂದು ಹೇಳಲಾಗುತ್ತಿದೆ. ಕಳೆದ ಎರಡು ಆವೃತ್ತಿಗಳಲ್ಲಿ ಮುಂಬೈ ತಂಡವನ್ನು ಮುನ್ನಡೆಸಿ ವೈಫಲ್ಯ ಅನುಭವಿಸಿರುವ ಹಾರ್ದಿಕ್ ಪಾಂಡ್ಯ ಮುಂಬೈ ಇಂಡಿಯನ್ಸ್ ತಂಡದಿಂದ ಹೊರಬೀಳಲಿದ್ದಾರೆ ಎನ್ನಲಾಗಿದೆ. ಈ ನಡುವೆ ಹಾರ್ದಿಕ್ ಪಾಂಡ್ಯ ಅವರನ್ನು ಮುಂಬೈ ಬಿಟ್ಟರೆ ಯಾವ ತಂಡಕ್ಕೆ ಹೋಗಲಿದ್ದಾರೆ ಎಂಬ ವಿಚಾರ ಚರ್ಚೆಯಾಗುತ್ತಿತ್ತು. ಮೊದಲಿಗೆ ಚೆನ್ನೈ ತಂಡವನ್ನು ಸೇರಿಕೊಳ್ಳಲಿದ್ದಾರೆ ಎನ್ನಲಾಗಿತ್ತು. ನಂತರ ರಾಜಸ್ಥಾನ ತಂಡದವರು ಹಾರ್ದಿಕ್ ಅವರನ್ನು ಟ್ರೇಡ್ ಮಾಡಿಕೊಳ್ಳಲಿದ್ದಾರೆ ಎಂದೂ ಹೇಳಲಾಗಿತ್ತು. ಆರ್‌ಸಿಬಿ, ಹೈದರಾಬಾದ್ ಸೇರಿದಂತೆ ಈಗ ಒಟ್ಟು 7 ತಂಡಗಳು ಹಾರ್ದಿಕ್ ಪಾಂಡ್ಯ ಅವರನ್ನು ಟ್ರೇಡ್ ಮಾಡಿಕೊಳ್ಳಲು ಯೋಜನೆ ಹಾಕಿಕೊಂಡಿವೆ ಎಂದು ವರದಿಯಾಗಿದೆ.

ಇಂದಿನಿಂದ ಎರಡನೇ ಟೆಸ್ಟ್

• **ಗಾಲೆ:** ಭಾರತ ಹಾಗೂ ಶ್ರೀಲಂಕಾ ಎ ತಂಡಗಳ ನಡುವೆ ನಡೆಯುತ್ತಿರುವ ಅನಧಿಕೃತ ಟೆಸ್ಟ್ ಸರಣಿಯ ಎರಡನೇ ಪಂದ್ಯವು ಗುರುವಾರದಿಂದ ಶುರುವಾಗಲಿದೆ. ಮೊದಲ ಪಂದ್ಯ ಡ್ರಾದಲ್ಲಿ ಅಂತ್ಯವಾದ ಬಳಿಕ ಎರಡನೇ ಪಂದ್ಯ ನಿರ್ಣಾಯಕವಾಗಲಿದೆ. ಹಿಂದಿನ ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ ಮಾಡಿದ್ದ ಭಾರತ ಬೌಲಿಂಗ್ ಮಾಡುವ ವೇಳೆ ಅಲ್ಪ ಹಿನ್ನಡೆ ಅನುಭವಿಸಿತ್ತು. ನಾಲ್ಕು ಇನ್ನಿಂಗ್ಸ್‌ಗಳ ನಂತರ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತ್ತು.

ಫ್ರಾನ್ಸ್‌ಗೆ ಭರ್ಜರಿ ಗೆಲುವು | ಪ್ರಿ-ಕ್ವಾರ್ಟರ್‌ಗೆ ಲಗ್ಗೆ | ಕಿಲಿಯನ್ ದ್ವಿಗೋಲು | ಬ್ರಾಡ್ಲಿ ಒಂದು ಗೋಲು

ಎಂಬಾಪ್ಪೆ ಆಟಕ್ಕೆ ಬಸವಳಿದ ಸ್ವೀಡನ್





• **ಈಸ್ಟ್ ರುದರ್‌ಫೋರ್ಡ್:** ಕಿಲಿಯನ್ ಎಂಬಾಪ್ಪೆ ಮತ್ತೊಮ್ಮೆ ತಮ್ಮ ಕರಾರುವಾಕ್ ಪ್ರದರ್ಶನದೊಂದಿಗೆ ಮಿಂಚಿದ್ದು ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಫ್ರಾನ್ಸ್ ತಂಡವು ಸ್ವೀಡನ್ ವಿರುದ್ಧ 3-0ರಿಂದ ಭರ್ಜರಿ ಗೆಲುವು ದಾಖಲಿಸಿದೆ.

ಪಂದ್ಯದ 45ನೇ ನಿಮಿಷದಲ್ಲಿ ತಮ್ಮ ಸ್ವಾಭಾವಿಕ ಮಿಂಚಿನಾಟ ಪ್ರದರ್ಶಿಸಿದ ಎಂಬಾಪ್ಪೆ ಮೊದಲ ಗೋಲು ದಾಖಲಿಸಿ ಫ್ರಾನ್ಸ್‌ಗೆ ಮುನ್ನಡೆ ತಂದುಕೊಟ್ಟರು. 53ನೇ ನಿಮಿಷದಲ್ಲಿ ಬ್ರಾಡ್ಲಿ ಬಾರ್ಕೊಲಾ ಗೋಲು ಗಳಿಸಿ ಮುನ್ನಡೆಯನ್ನು 2-0ಕ್ಕೆ ಹಿಗ್ಗಿಸಿದರು. 74ನೇ ನಿಮಿಷದಲ್ಲಿ ಮತ್ತೊಮ್ಮೆ ಗೋಲು ಬಾರಿಸಿದ ಎಂಬಾಪೆ ಫ್ರಾನ್ಸ್ ಗೆಲುವು ಖಚಿತ ಪಡಿಸಿದರು.

ಪಂದ್ಯದ ಬಹುಪಾಲು ಸಮಯ ಫ್ರಾನ್ಸ್ ಸಂಪೂರ್ಣ ಮೇಲುಗೈ ಸಾಧಿಸಿತು. ಈ ಆಟಕ್ಕೆ ನಲುಗಿದ ಎದುರಾಳಿಗಳು ಯಾವುದೇ ಹಂತದಲ್ಲೂ ಕಂಬ್ಯಾಕ್ ಮಾಡಲಾಗಲಿಲ್ಲ. ಈ ಗೆಲುವಿನೊಂದಿಗೆ ಫ್ರಾನ್ಸ್ ತಂಡ ಜುಲೈ 4ರಂದು ಫಿಲಡೆಲ್ಫಿಯಾದಲ್ಲಿ ನಡೆಯಲಿರುವ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಪರಾಗ್ವೆ ವಿರುದ್ಧ ಸೆಣಸಲಿದ್ದು, ಜಯಶಾಲಿ ತಂಡ ಕ್ವಾರ್ಟರ್‌ಫೈನಲ್‌ನಲ್ಲಿ ಕೆನಡಾ ಅಥವಾ ಮೊರೊಕ್ಕೊವನ್ನು ಎದುರಿಸಲಿದೆ.

ಮತ್ತೊಂದು ದಿನ ಮತ್ತೊಂದು ದಾಖಲೆ: ಈ ಎರಡು ಗೋಲುಗಳೊಂದಿಗೆ ಎಂಬಾಪ್ಪೆ ತಮ್ಮ ಗೋಲುಗಳ ಸಂಖ್ಯೆಯನ್ನು ಆರಕ್ಕೇರಿಸಿದ್ದು, ಟೂರ್ನಿಯ ಅಗ್ರ ಸ್ಕೋರರ್ ಪಟ್ಟಿಯಲ್ಲಿ ಲಿಯೋನೆಲ್ ಮೆಸ್ಸಿಯನ್ನು ಸರಿಗಟ್ಟಿದ್ದಾರೆ. ಜೊತೆಗೆ ವಿಶ್ವಕಪ್ ನಾಕೌಟ್ ಹಂತದಲ್ಲಿ ಒಟ್ಟು 10 ಗೋಲುಗಳನ್ನು ಗಳಿಸಿ ಬ್ರೆಜಿಲ್‌ನ ದಂತಕಥೆಗಳಾದ ಲಿಯೊನಿಡಾಸ್ ಮತ್ತು ರೊನಾಲ್ಡೊ ಅವರ ದಾಖಲೆಯನ್ನು ಹಿಂದಿಕ್ಕಿದ್ದಾರೆ.

ಗೋಲು ಪಟ್ಟಿ

- ಕಿಲಿಯನ್ ಎಂಬಾಪೆ ಎರಡು ಗೋಲು (45ನೇ, 74ನೇ ನಿಮಿಷ)
- ಬ್ರಾಡ್ಲಿ ಬಾರ್ಕೊಲಾ ಒಂದು ಗೋಲು (53ನೇ ನಿಮಿಷ)
- ವಿಶ್ವಕಪ್ ನಾಕೌಟ್ ಹಂತದಲ್ಲಿ ಎಂಬಾಪೆಗೆ ದಾಖಲೆ 10 ಗೋಲು
- 6ರ ಸುತ್ತಲ್ಲಿ ಪರಾಗ್ವೆ ವಿರುದ್ಧ ಸೆಣಸಾಟ

ಮುನ್ನಡೆ ಮೆಕ್ಸಿಕೊ



• **ಮೆಕ್ಸಿಕೊ ಸಿಟಿ:** ಆತಿಥೇಯ ಮೆಕ್ಸಿಕೊ ತಂಡ ಈಕ್ವೆಡಾರ್ ವಿರುದ್ಧ 2-0 ಗೋಲುಗಳ ಅಂತರದಲ್ಲಿ ಗೆದ್ದು 40 ವರ್ಷಗಳ ಬಳಿಕ ವಿಶ್ವಕಪ್ ನಾಕೌಟ್ ಹಂತದಲ್ಲಿ ಮೊದಲ ಜಯ ದಾಖಲಿಸಿದೆ. ಪಂದ್ಯದ 22ನೇ ನಿಮಿಷದಲ್ಲಿ ಜುಲಿಯನ್ ಕ್ವಿನೋನ್ಸ್ ಗೋಲು ದಾಖಲಿಸಿ ಮೆಕ್ಸಿಕೊಗೆ ಮುನ್ನಡೆ ತಂದುಕೊಟ್ಟರು.

ಬಳಿಕ 31ನೇ ನಿಮಿಷದಲ್ಲಿ ರೌಲ್ ಜಿಮೆನೆಸ್ ಮತ್ತೊಂದು ಗೋಲು ಬಾರಿಸಿ ತಂಡದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಈ ಮುನ್ನಡೆಯನ್ನು ಕೊನೆಯವರೆಗೂ ಕಾಯ್ದುಕೊಂಡ ಮೆಕ್ಸಿಕೊ ಸುಲಭ ಜಯ ಸಾಧಿಸಿತು.1986ರಲ್ಲಿ ಬಲ್ಗೇರಿಯಾವನ್ನು ಮಣಿಸಿದ ಬಳಿಕ ವಿಶ್ವಕಪ್ ನಾಕೌಟ್ ಹಂತದಲ್ಲಿ ಮೆಕ್ಸಿಕೊ ಯಾವುದೇ ಪಂದ್ಯ ಗೆದ್ದಿರಲಿಲ್ಲ, 1994ರಿಂದ 2018ರವರೆಗೆ ಸತತ ಏಳು ಬಾರಿ ಈ ಹಂತದಲ್ಲೇ ನಿರ್ಗಮಿಸಿದ್ದ ತಂಡ, ಈ ಗೆಲುವಿನೊಂದಿಗೆ ನಾಲ್ಕು ದಶಕಗಳ ನಿರೀಕ್ಷೆಗೆ ತೆರೆ ಎಳೆದಿದೆ. ಜುಲಿಯನ್ ಕ್ವಿನೋನ್ಸ್ ಈ ಟೂರ್ನಿಯಲ್ಲಿ ತಮ್ಮ ಮೂರನೇ ಗೋಲು ದಾಖಲಿಸಿದರೆ, ರೌಲ್ ಜಿಮೆನೆಸ್ ರಾಷ್ಟ್ರೀಯ ತಂಡದ ಪರ 47ನೇ ಗೋಲು ಬಾರಿಸಿ ಮೆಕ್ಸಿಕೊದ ಸಾರ್ವಕಾಲಿಕ ಅಗ್ರ ಗೋಲುಗಾರರ ಪಟ್ಟಿಯಲ್ಲಿ ಮತ್ತಷ್ಟು ಮೇಲಕ್ಕೇರಿದರು. ಗುಡುಗು-ಮಳೆಯ ಕಾರಣ ನಿಗದಿತ ಸಮಯಕ್ಕಿಂತ ಒಂದು ಗಂಟೆ ತಡವಾಗಿ ಆರಂಭವಾದ ಪಂದ್ಯದಲ್ಲಿ ಮೆಕ್ಸಿಕೊ ಸಂಪೂರ್ಣ ಮೇಲುಗೈ ಸಾಧಿಸಿತು. ಈ ಜಯದೊಂದಿಗೆ ಮೆಕ್ಸಿಕೊ ಸತತ 12 ಪಂದ್ಯಗಳ ಅಜೇಯ ಓಟವನ್ನು ಮುಂದುವರಿಸಿದ್ದು, ಪ್ರೀಕ್ವಾರ್ಟರ್‌ಫೈನಲ್ ನಲ್ಲಿ ಇಂಗ್ಲೆಂಡ್-ಕಾಂಗೊ ಪಂದ್ಯದ ವಿಜೇತರನ್ನು ಎದುರಿಸಲಿದೆ.

ಅಂಕಿ-ಅಂಶ

- ಮೆಕ್ಸಿಕೊ 2-0 ಈಕ್ವೆಡಾರ್
- ಜುಲಿಯನ್ ಕ್ವಿನೋನ್ಸ್ (22ನೇ ನಿಮಿಷ)
- ರೌಲ್ ಜಿಮೆನೆಸ್ (31ನೇ ನಿಮಿಷ)
- 40 ವರ್ಷಗಳ ಬಳಿಕ ವಿಶ್ವಕಪ್ ನಾಕೌಟ್ ಹಂತದಲ್ಲಿ ಮೆಕ್ಸಿಕೊಗೆ ಮೊದಲ ಗೆಲುವು

ಮೊದಲ ಬಾರಿ ನಾಕೌಟ್‌ನಲ್ಲಿ ಗೆದ್ದ ನಾರ್ವೆ

• **ಆರ್ಲಿಂಗ್ಟನ್:** ಸ್ಟಾರ್ ಸ್ಟ್ರೈಕರ್ ಎರ್ಲಿಂಗ್ ಹಾಲೆಂಡ್ ಅವರ ಅಂತಿಮ ಕ್ಷಣದ ಗೋಲಿನ ನೆರವಿನಿಂದ ನಾರ್ವೆ ತಂಡ ನಾಕೌಟ್ ಪಂದ್ಯದಲ್ಲಿ ಐವರಿ ಕೋಸ್ಟ್ ವಿರುದ್ಧ 2-1 ಗೋಲುಗಳ ಅಂತರದಲ್ಲಿ ಜಯ ಸಾಧಿಸಿ ಇತಿಹಾಸ ನಿರ್ಮಿಸಿತು.

ಪಂದ್ಯದ 39ನೇ ನಿಮಿಷದಲ್ಲಿ ಆಂಟೋನಿಯೊ ನುಸಾ ಸುಂದರ ಕರ್ಲಿಂಗ್ ಶಾಟ್ ಮೂಲಕ ಗೋಲು ದಾಖಲಿಸಿ ನಾರ್ವೆಗೆ ಮುನ್ನಡೆ ತಂದುಕೊಟ್ಟರು. ದ್ವಿತೀಯಾರ್ಧದ 74ನೇ ನಿಮಿಷದಲ್ಲಿ ಅಮಾದ್ ಡಿಯಾಲೊ ಗೋಲು ಗಳಿಸಿ ಐವರಿ ಕೋಸ್ಟ್‌ಗೆ ಸಮಬಲ ತಂದುಕೊಟ್ಟರು.

ಪಂದ್ಯ ಹೆಚ್ಚುವರಿ ಸಮಯದತ್ತ ಸಾಗುವಂತೆ ಕಂಡಾಗ, 86ನೇ ನಿಮಿಷದಲ್ಲಿ ಪ್ಯಾಟ್ರಿಕ್ ಬೆರ್ಗ್ ನೀಡಿದ ಪಾಸ್ ಅನ್ನು ಅದ್ಭುತವಾಗಿ ಗೋಲಾಗಿ ಪರಿವರ್ತಿಸಿದ ಎರ್ಲಿಂಗ್ ಹಾಲೆಂಡ್ ನಾರ್ವೆಗೆ ನಿರ್ಣಾಯಕ ಮುನ್ನಡೆ ತಂದುಕೊಟ್ಟರು. ಇದು ಈ ವಿಶ್ವಕಪ್‌ನಲ್ಲಿ ಹಾಲೆಂಡ್ ಅವರ ಐದನೇ ಗೋಲು ಹಾಗೂ ರಾಷ್ಟ್ರೀಯ ತಂಡದ ಪರ 60ನೇ ಗೋಲಾಗಿತ್ತು. ಇಂಜುರಿ ಸಮಯದಲ್ಲಿ ಐವರಿ ಕೋಸ್ಟ್‌ಗೆ ಸಮಬಲ ಸಾಧಿಸಲು ಅವಕಾಶ ಸಿಕ್ಕರೂ, ಗೋಲ್ ಕೀಪರ್ ಓರ್ಜನ್ ನೈಲ್ಯಾಂಡ್ ಅಮೋಘ ಸೇವ್ ಮಾಡುವ ಮೂಲಕ ನಾರ್ವೆಯ ಗೆಲುವನ್ನು ಖಚಿತಪಡಿಸಿದರು.

ಈ ಜಯದೊಂದಿಗೆ ವಿಶ್ವಕಪ್ ಇತಿಹಾಸದಲ್ಲಿ ಮೊದಲ ಬಾರಿಗೆ ನಾರ್ವೆ ನಾಕೌಟ್ ಹಂತದ ಪಂದ್ಯದಲ್ಲಿ ಗೆಲುವು ಸಾಧಿಸಿದ್ದು, ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡವನ್ನು ಎದುರಿಸಲಿದೆ.

ನಾರ್ವೆ 2-1 ಕೋಸ್ಟ್

- ಆಂಟೋನಿಯೊ ನುಸಾ (39ನೇ ನಿಮಿಷ), ಅಮಾದ್ ಡಿಯಾಲೊ (74ನೇ ನಿಮಿಷ), ಎರ್ಲಿಂಗ್ ಹಾಲೆಂಡ್ (86ನೇ ನಿಮಿಷ)



ಕಿಶನ್ ಟಿ20ಯ ನಂ.1 ಬ್ಯಾಟರ್

• **ದುಬೈ:** ಭಾರತ ತಂಡದ ಬ್ಯಾಟರ್, ವಿಕೆಟ್ ಕೀಪರ್ ಇಶಾನ್ ಕಿಶನ್ ಅಂತಾರಾಷ್ಟ್ರೀಯ ಕ್ರಿಕೆಟ್ ಟಿ20 ಶ್ರೇಯಾಂಕ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಭಾರತ ತಂಡದವರೇ ಆದ ಅಭಿಷೇಕ್ ಶರ್ಮಾ ಅವರನ್ನು ಹಿಂದಿಕ್ಕಿರುವ ಇಶಾನ್ ಕಿಶನ್ ಭರ್ಜರಿ ಪ್ರದರ್ಶನ ನೀಡುತ್ತಾ ಬಂದಿದ್ದಾರೆ.



ಕಳೆದ ವರ್ಷ ವಿಜಯ್ ಹಜಾರೆ ಟ್ರೋಫಿ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಅವರನ್ನು ಜನವರಿಯಲ್ಲಿ ನಡೆದ ಇಂಗ್ಲೆಂಡ್ ಸರಣಿಗೆ ಆಯ್ಕೆ ಮಾಡಲಾಗಿತ್ತು. ಸ್ಫೋಟಕ ಬ್ಯಾಟಿಂಗ್ ಮಾಡಿದ ನಂತರ ಟಿ20 ವಿಶ್ವಕಪ್‌ಗೂ ಅವರನ್ನು ಆಯ್ಕೆ ಮಾಡಲಾಯಿತು. ಪಂದ್ಯಾವಳಿಯಲ್ಲಿ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ಕಿಶನ್ ಗೆಲುವಿನಲ್ಲಿ ಮಿಂಚಿದರು. ನಂತರ ಅವರನ್ನು ಟಿ20 ತಂಡದಲ್ಲಿ ಖಾಯಂ ಸದಸ್ಯರಾಗಿ ಆಯ್ಕೆ ಮಾಡಲಾಗುತ್ತಿದೆ. ಈ ನಡುವೆ ವಿಶ್ವಕಪ್‌ನಲ್ಲಿ 317 ರನ್ ಗಳಿಸಿದ ಅವರು ಐರ್ಲೆಂಡ್ ಸರಣಿಯಲ್ಲಿ ವೈಫಲ್ಯ ಅನುಭವಿಸಿದ್ದರೂ ಮೇಲೇರಿದ್ದಾರೆ. 876 ರೇಟಿಂಗ್ ಅಂಕಗಳನ್ನು ಪಡೆದಿರುವ ಕಿಶನ್ ನಂಬರ್ 1 ಸ್ಥಾನಕ್ಕೇರಿದರೆ, 869 ಅಂಕಗಳನ್ನು ಹೊಂದಿರುವ ಅಭಿಷೇಕ್ ಶರ್ಮಾ ಎರಡನೇ ಶ್ರೇಯಾಂಕದಲ್ಲಿದ್ದಾರೆ. ತಿಲಕ್ ವರ್ಮಾ 6ನೇ ಸ್ಥಾನದಲ್ಲಿದ್ದಾರೆ. ಸೂರ್ಯಕುಮಾರ್ ಯಾದವ್ 8ನೇ ಸ್ಥಾನಕ್ಕೆ ಕುಸಿದಿದ್ದಾರೆ.

ಬೌಲಿಂಗ್‌ನಲ್ಲಿ ರಶೀದ್ ಖಾನ್ ತಮ್ಮ ಅಗ್ರ ಸ್ಥಾನ ಮುಂದುವರಿಸಿದ್ದಾರೆ. ಎರಡನೇ ಸ್ಥಾನದಲ್ಲಿದ್ದ ವರುಣ್ ಚಕ್ರವರ್ತಿ ಒಂದು ಸ್ಥಾನ ಇಳಿತ ಕಂಡಿದ್ದು, ಪಾಕಿಸ್ತಾನದ ಅಬ್ರಾರ್ ಎರಡನೇ ಸ್ಥಾನಕ್ಕೇರಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಕೂಡ ಒಂದು ಸ್ಥಾನ ಇಳಿದಿದ್ದು, 6ನೇ ಶ್ರೇಯಾಂಕದಲ್ಲಿದ್ದಾರೆ. ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಬದಲಾವಣೆಯಾಗಿದ್ದು ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಮೊದಲ ಬಾರಿಗೆ ಅಗ್ರಸ್ಥಾನಕ್ಕೇರಿದ್ದಾರೆ. ಶುಭಮನ್ ಗಿಲ್ ಎರಡು ಸ್ಥಾನಗಳ ಜಿಗಿತ ಕಂಡಿದ್ದು 6ನೇ ಸ್ಥಾನಕ್ಕೇರಿದ್ದಾರೆ.

ಡುರಾಂಡ್ ಕಪ್: ಐತಿಹಾಸಿಕ ಪಂದ್ಯಾವಳಿಗೆ 4 ನಗರ ಆತಿಥ್ಯ

ಕೋಲ್ಕತ್ತಾದಲ್ಲಿ ಫೈನಲ್ ಪಂದ್ಯ

• **ಕೋಲ್ಕತ್ತಾ:** ಬಹು ನಿರೀಕ್ಷಿತ ಡುರಾಂಡ್ ಕಪ್ ಪಂದ್ಯಾವಳಿಯಲ್ಲಿ ಭಾಗವಹಿಸುವ ತಂಡಗಳ ಸಂಖ್ಯೆಯನ್ನು 24ಕ್ಕೆ ಏರಿಸಲಾಗಿದ್ದು, ಹೊಸದಾಗಿ 7 ತಂಡಗಳು ಸೇರ್ಪಡೆಗೊಳ್ಳಲಿವೆ.

ಐತಿಹಾಸಿಕ ಪಂದ್ಯಾವಳಿಯ 134ನೇ ಆವೃತ್ತಿ ಐದು ನಗರಗಳಲ್ಲಿ ಜುಲೈ 25ರಿಂದ ಆಗಸ್ಟ್ 23ರ ವರೆಗೆ ನಡೆಯಲಿದೆ ಎಂದು ಆಯೋಜಕರು ಬುಧವಾರ ತಿಳಿಸಿದರು. ಕೋಲ್ಕತ್ತಾದಲ್ಲಿ ಆರಂಭಿಕ ಪಂದ್ಯಗಳು ನಡೆಯುತ್ತವೆ. ನಂತರ ರಾಂಚಿ, ಇಂಫಾಲ್, ಗುವಾಹಟಿ, ಶಿಲ್ಲಾಂಗ್‌ನಲ್ಲಿ ಮುಂದಿನ ಪಂದ್ಯಗಳು ನಡೆಯುತ್ತವೆ. ಕೋಲ್ಕತ್ತಾ ಪಂದ್ಯಾವಳಿಯ ಆಯೋಜಕ ಹಬ್ ಆಗಿ ಕಾರ್ಯ ನಿರ್ವಹಿಸಲಿದೆ. ಎರಡು ಗುಂಪುಗಳ ಲೀಗ್ ಪಂದ್ಯಗಳು ಇಲ್ಲೇ ನಡೆಯಲಿವೆ. ಅಲ್ಲದೆ, ಎರಡು ಕ್ವಾರ್ಟರ್‌ಫೈನಲ್, ಒಂದು ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಕ್ಕೂ ಕೋಲ್ಕತ್ತಾ ಆತಿಥ್ಯ ನೀಡಲಿದೆ. ಕೋಲ್ಕತ್ತಾ ಕ್ಲಬ್ 17 ಬಾರಿಯ ಚಾಂಪಿಯನ್ ಮೋಹನ್ ಬಗಾನ್, ಈಸ್ಟ್ ಬಂಗಾಳ, ಮೊಹಮ್ಮದೇನ್ ಎಸ್‌ಸಿ, ಸೌತ್ ಯುನೈಟೆಡ್ ಎಫ್‌ಸಿ, ಸಿಐಎಸ್‌ಎಫ್, ಇಂಡಿಯನ್ ಆರ್ಮಿ ಮತ್ತು ಇದೇ ಮೊದಲ ಬಾರಿಗೆ ಸ್ಪರ್ಧಿಸಲಿರುವ ಬಾಘಪತ್ ಎಫ್‌ಸಿ ಹಾಗೂ ಸಾಮಲೇಶ್ವರಿ ಸ್ಪೋರ್ಟಿಂಗ್ ತಂಡಗಳ ಜತೆಗೆ ಲೀಗ್ ಪಂದ್ಯಗಳನ್ನಾಡಲಿದೆ.

ರಾಂಚಿಯಲ್ಲಿ ಒಂದು ಕ್ವಾರ್ಟರ್‌ಫೈನಲ್ ನಡೆಯಲಿದೆ. ಅಲ್ಲಿ ಜುಲೈ 26ರಿಂದ ಆಗಸ್ಟ್ 17ರವರೆಗಿನ ಪಂದ್ಯಗಳು ನಡೆಯುತ್ತವೆ. ನೂತನ ಕ್ಲಬ್ ಡಿಫೆನ್ಸ್ ಫೋರ್ಸ್ ಮತ್ತು ಶ್ರೀಲಂಕನ್ ಆರ್ಮ್ಡ್ ಫೋರ್ಸ್ ರಾಂಚಿ ಇರುವ ಗುಂಪಿನಲ್ಲಿದೆ. ಶಿಲ್ಲಾಂಗ್‌ನಲ್ಲೂ ಒಂದು ಸೆಮಿಫೈನಲ್ ಪಂದ್ಯ ನಡೆಯಲಿದೆ. ಜುಲೈ 31ರಿಂದ ಆಗಸ್ಟ್ 20ರವರೆಗಿನ ಪಂದ್ಯಗಳು ಅಲ್ಲಿ ನಡೆಯಲಿವೆ.

ವಿಂಬಲ್ಡನ್: ಮಹಿಳೆಯರ ವಿಭಾಗದಲ್ಲಿ ಸೆಬಲೆಂಕಾಗೆ ಗೆಲುವು

ಮೂರನೇ ಸುತ್ತಿಗೆ ಯಾನಿಕ್ ಸಿನ್ನರ್



• **ವಿಂಬಲ್ಡನ್:** ತಮ್ಮ ಆಕ್ರಮಣಕಾರಿ ಆಟವನ್ನು ಮುಂದುವರಿಸಿರುವ ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ಪ್ರತಿಷ್ಠಿತ ವಿಂಬಲ್ಡನ್ ಪಂದ್ಯಾವಳಿಯ ಎರಡನೇ ಸುತ್ತಿನ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಬುಧವಾರ ನಡೆದ ಪಂದ್ಯದಲ್ಲಿ ನೂನೊ ಬಾರ್ಜಸ್ ಅವರನ್ನು ಎದುರಿಸಿದ್ದ ಅವರು, ಮೂರು ಸೆಟ್‌ಗಳಲ್ಲಿ ಗೆಲುವು ಸಾಧಿಸಿದರು. ಹೋರಾಟದಿಂದ ಕೂಡಿದ್ದ ಸೆಟ್‌ಗಳಲ್ಲಿ ಸಿನ್ನರ್ ಮೊದಲಿಗೆ 7(7)-6(4)ರಿಂದ ಗೆದ್ದರು. ನಂತರ 7(7)-6(2) ರಿಂದ ಗೆದ್ದು ಮುನ್ನಡೆ ಸಾಧಿಸಿದರು. ಮೂರನೇ ಸೆಟ್‌ನಲ್ಲಿ ಇನ್ನಷ್ಟು ದಾಳಿ ನಡೆಸಿದ ಸಿನ್ನರ್ 6-4ರಿಂದ ಗೆದ್ದು ಮುಂದಿನ ಸುತ್ತಿಗೆ ಮುನ್ನಡೆದರು. ಪಂದ್ಯಾವಳಿಯ ಮತ್ತೊಂದು ಪಂದ್ಯದಲ್ಲಿ ಪೌಲ್ ಸೋನ್-ವೂ ಅವರೊಂದಿಗೆ 6-3, 7(7)-6(4), 6-2ರಿಂದ ಗೆಲುವು ಸಾಧಿಸಿದರು.

ಮೊದಲ ಸುತ್ತಲ್ಲೇ ಸೆರೇನಾ ಔಟ್

ಬಹು ವರ್ಷಗಳ ನಂತರ ಟೆನಿಸ್‌ಗೆ ಮರಳಿರುವ ಸೆರೇನಾ ವಿಲಿಯಮ್ಸ್ ಮೊದಲ ಸೆಟ್‌ನಲ್ಲೇ ಆಘಾತಕಾರಿ ಸೋಲನುಭವಿಸಿದರು. ತಮ್ಮ 44ನೇ ವಯಸ್ಸಿನಲ್ಲಿ ಟೆನಿಸ್ ಅಂಗಳಕ್ಕೆ ಮರಳಿದ್ದ ಅವರು, ತೀವ್ರ ಹೋರಾಟದ ನಂತರ ಆಸ್ಟ್ರೇಲಿಯಾದ ಮಾಯಾ ಜಾಯಿಂಟ್ ಅವರೊಂದಿಗೆ ಸೋತರು. ಮೊದಲನೇ ಸೆಟ್ ಅನ್ನು ಮಾಯಾ 6-3ರಿಂದ ಗೆದ್ದರು. ಎರಡನೇ ಸೆಟ್‌ನಲ್ಲಿ ತೀವ್ರ ಹೋರಾಟದ ನಂತರ 7(8)-6(6)ರಿಂದ ಸೆರೇನಾ ಗೆಲುವು ದಾಖಲಿಸಿದರು. ಆದರೆ ಮೂರನೇ ಸೆಟ್‌ನಲ್ಲಿ ಮಾಯಾ 6-3ರಿಂದ ಗೆದ್ದು ಸೆರೇನಾ ಅವರನ್ನು ಹೊರನೂಕಿದರು. ಜಪಾನ್‌ನ ಅಗ್ರಶ್ರೇಯಾಂಕದ ಒಸಾಕಾ, ಅನಸ್ತೇಷ್ಯಾ ಅವರೊಂದಿಗೆ ಜಯಭೇರಿ ಬಾರಿಸಿದರು. ಮತ್ತೊಂದು ಪಂದ್ಯದಲ್ಲಿ ಕೆಸ್ಲೆರ್ ಅವರನ್ನು ಎದುರಿಸಿದ್ದ ನಂಬರ್ 1 ಆಟಗಾರ್ತಿ ಆರಿನಾ ಸೆಬಲೆಂಕಾ ಎರಡು ರೋಚಕ ಸೆಟ್ ಪಂದ್ಯದಲ್ಲಿ ಜಯಿಸಿದರು. ಮೊದಲನಿಂದಲೂ ಭರ್ಜರಿ ಹಿಡಿತ ಸಾಧಿಸಿದ ಸೆಬಲೆಂಕಾ 6-1 ರಿಂದ ಗೆಲುವು ದಾಖಲಿಸಿದರು. ಎರಡನೇ ಸೆಟ್‌ನಲ್ಲಿ ಎದುರಾಳಿ ಪ್ರಬಲ ಸ್ಪರ್ಧೆ ಕೊಟ್ಟರು. ಟೈಬ್ರೇಕ್‌ಗಾಗಿ ತೀವ್ರ ಫೈಟ್ ನಡೆಯಿತು. ಆದಾಗ್ಯೂ ಸೆಬಲೆಂಕಾ 7(11)-6(9)ರಿಂದ ಗೆಲುವು ದಾಖಲಿಸಿದರು.

ಇಂದು ಇಂಗ್ಲೆಂಡ್-ದ.ಆಫ್ರಿಕಾ ಸೆಮಿ

• **ಲಾರ್ಡ್ಸ್:** ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ಹಾಗೂ ದ.ಆಫ್ರಿಕಾ ತಂಡಗಳು ಎದುರಾಗಲಿದ್ದು, ಗುರುವಾರ ಈ ಪಂದ್ಯ ಲಾರ್ಡ್ಸ್‌ನಲ್ಲಿ ನಡೆಯಲಿದೆ.

ಪಂದ್ಯಾವಳಿಯ ಫೈನಲ್ ಭಾನುವಾರದಂದು ನಡೆಯಲಿದ್ದು, ಈಗಾಗಲೇ ವಿಂಡೀಸ್ ತಂಡವನ್ನು ಮಣಿಸಿರುವ ಆಸ್ಟ್ರೇಲಿಯಾ ತಂಡವು ಫೈನಲ್‌ಗೇರಿದೆ. ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಬಲಿಷ್ಠ ಇಂಗ್ಲೆಂಡ್ ಹಾಗೂ ದ.ಆಫ್ರಿಕಾ ತಂಡಗಳು ಎದುರಾಗಲಿವೆ. ಬಾಂಗ್ಲಾದೇಶ ತಂಡವನ್ನು ಮಣಿಸಿದ ನಂತರ ಭಾರತ ತಂಡವನ್ನು ಹೊರನೂಕಿ ಸೆಮಿಗೇರಿರುವ ದ.ಆಫ್ರಿಕಾ ತನ್ನ ಮೊದಲ ಕಪ್‌ಗಾಗಿ ಫೈಟ್ ನಡೆಸಲಿದೆ. ಅತ್ತ ಗುಂಪು ಹಂತದಲ್ಲಿ ಪ್ರಬಲ ಪ್ರದರ್ಶನ ನೀಡಿರುವ ಇಂಗ್ಲೆಂಡ್ ಕೂಡ ಸಿದ್ಧವಾಗಿದೆ. ಪಂದ್ಯವು ಭಾರತೀಯ ಕಾಲಮಾನ ಪ್ರಕಾರ ರಾತ್ರಿ 11 ಗಂಟೆಗೆ ಲಾರ್ಡ್ಸ್ ಅಂಗಳದಲ್ಲಿ ನಡೆಯಲಿದೆ.

ಬೆಂಗಳೂರು ಪ್ಲೇಆಫ್ ಹಾದಿ ಸುಗಮ

▸ ವಿಜಯಕುಮಾರ ಬೆಳ್ಳೇರಿಮಠ

• **ಹುಬ್ಬಳ್ಳಿ:** ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡವೂ ಮಹಾರಾಜ ಕ್ರಿಕೆಟ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಹುಬ್ಬಳ್ಳಿ ಟೈಗರ್ಸ್ ತಂಡದ ಎದುರು ರೋಚಕ ಜಯಗಳಿಸಿತು.

ಬುಧವಾರ ನಡೆದ ಪಂದ್ಯದ ಕೊನೆಯ ಬಾಲ್ ಥ್ರಿಲ್ ಪಂದ್ಯದಲ್ಲಿ ಬೆಂಗಳೂರು ತಂಡವೂ 2 ರನ್ ಅಂತರದಿಂದ ಜಯಗಳಿಸಿ, ಗೆಲುವಿನ ಓಟ ಮುಂದುವರಿಸಿತಲ್ಲದೆ ಪ್ಲೇಆಫ್ ಹಾದಿ ಸುಗಮಗೊಳಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು 20 ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 203 ರನ್ ಗಳಿಸಿತು. ರೋಹನ್ ಪಾಟೀಲ್ 64 ರನ್ ಗಳಿಸಿದರು. ಪ್ರವೀಣ್ ದುಬೆ 28 ಬಾಲ್ ಮಾತ್ರದಲ್ಲಿ 51 ರನ್ ಬಾರಿಸಿ ಸ್ಕೋರ್ ಹಿಗ್ಗಿಸಿದರು. ಹುಬ್ಬಳ್ಳಿ ಪರ ವೈಭವ್ 3 ವಿಕೆಟ್ ಕಿತ್ತರು.

ಬೆಂಗಳೂರು ತಂಡ ನೀಡಿದ 204 ರನ್ ಗುರಿ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 201 ರನ್ ಗಳಿಸಲಷ್ಟೇ ಶಕ್ತವಾಯಿತು. ಮನ್ವಂತ್ ಕುಮಾರ (60ರ, 22 ಎ) ಸ್ಫೋಟಕ ಬ್ಯಾಟಿಂಗ್ ಮಾಡಿದರು. ಅನೀಶ್ವರ್ 34, ರಕ್ಷಿತ್ 41 ರನ್ ಗಳಿಸಿದರು. ಬೆಂಗಳೂರು ಪರ ನಿಶ್ಚಿತ್ 3, ಕಾವೇರಪ್ಪ 2 ವಿಕೆಟ್ ಕಿತ್ತರು.



ಮನ್ವಂತ್ ವೇಗದ ಅರ್ಧ ಶತಕ

ಅನೀಶ್ವರ ವಿಕೆಟ್ ಆದ ಬಳಿಕ ಆಗಮಿಸಿದ ಮನ್ವಂತ ಕುಮಾರ ಸ್ಫೋಟಕ ಬ್ಯಾಟಿಂಗ್ ಆಡಿದರು. ಕೇವಲ 17 ಎಸೆತಕ್ಕೆ ಅರ್ಧ ಶತಕ ಪೂರೈಸಿದರು. ಗೆಲುವಿಗೆ ಕೊನೆಯ 12 ಎಸೆತಕ್ಕೆ 44 ರನ್ ಅವಶ್ಯಕತೆ ಇದ್ದಾಗ 19ನೇ ಓವರ್ ನಲ್ಲಿ 2 ಸಿಕ್ಸರ್ ಹಾಗೂ 1 ಬೌಂಡರಿ ಹೊಡೆದು ಭರವಸೆ ಮೂಡಿಸಿದರು. ಆದರೆ ಕೊನೆಯ ಓವರ್ ನಲ್ಲಿ ರನ್ ಗಳಿಸಲು ವಿಫಲರಾದ ಅವರು ನಿಶ್ಚಿತ್ ರಾವ್ ಅವರಿಗೆ ವಿಕೆಟ್ ಒಪ್ಪಿಸಿದರು.


ಸಂಕ್ಷಿಪ್ತ ಸ್ಕೋರ್

ಬೆಂಗಳೂರು: 203/7(20): ರೋಹನ್ 64, ಪ್ರವೀಣ್ 51; ವೈಭವ 38/3.

ಹುಬ್ಬಳ್ಳಿ : 201/7(20): ಮನ್ವಂತ್ 60, ಶಿವಕುಮಾರ 41; ನಿಶ್ಚಿತ್ 27/3

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



6032

ಎಡದಿಂದ ಬಲಕ್ಕೆ

1.ನದಿಗಳೆರಡರ ಜೋಡಣೆ ಜಾಗ (3)
5.ಬಸವಣ್ಣನವರ ಸತ್ಯಶುದ್ಧ ವ್ಯಕ್ತಿ (3)
6.ಕದ ಭದ್ರಪಡಿಸುವ ಕೊಂಡಿ ತಿರುಗಿದೆ (3)
7. ಬೇಟೆ ವೃತ್ತಿಯುಳ್ಳ ಬುಡಕಟ್ಟು ಜನಾಂಗ (3)
9. ರಜೆ ಹಾಕಿರುವ ಅಗಸ ತಿರುಗಿದ್ದಾನೆ (3)
11.ಸತತ ಹತ್ತು ವರ್ಷಗಳ ಅವಧಿ (3)
14.ನೀರು ತುಂಬುವ ದುಂಡನೆಯ ಪಾತ್ರೆ (3)
15.ಭಾರತದ ರಾಷ್ಟ್ರೀಯ ಹೂವು (3)
16.ಸಂತ-ಸಾಧುಗಳ ಸಾಂಪ್ರದಾಯಿಕ ಪಾದರಕ್ಷೆ (3)
17.ಆಯುಧ-ಕೈಯಿಂದ ಹೊಡೆವ ಕ್ರಿಯೆ (3)

ಮೇಲಿನಿಂದ ಕೆಳಕ್ಕೆ

1.ಒಟ್ಟುಗೂಡಿಸುವುದು-ಸಂಗ್ರಹ (4)
2.ಹೂವಿನಿಂದ ಮಕರಂದ ಸಂಗ್ರಹಿಸುವ ಕೀಟ (4)
3.ಅಸುರೀ ಸ್ವಭಾವದ ಎಂಬರ್ಥದ ಶಬ್ದ (4)
4.ಗಂಡನಿಗೆ ಒದಗಿದ ವಿಪತ್ತು (4)
8.ಕಲಾತಪಸ್ವಿ ಎಂಬ ಬಿರುದಿನ ನಟ (3)
10.ಒಂದು ದೇಶ-ಪಂಗಡಕ್ಕೆ ಸೇರಿದ ಜನತೆ (3)
11.ಮಕ್ಕಳಿಲ್ಲದವರು ದಾನವಾಗಿ ಪಡೆದ ಮಗ (4)
12.ಭ್ರಾಂತಿ-ಏನೂ ತಿಳಿಯದಿರುವುದು (4)
13.ಬೆಟ್ಟದಿಂದ ಬೀಳುವ ಧಾರೆ (4)
14.ಸಂಬಂಧವನ್ನು ಉಂಟು ಮಾಡು (4)

6031 ಉತ್ತರ

ಎಡದಿಂದ ಬಲಕ್ಕೆ:
3.ಪೆಟ್ರೋಲಿಯಂ
4.ರೋಚಕ 5.ನಾನಾವಿಧ
6.ರವಿಚಂದ್ರ 8.ಕರಪಾತ್ರ
10.ಅಂದಗಾರ
12.ಜೀವಜಲ
14.ಬೆಲೆಕೊಡು
16.ವರಾಂಡ
17.ಪರಿಮಾಣ

ಮೇಲಿನಿಂದ ಕೆಳಕ್ಕೆ :
1.ಯಮುನಾ 2.ವಿರೋಧ
3.ಪೆಕರ 5.ನಾಸಿಕ
7.ವಿನೋದ 9.ಪಾರಜ
11.ರಗಡು 13.ಲವಣ
14.ಬೆಡಗು 15.ಕೊಡಗು